# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 24 ಗುರುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 98 | ಪುಟಗಳು: 12 + VIII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ಚಾಮರಾಜ ಕ್ಷೇತ್ರ ಜನಪ್ರಿಯ ಶಾಸಕರಾದ
ಕೆ. ಹರೀಶ್‌ಗೌಡ ರವರಿಗೆ
ಜನುಮದಿನದ ಶುಭಾಶಯಗಳು
ಬೃಹತ್ ಉದ್ಯೋಗ ಮೇಳ
ಹಾಗೂ ಬೃಹತ್ ಆರೋಗ್ಯ ಶಿಬಿರ
"ಉಚಿತ ತಪಾಸಣೆ, ಸಮಾಲೋಚನೆ ಮತ್ತು ಮಾರ್ಗದರ್ಶನ"
ದಿನಾಂಕ : 24-07-2025, ಗುರುವಾರ ಸಮಯ: ಬೆಳಿಗ್ಗೆ 9-00 ರಿಂದ
ಸ್ಥಳ : ಜೆ.ಕೆ. ಗ್ರೌಂಡ್, ರೈಲ್ವೆ ಸ್ಟೇಷನ್ ಎದುರು, ಮೈಸೂರು
93437 06416
ಸ್ವಾಗತ ಕೋರುವವರು : ರವಿ ಎಂ.ಎ
ಮಂಚೇಗೌಡನ ಕೊಪ್ಪಲು
ಅಧ್ಯಕ್ಷರು, ಚಾಮರಾಜ ಕ್ಷೇತ್ರ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ, ಮೈಸೂರು ನಗರ

## ನಕ್ಕರೆ ಅದೇ ಸ್ವರ್ಗ

ತಿಮ್ಮ : ತಾಯಿ ಮತ್ತು ಹೆಂಡತಿ ನಡುವಿನ ವ್ಯತ್ಯಾಸವೇನು?

ಗುಂಡ : ತಾಯಿ ಮಾತಾಡೋದನ್ನು ಕಲಿಸ್ತಾಳೆ,
ಹೆಂಡ್ತಿ ಸುಮ್ಮನಿರಲು ಕಲಿಸ್ತಾಳೆ!

ಮೈಸೂರು ಮಿತ್ರ

ಗುರುವಾರ, 24 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ..........

ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ, ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳ್ಳಬೇಡ. – ಸರ್ವಜ್ಞ

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಹುಲಿಯ ಬಣ್ಣವನ್ನು ಮೆಚ್ಚಿ, ನರಿ ತನ್ನ ಕೂದಲನ್ನು ಭಸ್ಮ ಮಾಡಿಕೊಂಡಂತೆ.

## ನಿಮ್ಮ ಪತ್ರಗಳು

### ■ ಬಡವಾದ ಪ್ರಜಾಪ್ರಭುತ್ವ, ರಾಜ್ಯಸಭೆ!

ಮಾನ್ಯರೆ,



ಕಳೆದ 10 ದಿನಗಳ ಹಿಂದಷ್ಟೇ ಸಮಾರಂಭವೊಂದರಲ್ಲಿ 2027ರವರೆಗಿನ ತನ್ನ ಅವಧಿಯನ್ನು ಪೂರೈಸುತ್ತೇನೆ. ದೇವರ ಇಚ್ಛೆ ಇದ್ದರೆ.. ಎಂದು ಹೇಳಿದ್ದ ರಾಜ್ಯಸಭೆಯ ಸಭಾಪತಿಯೂ ಆಗಿದ್ದ ಉಪರಾಷ್ಟ್ರಪತಿ ಜಗದೀಪ್ ಧನಕರ್ 21.7.25ರ ಸೋಮವಾರ ರಾತ್ರಿ ದಿಢೀರ್ ತಮ್ಮ ಸ್ಥಾನಕ್ಕೆ ಅನಾರೋಗ್ಯದ ಕಾರಣ ನೀಡಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ರಾಜೀನಾಮೆ ನೀಡಿದ್ದಾರೆ. ಅದನ್ನು ರಾಷ್ಟ್ರಪತಿಗಳು ಅಂಗೀಕರಿಸಿದ್ದಾರೆ ಕೂಡ.

ಆದರೆ ಧನಕರ್ ರಾಜೀನಾಮೆಗೆ ಕೇಂದ್ರ ಸರ್ಕಾರ ಮತ್ತು ಧನಕರ್ ನಡುವೆ ಹೊಂದಾಣಿಕೆ ಇಲ್ಲದಿದ್ದುದೇ ಕಾರಣ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜ್ಯಸಭೆಯಲ್ಲಿ ಪಹಲ್ಗಾಮ್ ಚರ್ಚೆಗೆ ಒಪ್ಪಿಗೆ ನೀಡಿದ್ದು, ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರದೆ ಇದ್ದುದು ಹಾಗೂ ನ್ಯಾಯಮೂರ್ತಿ ವರ್ಮಾ ಅವರನ್ನು ಪದಚ್ಯುತಿಗೊಳಿಸುವ ತೀರ್ಮಾನಕ್ಕೆ ಕೇಂದ್ರ ಸರ್ಕಾರಕ್ಕೆ ತಿಳಿಸದೆ ಒಪ್ಪಿಗೆ ನೀಡಿದ್ದು ಕಾರಣವೆಂದೂ ಹೇಳಲಾಗುತ್ತಿದೆ. ಇದರಿಂದ ಕೆರಳಿದ ಕೇಂದ್ರ ಸರ್ಕಾರ ಇವರನ್ನು ಪದಚ್ಯುತಗೊಳಿಸಲು ತೀರ್ಮಾನಿಸಿತ್ತು ಎಂದು ತಿಳಿದುಬಂದಿದೆ. ಒಂದೊಮ್ಮೆ ವಿರೋಧ ಪಕ್ಷ ಕಾಂಗ್ರೆಸ್‌ನವರು ಇವರನ್ನು ಪದಚ್ಯುತಗೊಳಿಸಲು ವಿಫಲ ಯತ್ನ ನಡೆಸಿದ್ದರು. ಆದರೆ ಈಗ ಆಡಳಿತ ಪಕ್ಷವೇ ಅಂತಹ ಕೆಲಸ ಮಾಡಿದೆ.

ನಿಜಕ್ಕೂ ಇದು ಸರ್ಕಾರದ ಸರ್ವಾಧಿಕಾರ ಧೋರಣೆಯನ್ನು ಬಿಂಬಿಸಿದೆ. ಇವರನ್ನು ಇಳಿಸಿ ಬಿಹಾರದ ನಿತೀಶ್ ಕುಮಾರ್ ಅವರನ್ನು ಉಪರಾಷ್ಟ್ರಪತಿ ಹುದ್ದೆಗೆ ಕೂರಿಸಿ ಬಿಹಾರದಲ್ಲಿ ಬಿಜೆಪಿ ಮುಖ್ಯಮಂತ್ರಿ ಮಾಡುವ ಹುನ್ನಾರವೂ ಇದೆ ಎಂದು ಹೇಳಲಾಗಿದೆ. ಅದೇನೇ ಇರಲಿ ಧನಕರ್‌ರಂತಹ ನೇರ ನಡೆಯ ವ್ಯಕ್ತಿ ಕಳೆದುಕೊಂಡ, ಪ್ರಜಾಪ್ರಭುತ್ವ ಮತ್ತು ರಾಜ್ಯಸಭೆ ಬಡವಾಗಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ■ ರಸ್ತೆ ರಿಪೇರಿ, ಸೇತುವೆ ಮೇಲ್ದರ್ಜೆಗೇರಿಸಿ

ಮಾನ್ಯರೆ,



ಸರಗೂರು ತಾಲೂಕಿನ ನಂಜೀಪುರ, ಕಲ್ಲಂಬಾಳು, ದಡದಹಳ್ಳಿ, ಕಟ್ಟೆ ಹುಣಸೂರು, ಕುಂದೂರು, ದಡದಹಳ್ಳಿ ಮತ್ತು ಕಡಜೆಟ್ಟಿ ಇತರೆ ಗ್ರಾಮಗಳ ನಡುವೆ ವರ್ಷಪೂರ್ತಿ ಹರಿಯುವ ನುಗು ಹೊಳೆಗೆ ಅಡ್ಡಲಾಗಿ ಕೆಳದರ್ಜೆಯ ಪುಟ್ಟ ಸೇತುವೆ ನಿರ್ಮಿಸಲಾಗಿದ್ದು, ಅಲ್ಪಸ್ವಲ್ಪ ಮಳೆಯಾದರೆ ಸೇತುವೆ ಮೇಲೆಲ್ಲಾ ನೀರು ಹರಿದು ಮುಳುಗಡೆಯಾಗಿ ಅಕ್ಕಪಕ್ಕದಲ್ಲಿರುವ ಜಮೀನುಗಳಿಗೆ ನೀರು ಹರಿದು ಬೆಳೆ ನಷ್ಟವಾಗಿ ಗ್ರಾಮಗಳ ಸಂಪರ್ಕವನ್ನೇ ಕಳೆದುಕೊಳ್ಳುತ್ತದೆ. ಹಲಸೂರು ಕಟ್ಟೆ ಮತ್ತು ನುಗು ಜಲಾಶಯದಿಂದ ಹೊರ ಹರಿವಿನ ನೀರಿನ ಪ್ರಮಾಣವನ್ನು ಹೆಚ್ಚಿಸಿದರೆ ಪ್ರವಾಹದಂತೆ ಹರಿದು ಬರುತ್ತದೆ. ಇದರಿಂದ ಜನರ ಜೀವನವಂತು ಅಸ್ತವ್ಯಸ್ತವಾಗಿ ನರಕಯಾತನೆ ಅನುಭವಿಸಬೇಕಾಗುತ್ತದೆ. ಮಳೆಗಾಲದಲ್ಲಂತೂ ಅನೇಕ ಸಂಕಷ್ಟಗಳನ್ನು ಸಾರ್ವಜನಿಕರು ಎದುರಿಸುತ್ತಾರೆ. ನಡೆದುಕೊಂಡು ಮತ್ತು ವಾಹನಗಳು ತೆರಳಲು ಸಾಧ್ಯವಾಗದೆ ಶಾಪ ಹಾಕುವಂತಾಗಿದೆ. ಅದರಲ್ಲೂ ಈ ಗ್ರಾಮಗಳ ವಿದ್ಯಾರ್ಥಿಗಳು ಹುಲ್ಲಹಳ್ಳಿಯಲ್ಲಿರುವ ಶಾಲೆಗಳಿಗೆ ಶಾಲೆಯ ವಾಹನಗಳ ಮುಖಾಂತರ ವಿದ್ಯಾಭ್ಯಾಸಕ್ಕೆ ತೆರಳುತ್ತಾರೆ. ಪ್ರವಾಹ ಹೆಚ್ಚಾದಾಗ ಶಾಲೆಯ ವಾಹನ ತೆರಳುವುದಿಲ್ಲ. ಇದರಿಂದ ವಿದ್ಯಾರ್ಥಿಗಳ ಪಾಠ, ಪ್ರವಚನಗಳಿಗೆ ತುಂಬಾ ತೊಂದರೆಯಾಗಿದೆ. ಈ ಸಮಸ್ಯೆಯಿಂದ ಶಾಲೆಗಳು ಸಹ ಈ ವಿದ್ಯಾರ್ಥಿಗಳಿಗೆ ರಜೆ ನೀಡುತ್ತವೆ. ಈ ಗ್ರಾಮಗಳಿಗೆಲ್ಲ ಈ ಸೇತುವೆಯು ಸಂಪರ್ಕದ ಕೊಂಡಿಯಾಗಿದ್ದು, ವಿದ್ಯಾರ್ಥಿಗಳು, ವ್ಯಾಪಾರಸ್ಥರು, ಕೂಲಿ ಕಾರ್ಮಿಕರು, ಸಾರ್ವಜನಿಕರು, ವಾಹನ ಸವಾರರು ಹಾಗೂ ರೈತರ ದಿನನಿತ್ಯದ ಕೃಷಿ ಚಟುವಟಿಕೆಗಳಿಗೆ ತುಂಬಾ ಅನಾನುಕೂಲವಾಗಿದೆ. ಈ ಸೇತುವೆ ಸಂಪರ್ಕಕ್ಕೆ ಇರುವ ರಸ್ತೆಗಳು ಕೂಡ ಕೆಸರುಮಯವಾಗಿದ್ದು, ಅದೆಷ್ಟೋ ವಾಹನ ಸವಾರರು ಸರ್ಕಸ್ ಮಾಡಿಕೊಂಡು ಜೀವ ಭಯದಿಂದ ಆಯತಪ್ಪಿ ಬಿದ್ದಿರುವ ಸಾಕಷ್ಟು ಘಟನೆಗಳು ವರದಿಯಾಗಿವೆ. ಅಷ್ಟೇ ಅಲ್ಲದೆ ರೈತರ ಜಾನುವಾರುಗಳು ಕೂಡ ಈ ನೀರಿನ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಪ್ರತಿ ವರ್ಷವೂ ಮಳೆಗಾಲದ ಸಂದರ್ಭದಲ್ಲಿ ಈ ಸಮಸ್ಯೆಯಿಂದ ಜನರು ರೋಸಿ ಹೋಗಿದ್ದಾರೆ. ಈ ಸೇತುವೆಯನ್ನು ಮೇಲ್ದರ್ಜೆಗೇರಿಸಬೇಕೆಂದು, ಎಲ್ಲಾ ಸಮಸ್ಯೆಗಳ ಬಗ್ಗೆ ಪರಿಪರಿಯಾಗಿ ಅನೇಕ ಬಾರಿ ಅಧಿಕಾರಿಗಳು ಮತ್ತು ಜನಪ್ರತಿನಿಧಿ ಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ ಹಾಗೂ ಕ್ಯಾರೆ ಎನ್ನುತ್ತಿಲ್ಲ. ಏನಾದರೂ ಸಬೂಬು ಹೇಳಿ ಸಾಗಹಾಕುತ್ತಿದ್ದಾರೆ. ಈ ಭಾಗದ ಜನರ ಅನೇಕ ವರ್ಷಗಳ ಕನಸು ಬಹುಬೇಗ ನನಸಾಗಲಿ. ಸಂಬಂಧಪಟ್ಟವರು ಕೂಡಲೇ ಸ್ಪಂದಿಸಿ ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

### ■ ಕಾಡಾ ಕಚೇರಿ ದ್ವಾರದ ಗೇಟ್ ಸರಿಪಡಿಸಿ



ಮಾನ್ಯರೆ,

ಮೈಸೂರು ನಗರದ ಕಾಡಾ ಕಚೇರಿಯ ಒಳಗೆ ಹೋಗುವ ದ್ವಾರದ ಸ್ಥಳದಲ್ಲಿ ಅಳವಡಿಸಿದ ಕಬ್ಬಿಣದ ಸಲಾಕೆಯ ಭಾಗಗಳು ಮಳೆ ನೀರಿನಿಂದ ತುಕ್ಕು ಹಿಡಿದು ಹಾಳಾಗಿವೆ. ಇದರ ಮೇಲೆಯೇ ವಾಹನಗಳು ಸಂಚಾರ ಮಾಡಬೇಕು. ದ್ವಿಚಕ್ರ ವಾಹನ ಸವಾರರು ಇದರ ಮೇಲೆ ಹಾದು ಹೋದರೇ ಬೆನ್ನು ಸೊಂಟದ ಬಾಧೆ ಉಚಿತವಾಗಿ ಲಭ್ಯ. ಒಳಗೆ ಹಾಗೂ ಹೊರಗೆ ಹೋಗಲು ಇದೊಂದೇ ದಾರಿಯಲ್ಲಿ ಕ್ರಮಿಸಬೇಕು. ಈ ಕಟ್ಟಡದಲ್ಲಿ ಸಂಸದರು, ವಿಧಾನಪರಿಷತ್ ಸದಸ್ಯರ ಕಚೇರಿ ಹಾಗೂ ಸಹಕಾರ ನಿಬಂಧಕರ ಕಚೇರಿಗಳು ಇವೆ. ನಿತ್ಯ ವಾಹನಗಳ ಸಂಚಾರ ಇದ್ದು, ನಿತ್ಯವೂ ಸಾರ್ವಜನಿಕರು ಹಿಡಿ ಶಾಪ ಹಾಕಿಕೊಂಡು ಹೋಗಬೇಕಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಹಾಳಾಗಿರುವ ಗ್ರಿಲ್ ಪೈಪ್ ದುರಸ್ತಿ ಪಡಿಸಲು ಮನವಿ.

–ಪಡುವಾರಹಳ್ಳಿ ಎಂ ರಾಮಕೃಷ್ಣ



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP

ದಿಕ್ಕುದೆಸೆ

# ಕ್ವಾಡ್ ಒಕ್ಕೂಟದಲ್ಲಿ ಭಾರತದ ಪ್ರಾಬಲ್ಯ; ಚೀನಾಕ್ಕೆ ಚಳಿ

ಅಮೆರಿಕದ ವಾಷಿಂಗ್ಟನ್‌ನಲ್ಲಿ ಜುಲೈ 1ರಂದು ಕ್ವಾಡ್ ರಾಷ್ಟ್ರಗಳ ಶೃಂಗಸಭೆ ನಡೆಯಿತು. ಈ ಸಭೆಯಲ್ಲಿ ಕ್ವಾಡ್ ಸದಸ್ಯ ರಾಷ್ಟ್ರಗಳಾದ ಭಾರತ, ಅಮೇರಿಕಾ, ಆಸ್ಟ್ರೇಲಿಯಾ ಮತ್ತು ಜಪಾನ್ ದೇಶಗಳ ವಿದೇಶಾಂಗ ಸಚಿವರು ಭಾಗವಹಿಸಿದ್ದರು.



> ಇಂಡೋ–ಪೆಸಿಫಿಕ್ ವಲಯದಲ್ಲಿ ಆರ್ಥಿಕ ಅಭಿವೃದ್ಧಿ ಸಾಧಿಸಲು ಹೂಡಿಕೆಗಳಿಗೆ ಉತ್ತೇಜನ ಹಾಗೂ ವ್ಯಾಪಾರವನ್ನು ಹೆಚ್ಚಿಸುವುದು. ಈ ಪ್ರದೇಶದ ದೇಶಗಳ ಸಾಲದ ಹೊರೆ ಕಡಿಮೆ ಮಾಡಲು ಕ್ರಿಯಾ ಯೋಜನೆ ರೂಪಿಸಿ, ಈ ದೇಶಗಳ ಅಭಿವೃದ್ಧಿಗೆ ತೊಡಕಾಗದಂತೆ ಸಾಲದ ರೂಪದಲ್ಲಿ ನೆರವು ನೀಡುವುದು. ವಿವಾದಗಳನ್ನು ಮುಕ್ತ ಹಾಗೂ ಶಾಂತಿಯುತವಾಗಿ ಪರಿಹರಿಸುವುದು. ದೇಶಗಳ ರಾಜಕೀಯ ವ್ಯವಸ್ಥೆಗಳಲ್ಲಿ, ಸರಕಾರಗಳಲ್ಲಿ ಹಸ್ತಕ್ಷೇಪ ಮಾಡದೇ ಅವರಿಗೆ ರಾಜಕೀಯ ವಿಚಾರಗಳಲ್ಲಿ ಸ್ವಯಂ ನಿರ್ಧಾರಗಳಿಗೆ ಅವಕಾಶ ನೀಡುವುದು, ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಮಾನವೀಯ ನೆರವು ಮತ್ತು ಪರಿಹಾರ ನೀಡುವುದು. ಕ್ವಾಡ್ ದೇಶಗಳಲ್ಲಿ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುವುದು, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಂತಹ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸಲು ಕ್ವಾಡ್‌ಟೆಕ್ ನೆಟ್‌ವರ್ಕ್ ಸ್ಥಾಪಿಸಿದೆ.

ಶೃಂಗಸಭೆಯ ಜಂಟಿ ಹೇಳಿಕೆಯಲ್ಲಿ 'ಪಹಲ್ಗಾಮ್' ಭಯೋತ್ಪಾದಕ ದಾಳಿಯನ್ನು ಖಂಡಿಸಿ, ದಾಳಿ ನಡೆಸಿದವರಿಗೆ, ಬೆಂಬಲ ಹಾಗೂ ಹಣಕಾಸು ನೆರವು ನೀಡಿದವರಿಗೆ ಶಿಕ್ಷಿಸುವಂತೆ ಆಗ್ರಹಿಸಲಾಯಿತು.

ಕ್ವಾಡ್ ಎಲ್ಲ ರೀತಿಯ ಪೈಶಾಚಿಕ ಕೃತ್ಯಗಳನ್ನು ಖಂಡಿಸುತ್ತದೆ ಎಂದು ಹೇಳಿಕೆ ನೀಡಿತು. ಈ ದುಷ್ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಗೆ ಒತ್ತಾಯಿಸಿತು. ಆದರೆ ಪಾತಕಿ ಕೃತ್ಯಕ್ಕೆ ಕುಮ್ಮಕ್ಕು ನೀಡಿದ ಪಾಕಿಸ್ತಾನದ ಹೆಸರಾಗಲಿ, ಆ ನಂತರದ ಸಂಘರ್ಷದ ಬಗ್ಗೆ ಉಲ್ಲೇಖಿಸದೇ ಇರುವುದು ಆಶ್ಚರ್ಯ ತಂದಿದೆ.

ಜಗತ್ತಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಅಶಾಂತಿ, ನಡೆಯುತ್ತಿರುವ ಯುದ್ಧಗಳು ಚಿಂತೆಗೆ ಕಾರಣವಾಗಿದೆ. ವಿಶ್ವದ ಅಸ್ತಿತ್ವದ ಮೇಲೆ ಕಾರ್ಮೋಡಗಳು ಆವರಿಸಿವೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಕ್ವಾಡ್ ಆರಂಭವಾಯಿತು. ಕ್ವಾಡ್ ಎಂದು ಕರೆಯಲ್ಪಡುವ ಈ ಶೃಂಗಸಭೆಯ ವಿಸ್ತರಿತ ಹೆಸರು ಕ್ವಾಡ್ರಿ–ಲ್ಯಾಟರಲ್ ಸೆಕ್ಯೂರಿಟಿ ಡೈಲಾಗ್ (ಚತುರ್ಭುಜಿಯ ಭದ್ರತಾ ಸಂವಾದ) ಸಂಕ್ಷಿಪ್ತವಾಗಿ 'ಕ್ವಾಡ್' ನಾಲ್ಕು ರಾಷ್ಟ್ರಗಳು 2004ರಲ್ಲಿ ಹಿಂದೂ ಮಹಾಸಾಗರದಲ್ಲಾದ ಸುನಾಮಿ ಬಳಿಕ ವಿಪತ್ತು ಪರಿಹಾರಕ್ಕಾಗಿ ಜಾಗತಿಕ ಮಟ್ಟದ ವೇದಿಕೆ ಸೃಷ್ಟಿಸುವ ಕುರಿತು ಚಿಂತನೆ ನಡೆಸಲು ಅನೌಪಚಾರಿಕ ಮೈತ್ರಿಯೊಂದನ್ನು ರಚಿಸಿದವು. 2007ಯಲ್ಲಿ ಜಪಾನ್ ಪ್ರಧಾನಿಯಾಗಿದ್ದ ಶಿಂಜೋ ಅಬೆ ಈ ಮೈತ್ರಿಯನ್ನು ಚತುರ್ಭುಜಿಯ ಭದ್ರತಾ ಸಂವಾದ ಅಥವಾ ಕ್ವಾಡ್ ಶೃಂಗವೆಂದು ಅಧಿಕೃತಗೊಳಿಸಿದರು.

### ಕ್ವಾಡ್ ಉದ್ದೇಶಗಳು

ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸ್ಥಿರತೆ ಕಾಪಾಡುವ ಮೂಲಕ ಸಮೃದ್ಧಿಯನ್ನು ಸಾಧಿಸುವುದು. ಈ ಪ್ರದೇಶದಲ್ಲಿನ ಪ್ರಮುಖ ಸಮುದ್ರ ಮಾರ್ಗಗಳನ್ನು ಯಾವುದೇ ದೇಶದ ಪ್ರಭಾವದಿಂದ ಮುಕ್ತವಾಗಿರಿಸುವುದು. ವಿಶೇಷವಾಗಿ ಪೂರ್ವ ಚೀನಾ ಸಮುದ್ರದಲ್ಲಿ ಸೇನಾ ಪ್ರಾಬಲ್ಯ ಸಾಧಿಸುವ ಚೀನಾದ ಯತ್ನಗಳನ್ನು ಕ್ವಾಡ್ ವಿರೋಧಿಸಿದೆ. ಈ ವಲಯದಲ್ಲಿ ಏಕಪಕ್ಷೀಯ ಹಾಗೂ ಬಲವಂತದ ಬದಲಾವಣೆ ತರದಂತೆ ತಡೆಯುವುದು. ಸಮುದ್ರ ವಿವಾದಗಳನ್ನು ಅಂತರರಾಷ್ಟ್ರೀಯ ಕಾನೂನಿಗನುಗುಣವಾಗಿ, ಶಾಂತಿಯುತವಾಗಿ ಪರಿಹರಿಸುವಂತೆ ಚೀನಾಕ್ಕೆ ಸೂಚಿಸಿದೆ.

ಈ ಮಾರ್ಗಗಳಲ್ಲಿ ಕಡಲ್ಗಳ್ಳತನ ತಡೆಗಟ್ಟಿ ಹಡಗುಗಳಿಗೆ ಸುರಕ್ಷೆಯ ಖಾತ್ರಿಗೊಳಿಸುವುದು, ಹವಾಮಾನ ಬದಲಾವಣೆಯ ಅಪಾಯಗಳನ್ನು ನಿವಾರಿಸುವುದು ಹಾಗೂ ಸಮಗ್ರ ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುವುದು. ಕ್ವಾಡ್ ವಲಯದಲ್ಲಿ ಬರುವ ದೇಶಗಳಿಗೆ ಮೂಲಸೌಕರ್ಯಗಳನ್ನು ಪಡೆದು ಅಭಿವೃದ್ಧಿ ಸಾಧಿಸಲು ಸಹಕರಿಸುವುದು. ಅಂತಾರಾಷ್ಟ್ರೀಯ ವ್ಯವಸ್ಥೆಗಳನ್ನು ನ್ಯಾಯ ಮತ್ತು ನಿಯಮಾಧಾರಿತವಾಗಿ ಬೆಂಬಲಿಸುವುದು. ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಯೋಗ ಮತ್ತು ಹೊಸ ಆವಿಷ್ಕಾರ, ಅನ್ವೇಷಣೆಗಳಿಗೆ ಉತ್ತೇಜನ ನೀಡುವುದು, ಪ್ರಾದೇಶಿಕ ಭದ್ರತೆ ಮತ್ತು ಸ್ಥಿರತೆಗಾಗಿ ಕ್ವಾಡ್ ಸದಸ್ಯ ದೇಶಗಳು ಪರಸ್ಪರ ಮಾಹಿತಿ ಹಂಚಿಕೆ ಮತ್ತು ಸಹಕಾರದೊಂದಿಗೆ ಸಂಘಟಿತವಾಗಿ ಕೆಲಸಗಳನ್ನು ಮಾಡುವುದು.

ಇಂಡೋ–ಪೆಸಿಫಿಕ್ ವಲಯದಲ್ಲಿ ಆರ್ಥಿಕ ಅಭಿವೃದ್ಧಿ ಸಾಧಿಸಲು ಹೂಡಿಕೆಗಳಿಗೆ ಉತ್ತೇಜನ ಹಾಗೂ ವ್ಯಾಪಾರವನ್ನು ಹೆಚ್ಚಿಸುವುದು. ಈ ಪ್ರದೇಶದ ದೇಶಗಳ ಸಾಲದ ಹೊರೆ ಕಡಿಮೆ ಮಾಡಲು ಕ್ರಿಯಾ ಯೋಜನೆ ರೂಪಿಸಿ, ಈ ದೇಶಗಳ ಅಭಿವೃದ್ಧಿಗೆ ತೊಡಕಾಗದಂತೆ ಸಾಲದ ರೂಪದಲ್ಲಿ ನೆರವು ನೀಡುವುದು. ವಿವಾದಗಳನ್ನು ಮುಕ್ತ ಹಾಗೂ ಶಾಂತಿಯುತವಾಗಿ ಪರಿಹರಿಸುವುದು. ದೇಶಗಳ ರಾಜಕೀಯ ವ್ಯವಸ್ಥೆಗಳಲ್ಲಿ, ಸರಕಾರಗಳಲ್ಲಿ ಹಸ್ತಕ್ಷೇಪ ಮಾಡದೇ ಅವರಿಗೆ ರಾಜಕೀಯ ವಿಚಾರಗಳಲ್ಲಿ ಸ್ವಯಂ ನಿರ್ಧಾರಗಳಿಗೆ ಅವಕಾಶ ನೀಡುವುದು, ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಮಾನವೀಯ ನೆರವು ಮತ್ತು ಪರಿಹಾರ ನೀಡುವುದು. ಕ್ವಾಡ್ ದೇಶಗಳಲ್ಲಿ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುವುದು, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಂತಹ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸಲು ಕ್ವಾಡ್‌ಟೆಕ್ ನೆಟ್‌ವರ್ಕ್ ಸ್ಥಾಪಿಸಿದೆ.

ಕ್ವಾಡ್ 2000ರ ದಶಕದ ಮಧ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂದರೂ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಸಕ್ರಿಯವಾಗಿದೆ. ಇದೊಂದು ಸಾಂಪ್ರದಾಯಿಕ ಭದ್ರತಾ ಮೈತ್ರಿಯಲ್ಲ. ಇದು ವಿಶಾಲವಾದ, ಉದಾರವಾದಿ ಪರಿಕಲ್ಪನೆಯಾಗಿದೆ. ಕಾರ್ಯ ಚಟುವಟಿಕೆಗಳನ್ನು ಗಮನಿಸಿದಲ್ಲಿ ಇಂಡೊ–ಪೆಸಿಫಿಕ್ ವಲಯದಲ್ಲಿ ಚೀನಾ ವಿಸ್ತರಣಾವಾದಕ್ಕೆ ಪ್ರತಿಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಬಂಧಗಳನ್ನು ಬೆಸೆಯುವ ಉದಾರ ಮನೋಭಾವನೆಯ ರಕ್ಷಕನಂತಹ ಭೂಮಿಕೆಯನ್ನು ನಿರ್ವಹಿಸುವ ಉದ್ದೇಶ ಹೊಂದಿದೆ. ಸಮಗ್ರವಾಗಿ ಕ್ವಾಡ್ ಕೇವಲ ರಾಜತಾಂತ್ರಿಕ ಲೆಕ್ಕಾಚಾರವಲ್ಲ. ಇದು ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಸಾಮೂಹಿಕ ಉದಾತ್ತ ಏಕರೂಪಿಯ ವ್ಯವಸ್ಥೆಯನ್ನು ರೂಪಿಸುವ ಉದ್ದೇಶ ಹೊಂದಿದೆ.

### ಭಾರತದ ದೃಷ್ಟಿಯಲ್ಲಿ ಕ್ವಾಡ್

ಅಮೆರಿಕವು ನಿರಂತರವಾಗಿ ನಡೆಸುತ್ತಿದ್ದ ಒಳ ಪಿತೂರಿಗಳಿಂದಾಗಿ ಭಾರತ–ಅಮೇರಿಕ ಮಧ್ಯೆ ಕೇವಲ ತೋರಿಕೆಯ ಸಂಬಂಧವಿತ್ತು. ಜಮ್ಮು–ಕಾಶ್ಮೀರ ಸಮಸ್ಯೆ ಮತ್ತು ಭಾರತದ ಪರಮಾಣು ಕಾರ್ಯಕ್ರಮಗಳಿಗೆ ಅಮೇರಿಕದ ಧೋರಣೆ ಭಾರತದ ವಿರುದ್ಧವಾಗಿತ್ತು. ಏಷ್ಯಾ ಉಪಖಂಡದಲ್ಲಿ ಚೀನಾ ಪ್ರಾಬಲ್ಯ ಹಾಗೂ ಆಕ್ರಮಣಕಾರಿ ನೀತಿಯನ್ನು ಗಮನಿಸಿದ ನಂತರ ಅಮೇರಿಕವು ಭಾರತಕ್ಕೆ ಮುಖ್ಯವಾಯಿತು. ಕ್ವಾಡ್ ಸೃಷ್ಟಿಗೆ ಇದು ಒಂದು ಕಾರಣವಾಯಿತು. ಶತ್ರುವಿನ ಶತ್ರುವನ್ನು, ಭಾರತವು ಮಿತ್ರನೆಂದು ಪರಿಗಣಿಸಿತು.

ಭಾರತದ ಸರಹದ್ದಿನ ಸಾರ್ವಭೌಮತ್ವಕ್ಕೆ ಸವಾಲಾಗಿರುವ ಹಾಗೂ ಉಪಖಂಡದಲ್ಲೂ ಭಾರತ ಪ್ರಾಮುಖ್ಯತೆ ಗಳಿಸುವುದಕ್ಕೆ ಅಡ್ಡಿಯಾಗಿರುವ ಚೀನಾದ ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್‌ಗೆ ಕ್ವಾಡ್ ಮೂಲಕ ಪರ್ಯಾಯವನ್ನು ನೀಡುವ ಅವಕಾಶವಿದೆಯೆಂದು ಭಾರತ ಗ್ರಹಿಸಿತು. ಕ್ವಾಡ್ ಮೂಲಕ ನಿಯಮಾಧಾರಿತ ವ್ಯವಸ್ಥೆಯನ್ನು ರೂಪಿಸಿ, ಇಂಡೊ–ಪೆಸಿಫಿಕ್ ವಲಯದಲ್ಲಿ ಚೀನಾದ ಪ್ರಭಾವವನ್ನು ನಿಯಂತ್ರಿಸುವ ವಿಶ್ವಾಸ ಹೊಂದಿದೆ. ಕ್ವಾಡ್ ದೇಶಗಳ ಮಧ್ಯೆ ಆರ್ಥಿಕ ಸಹಕಾರ ವೃದ್ಧಿಯಿಂದ ವಾಣಿಜ್ಯ, ವ್ಯಾಪಾರ, ಹೂಡಿಕೆ ಮತ್ತು ತಂತ್ರಜ್ಞಾನದಲ್ಲಿ ಸಹಯೋಗ ಸಾಧಿಸುವ ಅವಕಾಶಗಳನ್ನು ಭಾರತ ಗುರುತಿಸಿದೆ. ಕ್ವಾಡ್ ಸದಸ್ಯ ದೇಶಗಳಾದ, ಆರ್ಥಿಕ ಮತ್ತು ಮಿಲಿಟರಿ ಶಕ್ತಿಯಾಗಿರುವ ಅಮೆರಿಕ, ಅತ್ಯಾಧುನಿಕ ತಂತ್ರಜ್ಞಾನಗಳ ದೇಶ ಜಪಾನ್ ಮತ್ತು ಭಾರಿ ಪ್ರಮಾಣದಲ್ಲಿ ಯುರೇನಿಯಂ ಮತ್ತು ಪ್ರಾಕೃತಿಕ ಸಂಪನ್ಮೂಲ ಹೊಂದಿರುವ ಆಸ್ಟ್ರೇಲಿಯಾ ದೇಶಗಳಿಂದ ಭಾರಿ ಪ್ರಮಾಣದಲ್ಲಿ ಮಾನವ ಸಂಪನ್ಮೂಲ ಹೊಂದಿರುವ ತನಗೆ ಲಾಭವಾಗುವುದೆಂದು ಭಾರತ ಭಾವಿಸಿದೆ. ಕ್ವಾಡ್‌ನ ಇತ್ತೀಚಿನ ಉಪಕ್ರಮಗಳು ಭದ್ರತೆಯನ್ನು ಮೀರಿ ವ್ಯಾಪಿಸುತ್ತಿದೆ. ಆರೋಗ್ಯ, ಮೂಲಸೌಕರ್ಯ ಅಭಿವೃದ್ಧಿ, ಆಧುನಿಕ ತಂತ್ರಜ್ಞಾನಗಳ ಅನ್ವೇಷಣೆಯ ಮೂಲಕ ಇಂಡೊ–ಪೆಸಿಫಿಕ್ ಪ್ರದೇಶವನ್ನು ಸಮೃದ್ಧಗೊಳಿಸುವ ವಿಶ್ವಾಸ ಭಾರತಕ್ಕಿದೆ. ಕ್ವಾಡ್ ಮೈತ್ರಿಯಲ್ಲಿ ಭಾರತಕ್ಕೆ ತನ್ನ ಅಪೇಕ್ಷೆಯ ದೇಶಗಳೊಂದಿಗೆ ಮೈತ್ರಿ ಸಾಧಿಸಲು ಸಹಕಾರ ರೂಪಿಸಲು, ಬಾಂಧವ್ಯ ಬಲಗೊಳಿಸಲು ವಿಫುಲ ಅವಕಾಶವಿದೆ. ಇದು ಭಾರತ ಎಂದು ಯಾರದೇ ಮುಲಾಜಿಲ್ಲದೆ ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿರುವುದನ್ನು ಸೂಚಿಸುತ್ತದೆ.

### ಕ್ವಾಡ್ ಬಗ್ಗೆ ಜಾಗತಿಕ ಅಭಿಪ್ರಾಯಗಳು

ಕ್ವಾಡ್ ಬಗ್ಗೆ ಜಗತ್ತು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದೆ. ಅಮೆರಿಕ ನೇತೃತ್ವದ ನ್ಯಾಟೊ (NATO) ದಂತೆ ಕ್ವಾಡ್ ಕೂಡ ಆಕ್ರಮಣಕಾರಿ ಮತ್ತು ವಂಚನೆಯ ನೀತಿಯನ್ನು ಹೊಂದಿರುವ ಏಷ್ಯನ್ ನ್ಯಾಟೋ ಎಂದು ಹಿಂದೊಮ್ಮೆ ರಷ್ಯಾ ಕಟುವಾಗಿ ಟೀಕಿಸಿತ್ತು. ಆದರೆ ಈ ಕೂಟದಲ್ಲಿರುವ ಭಾರತವನ್ನು ಅತ್ಯಾಪ್ತ ಮತ್ತು ವಿಶ್ವಾಸಾರ್ಹ ದೇಶವೆಂದು ಪರಿಗಣಿಸಿದೆ. ಭಾರತದ ವೈರಿಯಾಗಿರುವ ಚೀನಾವು ಈ ಗುಂಪನ್ನು ಶೀತಲ ಸಮರದ ಮನಸ್ಥಿತಿಯನ್ನು ಪ್ರತಿಬಿಂಬಿಸುವ ಮತ್ತು ಏಷ್ಯಾ–ಪೆಸಿಫಿಕ್ ವಲಯದಲ್ಲಿ ರಾಜಕೀಯ ಸ್ಪರ್ಧೆಯನ್ನು ಕೆರಳಿಸಿ ಯುದ್ಧದ ಸ್ಥಿತಿ ಸೃಷ್ಟಿಸುವ ಇಂಡೊ–ಪೆಸಿಫಿಕ್ ನ್ಯಾಟೊ ಎಂದು ಟೀಕಿಸಿದೆ. ಕ್ವಾಡ್ ಸಂವಾದಗಳು, ನಿರ್ಣಯಗಳು ತನ್ನನ್ನು ಹಣಿಯುವ ತಂತ್ರವೆಂದು ಚೀನಾ ಭಾವಿಸಿದೆ.

### ಕ್ವಾಡ್‌ನ ಮಿತಿಗಳು

ಕ್ವಾಡ್ ವಿಶ್ವಸಂಸ್ಥೆಯಂತೆ ಸಾಂಸ್ಥಿಕ ರಚನೆಯನ್ನು ಹೊಂದಿರದೆ ಕೇವಲ ಸಂವಾದಕ್ಕೆ ಸೀಮಿತವಾದ ಗುಂಪಾಗಿ ಕಾರ್ಯನಿರ್ವಹಿಸುತ್ತಿದೆ. ಭಾರತ, ಅಮೆರಿಕ, ಜಪಾನ್‌ನೊಂದಿಗೆ ಮಧುರ ಬಾಂಧವ್ಯ ಹೊಂದಿರದ ಚೀನಾದೊಂದಿಗೆ ವಿಶ್ವಾಸ ಗಳಿಸುವುದು ಕ್ವಾಡ್‌ಗೆ ಸವಾಲಿನ ಸಂಗತಿಯಾಗಿದೆ. ಕ್ವಾಡ್‌ನ ಪ್ರತಿಯೊಂದು ಸಂವಾದವೂ ತನ್ನ ವಿರುದ್ಧ ಎಂದು ಚೀನಾ ಭಾವಿಸಿ, ಕ್ವಾಡ್ ಅನ್ನು ಶೀತಲ ಸಮರದ ಹೊಸ ರೂಪವೆಂದು ಆರೋಪಿಸುತ್ತಿದೆ. ಚೀನಾ ಎಲ್ಲ ರೀತಿಯಲ್ಲೂ ಕ್ವಾಡ್ ಅನ್ನು ದುರ್ಬಲಗೊಳಿಸುವ ಯತ್ನದಲ್ಲಿದೆ. 2021ರಲ್ಲಿ ಬಾಂಗ್ಲಾದೇಶಕ್ಕೆ ಚೀನಾ ರಾಯಭಾರಿಯಾಗಿದ್ದ ಲಿ ಜಿಮ್ಮಿಂಗ್‌ರು ಬಾಂಗ್ಲಾದೇಶಕ್ಕೆ, ಕ್ವಾಡ್ ಸೇರದಂತೆ ಎಚ್ಚರಿಕೆ ನೀಡಿದರು. ಆದ್ದರಿಂದ ಚೀನಾದ ವಿಶ್ವಾಸಕ್ಕೆ ಚ್ಯುತಿಯಾಗದಂತೆ ಕಾರ್ಯನಿರ್ವಹಿಸುವುದು ಕ್ವಾಡ್ ದೇಶಗಳಿಗೆ ಸವಾಲಿನ ಸಂಗತಿಯಾಗಿದೆ.

### ಕ್ವಾಡ್‌ನ ನಿಯಮಿತ ಸಭೆಗಳು

ಮಾರ್ಚ್ 2021ರಿಂದ ಕ್ವಾಡ್ ಸದಸ್ಯ ರಾಷ್ಟ್ರಗಳ ನಾಯಕರು ನಿಯಮಿತವಾಗಿ ಆನ್‌ಲೈನ್ ಅಥವಾ ವೈಯಕ್ತಿಕವಾಗಿ ಶೃಂಗಸಭೆಗಳನ್ನು ಆಯೋಜಿಸುತ್ತಿದ್ದಾರೆ. ಜನವರಿ 21, 2025 ರಂದು ನಡೆದ ಕ್ವಾಡ್ ವಿದೇಶಾಂಗ ಸಭೆಯ ನಂತರ ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಇಂಡೋ–ಪೆಸಿಫಿಕ್ ವಲಯವನ್ನು ಮುಕ್ತವಾಗಿರಿಸುವುದು, ಯಾವುದೇ ರೀತಿಯಲ್ಲೂ ಬಲವಂತದ ಮೂಲಕ ಈ ಪ್ರದೇಶದ ಯಥಾಸ್ಥಿತಿಯನ್ನು ಬದಲಾಯಿಸುವ ಏಕಪಕ್ಷೀಯ ಕ್ರಮಗಳಿಗೆ ವಿರೋಧವನ್ನು ದೃಢಪಡಿಸಿತು.

### ಇಂಡೋ–ಪೆಸಿಫಿಕ್ ಮಹತ್ವ

1991ರಲ್ಲಿ ಭಾರತದ ಆರ್ಥಿಕ ಉದಾರೀಕರಣದ ನಂತರ ಅಮೆರಿಕದ ಮಿಲಿಟರಿ ಅಧಿಕಾರಿ ಕೌಡ್ ಸಿ ಕಿಕ್ ಲೈಟರ್ ಸೇನಾ ಸಹಕಾರದ ಪ್ರಸ್ತಾವನೆಯಿಂದ ಭಾರತ–ಅಮೇರಿಕ ಮಧ್ಯೆ ಮಿಲಿಟರಿ ಸಹಕಾರ ವಿಸ್ತರಿಸಿತು. 2001ರಲ್ಲಿ ಅಮೇರಿಕನ್ ಸೇನೆಯ ಅಫ್ಘಾನ್ ಕಾರ್ಯಾಚರಣೆ ಸಂದರ್ಭದಲ್ಲಿ ಭಾರತವು ತನ್ನ ದೇಶದಲ್ಲಿ ಅಮೆರಿಕಕ್ಕೆ ಮಿಲಿಟರಿ ಸೌಲಭ್ಯಗಳನ್ನು ನೀಡಿತು. ಇದರ ಮುಂದುವರಿದ ಭಾಗವಾಗಿ 2005ರಲ್ಲಿ ಭಾರತ–ಅಮೇರಿಕ ರಕ್ಷಣೆಗಾಗಿ ಹೊಸ ಒಪ್ಪಂದಕ್ಕೆ ಸಹಿ ಹಾಕಿದವು. ಕ್ವಾಡ್ ಅಭಿವೃದ್ಧಿಯ ಮೊದಲು ಭಾರತ–ಅಮೆರಿಕ ನಂತರದಲ್ಲಿ ಅನೇಕ ಜಂಟಿ ಮಿಲಿಟರಿ ಸಮರಾಭ್ಯಾಸ ನಡೆಸಿದವು. ಇದನ್ನು ಚೀನಾವನ್ನು ನಿಯಂತ್ರಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಯಿತು. 2002ರಲ್ಲಿ ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್ ಸೇರಿ ತ್ರಿಪಕ್ಷೀಯ ಕಾರ್ಯತಂತ್ರದ ಸಂವಾದ ರಚಿಸಿದವು. 2005ರಲ್ಲಿ ಭಯೋತ್ಪಾದನೆ ಮತ್ತು ಪರಮಾಣು ಪ್ರಸರಣ ವಿರುದ್ಧದ ತನ್ನ ಹೋರಾಟಕ್ಕೆ ಅಮೆರಿಕವು ಪ್ರಾದೇಶಿಕ ಮಿತ್ರರ ಸಹಾಯ ನಿರೀಕ್ಷಿಸಿತು. 2007ರಲ್ಲಿ ಜಪಾನ್ ಪ್ರಧಾನಿ ಅಬೆಯವರ ಕ್ವಾಡ್ ಪರಿಕಲ್ಪನೆಯಲ್ಲಿ ಭಾರತವು ಸೇರಿತು.

ಆರಂಭದಲ್ಲಿ ಏಷ್ಯಾ–ಪೆಸಿಫಿಕ್ ಎಂದು ಕರೆಯುತ್ತಿದ್ದ ಕ್ವಾಡ್ ಸದಸ್ಯರು ಕ್ರಮೇಣ ಈ ಗುಂಪನ್ನು ಇಂಡೋ–ಪೆಸಿಫಿಕ್ ಎಂದು ಮರು ವ್ಯಾಖ್ಯಾನಿಸುವುದರೊಂದಿಗೆ ಭಾರತದ ಮಹತ್ವಕ್ಕೆ ಮಾನ್ಯತೆ ನೀಡಿದರು. ಏಷ್ಯಾ, ಮಧ್ಯ ಪ್ರಾಚ್ಯ ಮತ್ತು ಆಫ್ರಿಕಾದಲ್ಲಿ ಚೀನಾದ ಪ್ರಾಬಲ್ಯವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವಲ್ಲಿ ಹಾಗೂ ಈ ಪ್ರದೇಶದ ದೇಶಗಳೊಂದಿಗೆ ಸಂಬಂಧಗಳನ್ನು ಗಾಢವಾಗಿಸಲು ಈ ಮರು ವ್ಯಾಖ್ಯಾನ ಮಹತ್ವ ಪಡೆದಿವೆ. ಇಂಡೊ–ಪೆಸಿಫಿಕ್ ಕ್ವಾಡ್ ಸದಸ್ಯರಿಗಷ್ಟೆ ಅಲ್ಲ ಇತ್ತೀಚೆಗೆ ಆಸಿಯಾನ್ ದೇಶಗಳು, ಇಯು, ಬ್ರಿಟನ್, ಫ್ರಾನ್ಸ್, ಜರ್ಮನ್ ಮೊದಲಾದ ದೇಶಗಳ ರಾಜಕೀಯ ಮತ್ತು ಕಾರ್ಯತಂತ್ರದ ಚಿಂತನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕ್ವಾಡ್ ದೇಶಗಳು ಈ ಸಂವಾದ ಚೀನಾವನ್ನು ವಿರೋಧಿಸುವ ಅಥವಾ ನಿಯಂತ್ರಿಸುವ ಗುಂಪಲ್ಲ ಎಂದು ಪ್ರತಿಪಾದಿಸುತ್ತಿದೆ. ಆದರೂ ಚೀನಾ ಮಾತ್ರ ಈ ಗುಂಪಿನಿಂದ ಆತಂಕಗೊಂಡಿದೆ. ಬಾಂಗ್ಲಾದೇಶಕ್ಕೆ ಚೀನಿ ರಾಯಭಾರಿಯಾಗಿದ್ದ ಲಿ ಜಿಮ್ಮಿಂಗ್‌ರು ಕ್ವಾಡ್ ಅನ್ನು 'ಚೀನಾ ಪುನರುತ್ಥಾನದ ವಿರುದ್ಧ ಗುರಿಯನ್ನು ಹೊಂದಿರುವ ಮಿಲಿಟರಿ ಮೈತ್ರಿ' ಎಂದು ಬಣ್ಣಿಸಿದ್ದರು.

### ಭಾರತ ಕೇಂದ್ರಿತವಾಗುತ್ತಿರುವ ಕ್ವಾಡ್

ಏಷ್ಯಾ ಉಪಖಂಡದಲ್ಲಿ ಅಮೆರಿಕದ ಉಪಸ್ಥಿತಿಗೆ ಒತ್ತು ಕೊಡುವ ಸಂವಾದ ವೇದಿಕೆಯಾಗಿ ಕ್ವಾಡ್ ಪ್ರಾರಂಭಗೊಂಡಿತು.

ಪ್ರಸ್ತುತ ಭಾರತ ಕೇಂದ್ರಿತವಾಗಿ ಬದಲಾಗಿದೆ. ಕ್ವಾಡ್‌ನಲ್ಲಿಂದು ಪ್ರತಿಯೊಂದು ಸಂವಾದವು ಭಾರತದ ಮಹತ್ವವನ್ನು ಸಾರುತ್ತಿದೆ. ಪಹಲ್ಗಾಮ್ ಕೃತ್ಯದ ನಂತರ ನಡೆದ ಸಂವಾದದಲ್ಲಿ, ಶೃಂಗಸಭೆಯ ಅಂತ್ಯದಲ್ಲಾದ ಜಂಟಿ ಘೋಷಣೆಯಲ್ಲಿ ಜಾಗತಿಕವಾಗಿ ನಡೆಯುತ್ತಿರುವ ಭಯೋತ್ಪಾದಕ ಕೃತ್ಯಗಳನ್ನು ಖಂಡಿಸಲಾಯಿತು. ಅದೇ ರೀತಿ ಯಾವುದೇ ದೇಶವನ್ನು ಹೆಸರಿಸದೇ ಭಯೋತ್ಪಾದನೆಗೆ ಎಲ್ಲ ರೀತಿಯ ಬೆಂಬಲ ನೀಡುವ ಮತ್ತು ಭಯೋತ್ಪಾದನೆಯನ್ನು ವಿದೇಶಾಂಗ ನೀತಿಯಾಗಿ ಮಾಡಿಕೊಂಡಿರುವ ದೇಶಗಳನ್ನು ತರಾಟೆಗೆ ತೆಗೆದುಕೊಳ್ಳಲಾಯಿತು. ಭಾರತದ ಆಗ್ರಹದಿಂದ ಭಯೋತ್ಪಾದನೆಯ ವಿರುದ್ಧ ಕ್ವಾಡ್ ದೇಶಗಳ ಸಂಘಟಿತ ನಿರ್ಣಯವು ಹಿಂದಿನ ಪ್ರತಿ–ಕ್ರಿಯಾತ್ಮಕ ನಿಲುವಿನಿಂದ ಕ್ರಿಯಾತ್ಮಕ ಕಾರ್ಯತಂತ್ರಕ್ಕೆ ಬದಲಾಗಿರುವುದರ ಸಂಕೇತ ನೀಡಿದೆ. ಭಯೋತ್ಪಾದನೆಯ ಬಲಿಪಶುವಾಗಿರುವ ಭಾರತವು ಕ್ವಾಡ್ ಸಂವಾದದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ನೈತಿಕ ಅಧಿಕಾರ ಮತ್ತು ವ್ಯೂಹಾತ್ಮಕ ಅವಶ್ಯಕತೆಯನ್ನು ಮುನ್ನೆಲೆಗೆ ತರುವಲ್ಲಿ ಯಶಸ್ವಿಯಾಗಿದೆ. ರಾಜಕೀಯ ಆಶ್ರಯದಲ್ಲಿ ಡಿಜಿಟಲ್ ವೇದಿಕೆಗಳನ್ನು ಮತಾಂಧಗೊಳಿಸುವ ಜಾಲತಾಣಗಳನ್ನು ಪ್ರತಿರೋಧಿಸುವ ಅಗತ್ಯವನ್ನು ಮನಗಾಣಿಸಿತು.

### ಕ್ವಾಡ್‌ನಲ್ಲಿ ಭಾರತದ ಪ್ರಾಬಲ್ಯ

ಭಾರತೀಯ ರಾಜಕೀಯ ವಿಮರ್ಶಕರಾದ ಬ್ರಹ್ಮನ್ ಚೆಲ್ಲನಿಯವರು ನಾಲ್ಕು ದೇಶಗಳ ನಡುವಿನ ಪಾಲುದಾರಿಕೆಯನ್ನು ಏಷ್ಯಾದಲ್ಲಿ ಹೊಸದಾದ ಮಹಾ ಆಟದ ಭಾಗವೆಂದು ಉಲ್ಲೇಖಿಸಿದ್ದಾರೆ. ಈ ಮಹಾ ಆಟದಲ್ಲಿ ಭಾರತವೇ ಪ್ರಧಾನ ಆಟಗಾರನ ಹೊಣೆಗಾರಿಕೆ ಪಡೆದಿದೆ. ಕ್ವಾಡ್ ಬಗ್ಗೆ ದಿ 24–05–2022ರಂದು ಪ್ರಧಾನಿ ಮೋದಿಯವರು ತಮ್ಮ ಹೇಳಿಕೆಯಲ್ಲಿ ಕ್ವಾಡ್ ವಿಶ್ವ ವೇದಿಕೆಯಲ್ಲಿ ಮಹತ್ವದ ಸ್ಥಾನ ಗಳಿಸಿದೆ ಮತ್ತು ಇಂಡೊ– ಪೆಸಿಫಿಕ್ ಪ್ರದೇಶಕ್ಕೆ ಉತ್ತಮ ಉದ್ದೇಶಗಳಿಗಾಗಿ ಶಕ್ತಿಯಾಗಿ ರೂಪುಗೊಂಡಿದೆಯೆಂದು ಹೇಳಿಕೆ ನೀಡಿದ್ದರು.

# ನಿಜವಾದ ಕನ್ನಡತನ ಉಳಿದಿರುವುದೇ ಶರಣ ಸಾಹಿತ್ಯದಲ್ಲಿ

## ಪ್ರೊ. ಮೈಸೂರು ಕೃಷ್ಣಮೂರ್ತಿ ಅಭಿಮತ

ಮೈಸೂರು, ಜು. 23– ದತ್ತಿ ಕಾರ್ಯಕ್ರಮದಲ್ಲಿ ವಚನ ಸಾಹಿತ್ಯ ಕನ್ನಡ ಮತ್ತು ಕರ್ನಾಟಕದ ಅಸ್ಮಿತೆಯಾಗಿದೆ. ಪ್ರಪಂಚಕ್ಕೆ ಬೇಕಾದ ಜ್ಞಾನವೆಲ್ಲವೂ 12ನೇ ಶತಮಾನದ ವಚನ ಸಾಹಿತ್ಯದಲ್ಲಿದೆ ಎಂದು ಕೆ ಆರ್ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ.ಮೈಸೂರು ಕೃಷ್ಣಮೂರ್ತಿ ತಿಳಿಸಿದರು.

ಬುಧವಾರ ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಮೈಸೂರು ನಗರ ಘಟಕದ ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಅವರ ಜಯಂತಿ ಪ್ರಯುಕ್ತ ಕಾಲೇಜಿನಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಳಕಟ್ಟಿಯವರು ಕೈಗೊಂಡ ಸಂಶೋಧನಾ ಕಾರ್ಯವನ್ನು 'ವಚನ ಚೈತ್ರಯಾತ್ರೆ' ಎಂದರೂ ತಪ್ಪಲ್ಲ. ಹೊಟ್ಟೆಬಟ್ಟೆ ಕಟ್ಟಿ ವಚನ ಸೌಧವನ್ನು ಕಟ್ಟಿದವರು. ನಿಜವಾದ ಕನ್ನಡತನ ಉಳಿದಿರುವುದು ಶರಣ ಸಾಹಿತ್ಯದಲ್ಲಿ. ನಮ್ಮ ನಾಡಿನ ಭಾಷೆ ಅಭಿವ್ಯಕ್ತಿ ಆಶಯಗಳು ವಚನ ಸಾಹಿತ್ಯದಲ್ಲಿದೆ. ಇಂದಿನ ವಿದ್ಯಾರ್ಥಿಗಳು ಶರಣರ ನಡುವೆ ನಡೆದ ತಾತ್ವಿಕ ವಿಚಾರಗಳೆಲ್ಲವನ್ನೂ ಅಧ್ಯಯನ ಮಾಡಬೇಕಿದೆ ಎಂದರು.



ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ಮಾತನಾಡಿದರು.

ವೇದಿಕೆಯ ಮೇಲೆ ಮೈಸೂರು ನಗರ ಘಟಕ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಎಂ ಚಿನ್ನಸ್ವಾಮಿ, ಪ್ರಾಂಶುಪಾಲ ಡಾ. ರೇಚಣ್ಣ, ದತ್ತಿದಾನಿಗಳಾದ ಶರಣಪ್ಪ ಸಮಂತ್ರಿ, ಕೆ. ಎಸ್. ಮೋಹನ್ ಕುಮಾರ್ ಉಪಸ್ಥಿತರಿದ್ದರು.

ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಡಾ. ಮುದ್ದು ಮಲ್ಲೇಶ್ ಸ್ವಾಗತಿಸಿದರು. ಹೊನ್ನಶೆಟ್ಟಿ ವಂದಿಸಿದರು. ಶ್ರೀಮತಿ ಪುಷ್ಪಲತಾ ಜೆ ಕಾರ್ಯಕ್ರಮ ನಿರೂಪಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 24 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 98 | ಪುಟಗಳು: 12 + VIII

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# 9 ಸಾವಿರ ಸಣ್ಣ ವರ್ತಕರ ಜಿಎಸ್‌ಟಿ ಬಾಕಿ ಮನ್ನಾ

**● ಸಿಎಂ ಸಿದ್ದರಾಮಯ್ಯ ಘೋಷಣೆ ● ಸಣ್ಣ ವ್ಯಾಪಾರಿಗಳ ಮುಷ್ಕರ ವಾಪಸ್**

ಬೆಂಗಳೂರು,ಜು.23–ಸುಮಾರು 9 ಸಾವಿರ ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟಿಸ್ ನೀಡಿರುವುದನ್ನು ವಿರೋಧಿಸಿ



ಕರ್ನಾಟಕ ರಾಜ್ಯ ಕಾರ್ಮಿಕರ ಪರಿಷತ್ ಜು.25ರಂದು ಕರೆ ನೀಡಿದ್ದ ಮುಷ್ಕರವನ್ನು ವಾಪಸ್ ಪಡೆದುಕೊಂಡಿದೆ.

ಜಿಎಸ್‌ಟಿ ನೋಟಿಸ್ ಪಡೆದ ವರ್ತಕರಿಂದ 3 ವರ್ಷದ ತೆರಿಗೆ ಬಾಕಿ ವಸೂಲಾತಿ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದರಿಂದ ಸಣ್ಣ ವರ್ತಕರು ಪ್ರತಿಭಟನೆ ವಾಪಸ್ ಪಡೆದುಕೊಂಡಿದ್ದು, ಸಿದ್ದರಾಮಯ್ಯನವರ ನಡೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

ವಾರ್ಷಿಕ 40 ಲಕ್ಷ ರೂ. ವ್ಯವಹಾರ ನಡೆಸಿದ್ದರಿಂದ ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆ ವರ್ತಕರಿಗೆ ನೋಟಿಸ್ ಜಾರಿ ಮಾಡಿತ್ತು. ಇದಕ್ಕೆ ಭಾರಿ ಟೀಕೆ ವ್ಯಕ್ತವಾದ ಬೆನ್ನಲ್ಲೇ ಸಿದ್ದರಾಮಯ್ಯ ಇಂದು ತೆರಿಗೆ ಇಲಾಖೆಯ ಅಧಿಕಾರಿಗಳು, ವರ್ತಕ ಸಂಘದ ಪ್ರತಿನಿಧಿಗಳ ಜೊತೆ ಸಭೆ ನಡೆಸಿ, ವರ್ತಕರ ಜಿಎಸ್‌ಟಿ ಬಾಕಿ ಮನ್ನಾ ಮಾಡಲು ತೀರ್ಮಾನಿಸಿದರು. ಇದರ ಬೆನ್ನಲ್ಲೇ ಸಣ್ಣ ವ್ಯಾಪಾರಿಗಳು ಜುಲೈ 25ರಂದು ಕರೆ ನೀಡಿದ್ದ ಬಂದ್ ವಾಪಸ್ ಪಡೆದುಕೊಂಡಿದ್ದಾರೆ.

ಈ ಸಂಬಂಧ ಸಣ್ಣಪುಟ್ಟ ವ್ಯಾಪಾರಿಗಳ ಹೋರಾಟದ ನೇತೃತ್ವ ವಹಿಸಿದ್ದ ಕಾರ್ಮಿಕ ಪರಿಷತ್ ಅಧ್ಯಕ್ಷ ರವಿಶೆಟ್ಟಿ ಬೈಂದೂರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಸರ್ಕಾರದ ಭರವಸೆ ಬೆನ್ನಲ್ಲೇ ಪ್ರತಿಭಟನೆ ಕೈಬಿಡುವುದಾಗಿ ಘೋಷಿಸಿದರು.

> “ನಾವು ಈ ಕಪ್ಪುಪಟ್ಟಿಯನ್ನು ವಾಪಸ್ಸು ತೆಗೆಯುತ್ತಿದ್ದೇವೆ. ಸರ್ಕಾರ ಮರಣ ಶಾಸನ ಕೊನೆಗಾಣಿಸಿದ್ದಕ್ಕೆ ಧನ್ಯವಾದ ಹೇಳುತ್ತೇನೆ. ಸರ್ಕಾರ ಯಾವುದೇ ಷರತ್ತು ಹಾಕದೆ ಎಲ್ಲ ನೋಟಿಸ್ ವಾಪಸ್ ತೆಗೆದುಕೊಳ್ಳಲು ನಿರ್ಧಾರ ಮಾಡಿದೆ ಎಂದು ನನಗೆ ಮಾಹಿತಿ ಸಿಕ್ಕಿದೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸದೆ ಇದ್ದಲ್ಲೇ ನಾಳೆ ಫ್ರೀಡಂ ಪಾರ್ಕಿನಲ್ಲಿ ಲಕ್ಷಾಂತರ ಜನ ಸೇರುತ್ತಿದ್ದರು. ಸರ್ಕಾರ ಮತ್ತೆ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ನೀಡದ ರೀತಿ ನೋಡಿಕೊಳ್ಳಬೇಕು. ನಮ್ಮ ಹಲವು ದಿನಗಳ ಹೋರಾಟ ನಿಜಕ್ಕೂ ಒಂದು ಸುಖಾಂತ್ಯ ಕಂಡಿದೆ. ಈಗ ತುಂಬಾ ಖುಷಿ ಆಗುತ್ತಿದೆ.
> **–ರವಿಶೆಟ್ಟಿ ಬೈಂದೂರು, ಕಾರ್ಮಿಕ ಪರಿಷತ್ ಅಧ್ಯಕ್ಷ**

ಈ ಕುರಿತು ಚಿಕ್ಕಪೇಟೆ ಟ್ರೇಡರ್ಸ್ ವರ್ತಕರ ಸಂಘದ ಸದಸ್ಯ ಸಜ್ಜನ್ ಮೆಹತಾ ಪ್ರತಿಕ್ರಿಯಿಸಿ, ಎಫ್‌ಕೆಸಿಸಿಐ ಸೇರಿದಂತೆ ಹಲವು ಸಂಘ ಸಂಸ್ಥೆಗಳ ಜೊತೆ ಸಿಎಂ ಸಭೆ ನಡೆಸಿದ್ದಾರೆ. ಹೀಗಾಗಿ ಪ್ರತಿಭಟನೆ, ರ್‍ಯಾಲಿಯನ್ನು ನಮ್ಮ ಅಸೋಸಿಯೇಷನ್ ವಾಪಸ್ ಪಡೆದಿದೆ. ಬಂದ್ ಮಾಡಿದರೆ ಬೆಂಗಳೂರಿನ ವಾಣಿಜ್ಯ ವಹಿವಾಟು ಸ್ಥಗಿತವಾಗುತ್ತದೆ. ನಮ್ಮ ವಹಿವಾಟು ತುಮಕೂರಿಗೆ ಹೋಗುತ್ತೆ ಸರ್ಕಾರ 40 ಲಕ್ಷದಿಂದ 5 ಕೋಟಿ ರೂ.ವರೆಗೆ ವಹಿವಾಟು ಇದ್ದವರಿಗೆ ನೋಟಿಸ್ ಕೊಟ್ಟಿದೆ. ಹಳೆ ಬಾಕಿ ಪರಿಹಾರ ಮಾಡುವುದಾಗಿ ಸಿಎಂ ನಮ್ಮ ಮನವಿಗೆ ಸ್ಪಂದಿಸಿದ್ದಾರೆ. ಹೀಗಾಗಿ ನಾಳೆಯ ಪ್ರತಿಭಟನೆ ಕೈಬಿಟ್ಟಿದ್ದೇವೆ ಎಂದು ಸ್ಪಷ್ಟಪಡಿಸಿದರು.

# ಸೆ.22ರಿಂದ ಮರು ಜಾತಿಗಣತಿ



## ಅಕ್ಟೋಬರ್ 7ರವರೆಗೆ ಸಮೀಕ್ಷೆ

**■ ಅಕ್ಟೋಬರ್ ಅಂತ್ಯಕ್ಕೆ ವರದಿ ಸಲ್ಲಿಸಲು ಸಿಎಂ ಸೂಚನೆ ■ ಇಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಧಿಸೂಚನೆ ■ ಸಮೀಕ್ಷೆ ವೈಜ್ಞಾನಿಕ, ಪಾರದರ್ಶಕವಾಗಿರುವಂತೆ ಸಿದ್ದರಾಮಯ್ಯ ಕಟ್ಟಾಜ್ಞೆ**



**ಬೆಂಗಳೂರು,ಜು.23(ಕೆಎಂಶಿ)–ಮರು ಜಾತಿಗಣತಿ ಸಮೀಕ್ಷೆ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ 15 ದಿನಗಳ ಕಾಲ ನಡೆಯಲಿದ್ದು, ಅಕ್ಟೋಬರ್ ಅಂತ್ಯದೊಳಗೆ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸೂಚಿಸಿದ್ದಾರೆ.**

ಮರು ಜಾತಿಗಣತಿ ಸಂಬಂಧ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಾಳೆ (ಜುಲೈ 24) ಅಧಿಸೂಚನೆ ಹೊರಡಿಸಲಿದೆ. ಅಲ್ಲದೆ, ಹೊಸ ಸಮೀಕ್ಷೆ ಮಾದರಿ, ರೂಪುರೇಷೆ, ಕಾಲಾವಧಿ ಕುರಿತು ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ವಿವರ ಪ್ರಕಟಿಸಲಿದೆ.

ಜಾತಿಗಣತಿ ಮರುಸಮೀಕ್ಷೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಕಾವೇರಿ ನಿವಾಸದಲ್ಲಿ ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಕಾಲ ನಡೆದ ಮಹತ್ವದ ಸಭೆಯಲ್ಲಿ ಜಾತಿ ಜನಗಣತಿ ಮರು ಸಮೀಕ್ಷೆ ಕುರಿತು ಚರ್ಚಿಸಲಾಯಿತು.

**ವೈಜ್ಞಾನಿಕ, ಪಾರದರ್ಶಕವಾಗಿರಲಿ:** ಮರು ಜಾತಿಗಣತಿ ವೇಳೆ ಎಚ್ಚರಿಕೆ ವಹಿಸಬೇಕು. ಸಮೀಕ್ಷೆ ವೈಜ್ಞಾನಿಕ ಹಾಗೂ ಪಾರದರ್ಶಕವಾಗಿರಬೇಕು. ಜಾತಿಗಣತಿ ಮರು ಸಮೀಕ್ಷೆಗೆ ಮಾನವ ಸಂಪನ್ಮೂಲದ ಜೊತೆಗೆ ಆಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುವ ಮೂಲಕ ಯಾವುದೇ ಲೋಪದೋಷ ಆಗದಂತೆ ಕ್ರಮ ವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

> **“ಜಾತಿ ತಾರತಮ್ಯ ನಿವಾರಣೆ, ಜಾತಿ ಗಣತಿಯ ಮುಖ್ಯ ಉದ್ದೇಶವಾಗಿದ್ದು, ಪ್ರತಿಯೊಬ್ಬ ಪ್ರಜೆಯ ಆರ್ಥಿಕ ಪರಿಸ್ಥಿತಿ, ಜಮೀನು ಇದೆಯೇ ಇಲ್ಲವೇ ಎಂಬ ವಿಚಾರಗಳು ಸೇರಿದಂತೆ ಸಮಗ್ರ ಸಮೀಕ್ಷೆ ನಡೆಸಬೇಕು, ಬಜೆಟ್ ಸಿದ್ಧತೆಗೆ ಸಮೀಕ್ಷಾ ವರದಿ ಆಧಾರವಾಗಲಿದ್ದು, ಈ ಬಾರಿಯ ಸಮೀಕ್ಷೆ ದೇಶದಲ್ಲೇ ಮಾದರಿ ಸಮೀಕ್ಷೆಯಾಗಬೇಕು. –ಸಿದ್ದರಾಮಯ್ಯ, ಮುಖ್ಯಮಂತ್ರಿ**

ಈ ಬಾರಿಯ ಸಮೀಕ್ಷೆ ದೇಶದಲ್ಲೇ ಮಾದರಿಯಾಗಬೇಕು. ತರಬೇತಿ ಸೇರಿದಂತೆ ಸಮೀಕ್ಷೆಗೆ ಪೂರ್ವಭಾವಿ ಸಿದ್ಧತೆಗಳನ್ನು ಈಗಲೇ ಆರಂಭಿಸಬೇಕು. ಸಮೀಕ್ಷೆ ಅತ್ಯಂತ ಸಮರ್ಪಕವಾಗಿರಬೇಕು. ಯಾವುದೇ ದೂರುಗಳಿಗೆ ಆಸ್ಪದವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಮೀಕ್ಷೆಯಿಂದ ಯಾವುದೇ ಸಮುದಾಯ, ಜನಾಂಗ ಹಾಗೂ ಜನರು ಹೊರಗುಳಿಯದಂತೆ ಖಾತ್ರಿಪಡಿಸಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

**ಏಳು ಕೋಟಿ ಜನರ ಸಮೀಕ್ಷೆ:** ರಾಜ್ಯದ ಎಲ್ಲಾ 7 ಕೋಟಿ ಜನರ ಸಮೀಕ್ಷೆ ನಡೆಸಲಾಗುವುದು, ಕಾಂತರಾಜು ಆಯೋಗ 54 ಪ್ರಶ್ನೆಗಳನ್ನು ಸಿದ್ಧಪಡಿಸಿ ಸಮೀಕ್ಷೆ ನಡೆಸಿತ್ತು. ಈ ಬಾರಿ ಇನ್ನಷ್ಟು ಅಂಶಗಳನ್ನು ಸೇರಿಸುವ ಕುರಿತು ಪರಿಶೀಲಿಸಿ, ಮೊಬೈಲ್ ಆ್ಯಪ್ ಬಳಸಿ ಸಮೀಕ್ಷೆ ನಡೆಸಲಾಗುವುದು. ತೆಲಂಗಾಣದಲ್ಲಿ ಕೈಗೊಳ್ಳಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ಕುರಿತು ಅಧ್ಯಯನ ನಡೆಸಲು ಹಾಗೂ ಸಮೀಕ್ಷೆ ಕಾರ್ಯದ ಮೇಲುಸ್ತುವಾರಿಗೆ ಉನ್ನತ ಮಟ್ಟದ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

**1.65 ಲಕ್ಷ ಗಣತಿದಾರರು:** ಸಮೀಕ್ಷೆಯಲ್ಲಿ ಕೇಳಬೇಕಾದ ಪ್ರಶ್ನೆಗಳನ್ನು ಅಂತಿಮಗೊಳಿಸಲು ತಜ್ಞರ ಸಮಿತಿ ನೆರವು ಪಡೆಯಬೇಕು. ಈ ಬಾರಿ ಸಮೀಕ್ಷಾ ಕಾರ್ಯಕ್ಕೆ 1.65 ಲಕ್ಷ ಗಣತಿದಾರರು ಸೇರಿದಂತೆ ಮಾನವ ಸಂಪನ್ಮೂಲ ಅವಶ್ಯಕತೆ ಇದ್ದು, ಸಮೀಕ್ಷೆ ಕಾರ್ಯಕ್ಕೆ ಶಿಕ್ಷಕರ ಸೇವೆಯೊಂದಿಗೆ ಇತರ ಇಲಾಖೆಗಳ ಸಿಬ್ಬಂದಿ ಸಹ ಬಳಸಿಕೊಳ್ಳಲಾಗುವುದು. ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಸಮೀಕ್ಷೆ ಕಾರ್ಯವನ್ನು ಯಶಸ್ವಿಗೊಳಿಸಬೇಕು. ▶ 6ನೇ ಪುಟಕ್ಕೆ

## ಆ.5ರಿಂದ ಸಾರಿಗೆ ನೌಕರರ ಮುಷ್ಕರ



ಮೈಸೂರು, ಜು.23(ಎಸ್‌ಪಿಎನ್)–ಕೆಎಸ್‌ಆರ್‌ಟಿಸಿ ನೌಕರರ 38 ತಿಂಗಳ ಹಿಂಬಾಕಿ ಕೊಡಲು ನಿರಾಕರಣೆ ಹಾಗೂ ಕರಾರಿನಂತೆ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಿಸಲು ಮುಂದಾಗದ ರಾಜ್ಯ ಸರ್ಕಾರ ನಿಲುವು ಖಂಡಿಸಿ ಆಗಸ್ಟ್ 5ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರಪತ್ರ ಹೊರಡಿಸಿದೆ.

ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್(ಎಐಟಿಯುಸಿ), ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮಹಾಮಂಡಳ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕೆಎಸ್‌ಆರ್‌ಟಿಸಿ ಪ.ಜಾ ಮತ್ತು ಪ.ಪಂ ನೌಕರರ ಸಂಘ, ಕೆಎಸ್‌ಆರ್‌ಟಿಸಿ ಎಸ್ಸಿ–ಎಸ್ಟಿ ಅಧಿಕಾರಿಗಳ ಮತ್ತು ನೌಕರರ ▶ 6ನೇ ಪುಟಕ್ಕೆ

**ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತ ದುರಂತ ಪ್ರಕರಣ**

**ಅಧಿಕಾರಿಗಳ ಮೇಲೆ ಎಫ್‌ಐಆರ್ ಸಂಬಂಧ**

## ಇಂದು ಸಂಪುಟ ತೀರ್ಮಾನ



ದಯಾನಂದ್ ವಿಕಾಸ್‌ಕುಮಾರ್ ಶೇಖರ್

ಬೆಂಗಳೂರು,ಜು.23(ಕೆಎಂಶಿ)–ಆರ್‌ಸಿಬಿ ಕ್ರಿಕೆಟ್ ತಂಡದ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಮಾಜಿ ಪೊಲೀಸ್ ಆಯುಕ್ತ ಬಿ.ದಯಾನಂದ್ ಸೇರಿದಂತೆ ಐವರು ಹಿರಿಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವ ಬಗ್ಗೆ ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆ ಮಹತ್ವದ ತೀರ್ಮಾನ ಕೈಗೊಳ್ಳಲಿದೆ. ಪೊಲೀಸ್ ಅಧಿಕಾರಿಗಳಲ್ಲದೆ, ಆರ್‌ಸಿಬಿ, ಕೆಎಸ್‌ಸಿಎ ಹಾಗೂ ಡಿಎನ್‌ಎ ಸಂಸ್ಥೆಗಳ ವಿರುದ್ಧವೂ ಎಫ್‌ಐಆರ್ ದಾಖಲಿಸುವ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ. ದಯಾನಂದ್ ಅಲ್ಲದೆ, ಅಂದಿನ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್‌ಕುಮಾರ್, ಕೇಂದ್ರೀಯ ಡಿಸಿಪಿ ಶೇಖರ್, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಎಸಿಪಿ ಬಾಲಕೃಷ್ಣ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಗಿರೀಶ್ ಈಗಾಗಲೇ ಅಮಾನತಿನಲ್ಲಿದ್ದು, ಇವರ ವಿರುದ್ಧ ಎಫ್‌ಐಆರ್ ಹಾಕುವ ಕುರಿತು ತೀರ್ಮಾನವಾಗಲಿದೆ. ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಈಗಾಗಲೇ ನಿವೃತ್ತ ನ್ಯಾಯಮೂರ್ತಿ ▶ 6ನೇ ಪುಟಕ್ಕೆ

## ಭೀಮನ ಅಮಾವಾಸ್ಯೆ; ಭಕ್ತರ ಅನುಕೂಲಕ್ಕೆ ಇಂದು ಪಾಂಡವಪುರ ನಿಲ್ದಾಣದಲ್ಲಿ ಐದು ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಅವಕಾಶ



ಮೈಸೂರು,ಜು.23(ಪಿಎಂ)–ಪಾಂಡವಪುರ ತಾಲೂಕಿನ ಆರತಿ ಉಕ್ಕಡಮ್ಮ ದೇವಸ್ಥಾನದ ಭೀಮನ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳಲ್ಲಿ ಯಾತ್ರಾರ್ಥಿಗಳು ಭಾಗವಹಿಸಲು ಅನುಕೂಲವಾಗುವಂತೆ ಪಾಂಡವಪುರದಲ್ಲಿ ಐದು ಎಕ್ಸ್‌ಪ್ರೆಸ್ ರೈಲುಗಳ ತಾತ್ಕಾಲಿಕ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ಜು.24ರ ಗುರುವಾರಕ್ಕೆ ಅನ್ವಯವಾಗುವಂತೆ ಪಾಂಡವಪುರ ರೈಲು ನಿಲ್ದಾಣದಲ್ಲಿ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಗೆ ಅವಕಾಶ ನೀಡಲಾಗಿದೆ. ಅದರಂತೆ ಪಾಂಡವಪುರ ನಿಲ್ದಾಣದಲ್ಲಿ ತಾತ್ಕಾಲಿಕ ನಿಲುಗಡೆ ನೀಡುವ ರೈಲುಗಳ ವಿವರ ಹಾಗೂ ಸಮಯ ಇಂತಿದೆ. ಸಂಖ್ಯೆ 12613ರ ಮೈಸೂರು–ಕೆಎಸ್‌ಆರ್ ಬೆಂಗಳೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ಬೆಳಿಗ್ಗೆ 11.48ಕ್ಕೆ ಆಗಮಿಸಿ, 11:49ಕ್ಕೆ ನಿರ್ಗಮಿಸಲಿದೆ. ▶ 6ನೇ ಪುಟಕ್ಕೆ

## ಮೈಸೂರು ನಗರಪಾಲಿಕೆ ವಲಯ ಕಚೇರಿ ಎಸಿ, ನಿವೃತ್ತ ಕೌಶಲಾಭಿವೃದ್ಧಿ ಅಧಿಕಾರಿ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ



ಬುಧವಾರ ಲೋಕಾಯುಕ್ತ ಅಧಿಕಾರಿಗಳು ಮೈಸೂರಿನ ಕೆ.ಸಿ.ಲೇಔಟ್‌ನಲ್ಲಿರುವ ಮೈಸೂರು ಮಹಾನಗರಪಾಲಿಕೆ ವಲಯ–5ರ ಪ್ರಭಾರ ಸಹಾಯಕ ಆಯುಕ್ತ ಬಿ.ವೆಂಕಟರಾಮ್ (ಬಲಚಿತ್ರ) ಮತ್ತು ಕೌಶಲ ಅಭಿವೃದ್ಧಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಎಂ.ಮಂಜುನಾಥಸ್ವಾಮಿ ಅವರ ಸಾತಗಳ್ಳಿ ನಿವಾಸಗಳ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಿದರು.

ಮೈಸೂರು, ಜು.23(ಬಿಎಲ್‌ಯು)–ಮೈಸೂರು ನಗರಪಾಲಿಕೆ ಅಧಿಕಾರಿ ಹಾಗೂ ನಿವೃತ್ತ ಕೌಶಲಾಭಿವೃದ್ಧಿ ಅಧಿಕಾರಿ ಮನೆ ಮೇಲೆ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ದಾಳಿ ಮಾಡಿದ್ದಾರೆ. ದಾಳಿ ವೇಳೆ ದೊರೆತ ಚಿನ್ನಾಭರಣ ಹಾಗೂ ಆಸ್ತಿ ಬಗ್ಗೆ ಮಾಹಿತಿ ಕಲೆ ಹಾಕಿರುವ ಲೋಕಾಯುಕ್ತರು, ಹೆಚ್ಚಿನ ತನಿಖೆ ಆರಂಭಿಸಿದ್ದಾರೆ.

ಮೈಸೂರು ಮಹಾ ನಗರಪಾಲಿಕೆಯ ವಲಯ–5ರ ಪ್ರಭಾರ ಸಹಾಯಕ ಆಯುಕ್ತ ಬಿ.ವೆಂಕಟರಾಮು ಹಾಗೂ ಕೌಶಲಾಭಿವೃದ್ಧಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಮಂಜುನಾಥಸ್ವಾಮಿ ಅವರ ಮನೆ ಮೇಲೆ ದಾಳಿ ಮಾಡಲಾಗಿದೆ. ಮೈಸೂರಿನ ಕೆ.ಸಿ. ಬಡಾವಣೆಯಲ್ಲಿರುವ ವೆಂಕಟರಾಮು ಹಾಗೂ ಮಂಜುನಾಥ ಸ್ವಾಮಿ ಅವರ ಸಾತಗಳ್ಳಿಯ ಮನೆ ಮೇಲೆ ಇಂದು ಬೆಳಿಗ್ಗೆ 7 ಗಂಟೆಗೆ ಲೋಕಾಯುಕ್ತ ಅಧಿಕಾರಿಗಳು ಏಕಕಾಲಕ್ಕೆ ದಾಳಿ ಮಾಡಿದರು. ಎರಡೂ ಮನೆಯಲ್ಲಿ ತಲಾ 8 ಅಧಿಕಾರಿಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ▶ 6ನೇ ಪುಟಕ್ಕೆ

### ನಿವೃತ್ತ ಅಧಿಕಾರಿ ಮನೆ ಮೇಲೂ ದಾಳಿ ನಡೆಸುವ ಅಧಿಕಾರವಿದೆ

> “ನಿವೃತ್ತ ಸರ್ಕಾರಿ ಅಧಿಕಾರಿ ಸೇವಾವಧಿಯಲ್ಲಿ ಗಳಿಸಿರುವ ಆದಾಯ ಸಂಬಂಧವೂ ಪರಿಶೀಲನೆ ನಡೆಸುವ ಅಧಿಕಾರ ಲೋಕಾಯುಕ್ತರಿಗೆ ಇದೆ. ಈ ಹಿನ್ನೆಲೆಯಲ್ಲಿ ಕೌಶಲಾಭಿವೃದ್ಧಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಮಂಜುನಾಥ ಸ್ವಾಮಿ ಅವರ ಸಾತಗಳ್ಳಿಯ ಮನೆ ಮೇಲೆ ದಾಳಿ ಮಾಡಲಾಗಿದೆ. ಮಂಜುನಾಥ ಸ್ವಾಮಿ ಹಾಗೂ ವೆಂಕಟರಾಮು ಅವರ ಮನೆಯಲ್ಲಿ ದೊರೆತಿರುವ ಆಸ್ತಿಪಾಸ್ತಿ ಹಾಗೂ ಚಿನ್ನಾಭರಣಗಳ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕುತ್ತಿದ್ದೇವೆ. ಈಗ ತನಿಖಾ ಪ್ರಕ್ರಿಯೆ ಆರಂಭವಾಗಿದ್ದು, ದಾಳಿ ವೇಳೆ ಏನೇನು ದೊರೆತಿದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. **–ಟಿ.ಜೆ.ಉದೇಶ್, ಲೋಕಾಯುಕ್ತ ಎಸ್ಪಿ**



## ಆ.11ರಿಂದ ವಿಧಾನಮಂಡಲ ಮುಂಗಾರು ಅಧಿವೇಶನ

**ಎಂಎಲ್‌ಸಿ, ನಿಗಮ–ಮಂಡಳಿ ನೇಮಕ ಪೂರ್ಣಕ್ಕೆ ಸಿಎಂ–ಡಿಸಿಎಂ ಕಸರತ್ತು**

**ಬೆಂಗಳೂರು:** ಆಗಸ್ಟ್ 11ರಿಂದ ರಾಜ್ಯ ವಿಧಾನಮಂಡಲದ



ಮುಂಗಾರು ಅಧಿವೇಶನ ಆರಂಭಗೊಳ್ಳಲಿದ್ದು, ಅಧಿವೇಶನಕ್ಕೂ ಮುನ್ನವೇ ಎಂಎಲ್‌ಸಿ ನಿಗಮ–ಮಂಡಳಿ ನೇಮಕಾತಿಗಳನ್ನು ಪೂರ್ಣಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಮುಂದಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಹಲವು ಬಾರಿ ನವದೆಹಲಿಗೆ ಭೇಟಿ ನೀಡಿ, ಹೈಕಮಾಂಡ್ ಜೊತೆಗೆ ಮಾತುಕತೆ ನಡೆಸಿದ್ದಾರೆ. ಶೀಘ್ರದಲ್ಲೇ ನೇಮಕಾತಿಗಳನ್ನು ಮಾಡುತ್ತಾರೆಂಬ ವಿಶ್ವಾಸದಲ್ಲಿ ಆಕಾಂಕ್ಷಿಗಳಿದ್ದಾರೆ. ಕಳೆದ ಆರು ವಾರಗಳಲ್ಲಿ, ಸಿದ್ದರಾಮಯ್ಯ ಅವರು ಎರಡು ಬಾರಿ ನವದೆಹಲಿಗೆ ಭೇಟಿ ನೀಡಿದ್ದು, ಜುಲೈ 25 ರಂದು ರಾಷ್ಟ್ರ ರಾಜಧಾನಿಗೆ ಮತ್ತೆ ಭೇಟಿ ನೀಡಲಿದ್ದಾರೆ. ಆದರೆ, ಶಿವಕುಮಾರ್ ಅವರಿಗೆ ಇದು ಐದನೇ ಭೇಟಿಯಾಗಲಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಇದೇ ಅವಧಿಯಲ್ಲಿ ನಾಲ್ಕು ಬಾರಿ ಬೆಂಗಳೂರಿಗೆ ಭೇಟಿ ನೀಡಿದ್ದರು. ದೆಹಲಿ ಭೇಟಿಯ ಸಮಯದಲ್ಲಿ, ಸಿಎಂ ಮತ್ತು ಡಿಸಿಎಂ ರಾಜ್ಯದ ಅಭಿವೃದ್ಧಿ ಯೋಜನೆಗಳ ಕುರಿತು ಚರ್ಚಿಸಲು ಕೇಂದ್ರ ಸಚಿವರೊಂದಿಗೆ ಸಭೆ ನಡೆಸಿದರು, ಇದೇ ವೇಳೆ ಹೈಕಮಾಂಡ್ ನಾಯಕರನ್ನೂ ಭೇಟಿ ಮಾಡಿದ್ದರು. ನಿಗಮ–ಮಂಡಳಿ ಹಾಗೂ ನಾಲ್ಕು ಎಂಎಲ್‌ಸಿ ಸ್ಥಾನಗಳ ಮೇಲೆ ಪ್ರಭಾವ ಬೀರಲು ಇಬ್ಬರೂ ನಾಯಕರು ಪ್ರಯತ್ನಿಸುತ್ತಿದ್ದಾರೆಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಈಗಾಗಲೇ ಇಬ್ಬರೂ ನಾಯಕರು ದೆಹಲಿ ಮತ್ತು ▶ 6ನೇ ಪುಟಕ್ಕೆ

ಐದನೇ ಪುಟದಿಂದ

## ಸೆ.22ರಿಂದ ಮರು ಜಾತಿಗಣತಿ

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಮೀಕ್ಷೆ ಕಾರ್ಯ ಯಶಸ್ವಿಗೊಳಿಸಲು ಯೋಜನೆ ರೂಪಿಸಿ ಕಾರ್ಯನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಹಿಂದುಳಿದ ವರ್ಗಗಳ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ಅವರಿಂದ ಸಿಎಂ ಮಾಹಿತಿ ಪಡೆದುಕೊಂಡರು. ಈ ಹಿಂದೆ ಕಾಂತರಾಜು ಆಯೋಗ ಹಾಗೂ ನಂತರ ಜಯಪ್ರಕಾಶ್ ಹೆಗಡೆ ನೇತೃತ್ವದ ಆಯೋಗದ ಸಮೀಕ್ಷೆಗಳಿಗೆ ವಿರೋಧ ಪಕ್ಷ ಬಿಜೆಪಿ, ಜೆಡಿಎಸ್, ಅಲ್ಲದೆ, ವೀರಶೈವ, ಒಕ್ಕಲಿಗ ಸೇರಿದಂತೆ ರಾಜ್ಯದ ಹಲವು ಸಮುದಾಯಗಳು, ಮಠಾಧೀಶರು ಭಾರಿ ಪ್ರತಿಭಟನೆ ವ್ಯಕ್ತಪಡಿಸಿದ್ದರು. ಅಲ್ಲದೆ, ಭಾರಿ ವಿವಾದಕ್ಕೆ ಕಾರಣವಾದ ಜಾತಿಗಣತಿ ವರದಿಗೆ ಬ್ರೇಕ್ ಹಾಕಿ ಮುಂದಾದ ಕಾಂಗ್ರೆಸ್ ಹೈಕಮಾಂಡ್ ಮರು ಜಾತಿಗಣತಿ ಮಾಡುವಂತೆ ಸೂಚಿಸಿದ್ದಕ್ಕೆ ಮುಖ್ಯಮಂತ್ರಿ ಸಹ ಒಪ್ಪಿದ್ದರು.

## ಲೋಕಾಯುಕ್ತ ಅಧಿಕಾರಿಗಳ ದಾಳಿ

ಈ ಸಂದರ್ಭದಲ್ಲಿ ವೆಂಕಟರಾಮು ಅವರ ನಂಜನಗೂಡು ಬಳಿ ಹೊಂದಿರುವ ಫಾರ್ಮ್ ಹೌಸ್‌ನ ಆಸ್ತಿ ದಾಖಲೆ ಲೋಕಾಯುಕ್ತ ಅಧಿಕಾರಿಗಳಿಗೆ ದೊರೆತಿದೆ ಎನ್ನಲಾಗಿದೆ. ಇಂದು ಬೆಳಗ್ಗೆ 7 ಗಂಟೆಗೆ ಆರಂಭವಾದ ಕಾರ್ಯಾಚರಣೆ ಸಂಜೆವರೆಗೂ ನಿರಂತರವಾಗಿ ನಡೆಯಿತು. ಈ ವೇಳೆ ಲೋಕಾಯುಕ್ತ ಅಧಿಕಾರಿಗಳು ಮನೆ ಬಿಟ್ಟು ಹೊರಗೆ ಬರಲಿಲ್ಲ. ಕಾರ್ಯಾಚರಣೆಯಲ್ಲಿ ತೊಡಗಿದ್ದ ಅಧಿಕಾರಿಗಳಿಗೆ ಊಟ, ತಿಂಡಿ ವ್ಯವಸ್ಥೆಯನ್ನು ಸಿಬ್ಬಂದಿಯೇ ಮಾಡಿದ್ದರು. ಲೋಕಾಯುಕ್ತ ದಾಳಿಗೊಳಗಾಗಿರುವ ವೆಂಕಟರಾಮು ಅವರು ಮೈಸೂರು ನಗರಪಾಲಿಕೆ ನೌಕರರ ಸಂಘದ ಅಧ್ಯಕ್ಷರಾಗಿದ್ದಾರೆ. ಇತ್ತೀಚೆಗೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಾಲಿಕೆ ನೌಕರರು 5 ದಿನಗಳ ಕಾಲ ನಡೆಸಿದ ಪ್ರತಿಭಟನೆಯ ನೇತೃತ್ವವನ್ನು ಅವರೇ ವಹಿಸಿದ್ದರು. ಇದಾದ ಒಂದು ವಾರಕ್ಕೆ ವೆಂಕಟರಾಮು ಅವರ ಮನೆ ಮೇಲೆ ಲೋಕಾಯುಕ್ತ ದಾಳಿಯಾಗಿದೆ. ಕೌಶಲಾಭಿವೃದ್ಧಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಮಂಜುನಾಥಸ್ವಾಮಿ ಅವರು ಕಳೆದ ತಿಂಗಳು ನಿವೃತ್ತಿ ಹೊಂದಿದ್ದರು. ನಿವೃತ್ತಿ ಜೀವನವನ್ನು ಜಾಲಿಯಾಗಿ ಕಳೆಯೋಣ ಎಂದು ನಿರೀಕ್ಷೆ ಹೊಂದಿದ್ದ ಮಂಜುನಾಥಸ್ವಾಮಿ ಅವರಿಗೆ ಲೋಕಾಯುಕ್ತ ದಾಳಿ ಶಾಕ್ ನೀಡಿದೆ.

### ರಾಜ್ಯದ ಹಲವೆಡೆ ಲೋಕಾಯುಕ್ತ ದಾಳಿ; ಅಧಿಕಾರಿಗಳ ಕಚೇರಿ, ನಿವಾಸಗಳಲ್ಲಿ ಶೋಧ

**ಬೆಂಗಳೂರು:** ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ದಾಳಿ ಮುಂದುವರಿದಿದೆ. ಆದಾಯಕ್ಕೂ ಮೀರಿ ಗಳಿಕೆ ಆರೋಪದಡಿ ಬೆಂಗಳೂರು, ಮೈಸೂರು, ಕೊಪ್ಪಳ ಮತ್ತು ಬಳ್ಳಾರಿ ಸರ್ಕಾರಿ ಅಧಿಕಾರಿಗಳ ಮನೆಗಳ ಮೇಲೆ ದಾಳಿ ಮಾಡಲಾಗಿದೆ.

**ಮೂವರು ಅಧಿಕಾರಿ ಮನೆ ಮೇಲೆ ದಾಳಿ:** ಬೆಂಗಳೂರಿನಲ್ಲಿ ಐಎಎಸ್ ಅಧಿಕಾರಿ ಸೇರಿ ಮೂವರು ಅಧಿಕಾರಿ ಮನೆ ಮೇಲೆ ಲೋಕಾಯುಕ್ತ ದಾಳಿ ಮಾಡಿದೆ. ಮೈಸೂರಿನ ಆರ್.ಟಿ.ನಗರದಲ್ಲಿರುವ ಹಿರಿಯ ಐಎಎಸ್ ಅಧಿಕಾರಿ ವಾಸಂತಿ ಅಮರ್ ಮನೆ ಮೇಲೆ ದಾಳಿ ಮಾಡಲಾಗಿದೆ. ಸರ್ಕಾರಿ ಜಮೀನು ಅಕ್ರಮವಾಗಿ ಬೇರೆಯವರ ಹೆಸರಿಗೆ ವರ್ಗಾವಣೆ ಆರೋಪ ಕೇಳಿಬಂದಿದೆ. ವಾಸಂತಿ ಅಮರ್ ಬೆಂಗಳೂರು ನಗರ ವಿಶೇಷ ಡಿಸಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಬಳ್ಳಾರಿಯಲ್ಲಿ ಮೂರು ಕಡೆ ಲೋಕಾಯುಕ್ತ ಅಧಿಕಾರಿಗಳ ದಾಳಿ ಮಾಡಲಾಗಿದೆ. ಬೆಂಗಳೂರು ಟೌನ್ ಮತ್ತು ರೂರಲ್ ಪ್ಲಾನಿಂಗ್ ಆಫೀಸರ್ ಮಾರುತಿ ಬಗಲಿಗೆ ಸೇರಿದ 3 ಸ್ಥಳಗಳ ಮೇಲೆ ದಾಳಿ ಮಾಡಿರುವ ಬೆಂಗಳೂರು ಲೋಕಾಯುಕ್ತ ತಂಡ ಪರಿಶೀಲನೆ ನಡೆಸಿದೆ. ಬೆಂಗಳೂರು ನಿವಾಸಿಯಾಗಿರುವ ಅಧಿಕಾರಿ ಮಾರುತಿ ಬಗಲಿ ವಿರುದ್ಧ ರಾಜ್ಯದ ಹಲವೆಡೆ ಆಸ್ತಿ ಮಾಡಿರುವ ಆರೋಪ ಕೇಳಿಬಂದಿದೆ.

ಇನ್ನು ಕೊಪ್ಪಳ ನಗರದಲ್ಲಿ ಲೋಕಾಯುಕ್ತ ಇನ್ಸ್‌ಪೆಕ್ಟರ್ ಸುನೀಲ ಮೇಗಳಮನಿ ನೇತೃತ್ವದಲ್ಲಿ ಅಭಿಷೇಕ ಬಡಾವಣೆ ಹಾಗೂ ಕೀರ್ತಿ ಕಾಲೋನಿಯಲ್ಲಿರುವ ಶೇಖು ಚವ್ಹಾಣಗೆ ಸೇರಿದ 2 ಮನೆಗಳ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ. ಹುಬ್ಬಳ್ಳಿಯಲ್ಲೂ ಲೋಕಾಯುಕ್ತ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

## ಇಂದು ಸಂಪುಟ ತೀರ್ಮಾನ

ಜಾನ್ ಮೈಕೆಲ್ ಡಿ.ಕುನ್ಹಾ, ಸಿಐಡಿ ಹಾಗೂ ಜಿಲ್ಲಾ ಮಾಜಿಸ್ಟ್ರೇಟ್ ಪ್ರತ್ಯೇಕ ವರದಿಗಳನ್ನು ಸಲ್ಲಿಸಿದ್ದಾರೆ. ಈ ವರದಿಯನ್ನೇ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರನ್ನು ಒಳಗೊಂಡ ನ್ಯಾಯಪೀಠಕ್ಕೂ ಸಲ್ಲಿಸಲಾಗಿದೆ. ನ್ಯಾಯಮೂರ್ತಿ ಕುನ್ಹಾ ನೀಡಿದ ವರದಿಯನ್ನು ಸರ್ಕಾರ ಅಂಗೀಕರಿಸಿರುವುದಲ್ಲದೆ, ಕಳೆದ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡನೆ ಮಾಡಲಾಯಿತಾದರೂ ವಿಸ್ತೃತ ಚರ್ಚೆ ನಡೆದಿರಲಿಲ್ಲ.

ಕಾಲ್ತುಳಿತ ಪ್ರಕರಣಕ್ಕೆ ಕಾರಣರಾದ ಅಧಿಕಾರಿಗಳು ಮತ್ತು ಸಂಸ್ಥೆಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಅಲ್ಲದೆ, ಪೊಲೀಸರ ವೈಫಲ್ಯವೂ ಇದಕ್ಕೆ ಒಂದು ಪ್ರಮುಖ ಕಾರಣ ಎಂದು ತಿಳಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಬೆಂಗಳೂರಿನ ಅಂದಿನ ಪೊಲೀಸ್ ಆಯುಕ್ತ ಬಿ.ದಯಾನಂದ್ ಸೇರಿದಂತೆ ಐವರನ್ನು ಅಮಾನತು ಮಾಡಲಾಗಿದೆ. ಐಪಿಎಲ್ ಟ್ರೋಫಿ ಗೆದ್ದ ಹಿನ್ನೆಲೆಯಲ್ಲಿ ಆರ್‌ಸಿಬಿ ಕ್ರಿಕೆಟ್ ತಂಡಕ್ಕೆ ಸನ್ಮಾನ ಹಾಗೂ ವಿಜಯೋತ್ಸವ ಆಚರಣೆಗೆ ಸರ್ಕಾರ ಹಾಗೂ ಪ್ರಾಯೋಜಕರು ಪ್ರತ್ಯೇಕವಾಗಿ ಸಮಾರಂಭಗಳನ್ನು ಆಯೋಜಿಸಿದ್ದರು. ವಿಜಯೋತ್ಸವ ಆಚರಣೆ ದಿನವಾದ ಜೂನ್ 4ರಂದು ಸರ್ಕಾರ, ಪ್ರಾಯೋಜಕರು ಮತ್ತು ಪೊಲೀಸರ ನಿರೀಕ್ಷೆಗಿಂತ ಹೆಚ್ಚು ಕ್ರೀಡಾಭಿಮಾನಿಗಳು ಸೇರಿದ್ದರಿಂದ ಜನಸಂದಣಿಯನ್ನು ನಿಯಂತ್ರಿಸಲಾಗದೆ, ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಅಸುನೀಗಿ, 56 ಮಂದಿ ಗಾಯಗೊಂಡರು.

ಈ ಪ್ರಕರಣ ಸರ್ಕಾರಕ್ಕೆ ಭಾರಿ ಮುಜುಗರ ಉಂಟು ಮಾಡಿದ್ದಲ್ಲದೆ, ಇಡೀ ರಾಷ್ಟ್ರದಲ್ಲಿ ಚರ್ಚೆಗೆ ಗ್ರಾಸವಾಗಿ, ತೀವ್ರ ಟೀಕೆಗೆ ಒಳಗಾಯಿತು. ಇದರಿಂದ ಎಚ್ಚೆತ್ತ ಸರ್ಕಾರ ತಪ್ಪಿತಸ್ಥರ ವಿರುದ್ಧ ಕ್ರಮ ಹಾಗೂ ಮುಂದೆ ಇಂತಹ ಘಟನೆ ನಡೆಯದಂತೆ ಮುಂಜಾಗ್ರತೆ ವಹಿಸಲು ಮೂರು ಸಂಸ್ಥೆಗಳಿಗೆ ತನಿಖೆಗೆ ಸೂಚಿಸಿತ್ತು.

## ಆ.5ರಿಂದ ಸಾರಿಗೆ ನೌಕರರ ಮುಷ್ಕರ

ಕ್ಷೇಮಾಭಿವೃದ್ಧಿ ಸಂಘ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಘ ಸಹಯೋಗದಲ್ಲಿ ಮುಷ್ಕರ ಆರಂಭಿಸಲಾಗುವುದು ಎಂದು ಜಂಟಿ ಕ್ರಿಯಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ. ಎಸ್ಮಾ ಕಾಯ್ದೆಗೆ ಸಾರಿಗೆ ನೌಕರರು ಹೆದರುವ ಮಾತಿಲ್ಲ. ಎಸ್ಮಾ ಮೂಲಕವೇ ಆಡಳಿತ ಮಾಡುತ್ತೇವೆ ಎನ್ನುವುದಾದರೆ ಅದೊಂದು ಪ್ರಜಾಪ್ರಭುತ್ವ ಸರಕಾರವಲ್ಲ. ಹಾಗಾಗಿ ಸಾರಿಗೆ ನೌಕರರ ಆ.5 ರಂದು ರಾಜ್ಯಾದ್ಯಾಂತ ಸಾರಿಗೆ ಸೇವೆ ಸ್ಥಗಿತಗೊಳಿಸಿ ಅನಿರ್ಧಿಷ್ಟಾವಧಿ ಮುಷ್ಕರ ಮಾಡಲಿದ್ದಾರೆ ಎಂದು ಹಿರಿಯ ಕಾರ್ಮಿಕ ಮುಖಂಡ ಡಾ.ಕೆ.ಎಸ್.ಶರ್ಮಾ ತಿಳಿಸಿದ್ದಾರೆ. ಇದಕ್ಕೂ ಮುನ್ನ ಜು.30ರಂದು ಬೆಳಗ್ಗೆ 11ರಿಂದ ಸಂಜೆ 4 ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾರಿಗೆ ನೌಕರರು ಸಾಮೂಹಿಕ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

## ಮುಂಗಾರು ಅಧಿವೇಶನ

ಬೆಂಗಳೂರಿನಲ್ಲಿ ಹೈಕಮಾಂಡ್ ಜೊತೆಗೆ ಒಂದೆರಡು ಸಭೆಗಳನ್ನು ನಡೆಸಿ ಮಾತುಕತೆ ನಡೆಸಿದ್ದು, ನಿಗಮ–ಮಂಡಳಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ನೇಮಕಾತಿ ಕುರಿತಂತೆ ಮಾತುಕತೆ ನಡೆಸಿದ್ದಾರೆಂದು ತಿಳಿದುಬಂದಿದೆ. ಈ ಹುದ್ದೆಗಳನ್ನು ಚುನಾಯಿತ ಪ್ರತಿನಿಧಿಗಳಿಗಲ್ಲದೆ, ಕಾರ್ಯಕರ್ತರಿಗೆ ಸಿಗುವಂತೆ ಮಾಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಉತ್ಸುಕರಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಆಪ್ತರಿಗೆ ಸಿಗುವಂತೆ ಮಾಡಲು ಕಸರತ್ತು ನಡೆಸುತ್ತಿದ್ದಾರೆಂದು ಪಕ್ಷದ ಮೂಲಗಳು ತಿಳಿಸಿವೆ.

ಆ. 11ರಿಂದ ಅಧಿವೇಶನ ಆರಂಭವಾಗಲಿದ್ದು, ಅದಕ್ಕೂ ಮುನ್ನ ನಾಲ್ಕು ಎಂಎಲ್‌ಸಿ ಸ್ಥಾನಗಳಿಗೆ ನಾಮನಿರ್ದೇಶನಗಳನ್ನು ಅಂತಿಮಗೊಳಿಸಲಾಗುವುದು ಎಂದು ವಿಧಾನಪರಿಷತ್ ಮುಖ್ಯ ಸಚೇತಕ ಸಲೀಮ್ ಅಹ್ಮದ್ ಹೇಳಿದ್ದಾರೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ದೆಹಲಿಗೆ ಭೇಟಿ ನೀಡುವ ವೇಳೆ ನಿಗಮ–ಮಂಡಳಿಗಳ ನೇಮಕಾತಿಗಳ ಹೆಸರುಗಳನ್ನು ಅಂತಿಮಗೊಳಿಸುತ್ತಾರೆಂಬ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ನಾಲ್ಕು ಎಂಎಲ್‌ಸಿ ಸ್ಥಾನಗಳನ್ನು ಖಾಲಿ ಬಿಡುವುದು ಒಳ್ಳೆಯ ಸಂಕೇತವಲ್ಲ, ಬಹುಮತಕ್ಕೆ ಇವರ ನೇಮಕಾತಿ ಮುಖ್ಯವಾಗುತ್ತದೆ. ನಮಗೆ ಸಂಪೂರ್ಣ ಬಹುಮತವಿರುವ ವಿಧಾನಸಭೆಯಲ್ಲಿ ಕೆಲವು ಮಸೂದೆಗಳು ಅಂಗೀಕಾರವಾಗುತ್ತವೆ. ನಾವು ನೋಡಿದ್ದೇವೆ, ಆದರೆ, ಸಂಖ್ಯಾಬಲದ ಕೊರತೆಯಿಂದಾಗಿ ಪರಿಷತ್ತಿನಲ್ಲಿ ಮಸೂದೆಗಳು ಅಂಗೀಕಾರವಾಗುತ್ತಿಲ್ಲ. ಈಗ ಹೆಸರುಗಳನ್ನು ಅಂತಿಮಗೊಳಿಸದಿದ್ದರೆ, ಡಿಸೆಂಬರ್‌ವರೆಗೆ ಕಾಯಬೇಕಾಗುತ್ತದೆ ಎಂದು ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ.

## ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಅವಕಾಶ

ಅದೇ ರೀತಿಯಲ್ಲಿ ಸಂಖ್ಯೆ 20660ರ ಕೆಎಸ್‌ಆರ್–ಬೆಂಗಳೂರು–ಮೈಸೂರು ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ 1.20ಕ್ಕೆ ಆಗಮಿಸಿ 1.21ಕ್ಕೆ ನಿರ್ಗಮಿಸಲಿದೆ. ಸಂಖ್ಯೆ 20659ರ ಮೈಸೂರು–ಕೆಎಸ್‌ಆರ್ ಬೆಂಗಳೂರು ರಾಜ್ಯರಾಣಿ ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ 3.08ಕ್ಕೆ ಆಗಮಿಸಿ, 3.09ಕ್ಕೆ ನಿರ್ಗಮಿಸಲಿದೆ. ಸಂಖ್ಯೆ 16232ರ ಮೈಸೂರು–ಕಡಲೂರ ಪೋರ್ಟ್ ಎಕ್ಸ್‌ಪ್ರೆಸ್ ರೈಲು ಸಂಜೆ 4.32ಕ್ಕೆ ಆಗಮಿಸಿ 4:33ಕ್ಕೆ ನಿರ್ಗಮಿಸಲಿದೆ. ಸಂಖ್ಯೆ 12614ರ ಕೆಎಸ್‌ಆರ್ ಬೆಂಗಳೂರು–ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ಸಂಜೆ 5.14ಕ್ಕೆ ಆಗಮಿಸಿ, 5.15ಕ್ಕೆ ನಿರ್ಗಮಿಸಲಿದೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಮತ್ತು ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಕಳ್ಳಾಟ...!

**ನವದೆಹಲಿ:** ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಅಕ್ರಮ ನಡೆಯುತ್ತಿದೆ ಎಂಬ ತಮ್ಮ ಆರೋಪವನ್ನು ಮತ್ತಷ್ಟು ತೀವ್ರಗೊಳಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, 2024ರ ಲೋಕಸಭೆ ಚುನಾವಣೆಯಲ್ಲಿ ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ಕಳ್ಳಾಟ ನಡೆದಿದೆ ಎಂದು ಬುಧವಾರ ಹೇಳಿದ್ದಾರೆ.



ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ(SIR)ಮತ್ತು ಆಪರೇಷನ್ ಸಿಂಧೂರ ಸೇರಿದಂತೆ ಹಲವಾರು ವಿಷಯಗಳ ಕುರಿತು ಚರ್ಚೆಗೆ ಒತ್ತಾಯಿಸಿ ಪ್ರತಿಪಕ್ಷಗಳು ಕಲಾಪಕ್ಕೆ ಅಡ್ಡಿಪಡಿಸುತ್ತಲೇ ಇದ್ದುದರಿಂದ ಸಂಸತ್ತಿನ ಉಭಯ ಸದನಗಳ ಕಲಾಪವನ್ನು ಸತತ ಮೂರನೇ ದಿನವೂ ಮುಂದೂಡಲಾಯಿತು.

ನಂತರ ಸಂಸತ್ ಭವನದ ಸಂಕೀರ್ಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್ ಗಾಂಧಿ, "ಮತಗಳ ಕಳ್ಳತನ" ಹೇಗೆ ನಡೆಯುತ್ತಿದೆ ಎಂಬುದನ್ನು ಜನರ ಮುಂದೆ ಮತ್ತು ಚುನಾವಣಾ ಆಯೋಗದ ಮುಂದೆ ಶೀಘ್ರದಲ್ಲೇ ಬ್ಲ್ಯಾಕ್ ಎಂಡ್ ವೈಟ್ ಆಗಿ ಸತ್ಯವನ್ನು ತೆರೆದಿಡುತ್ತೇನೆ ಎಂದರು.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ಪರಿಷ್ಕರಣೆ ಉಲ್ಲೇಖಿಸಿ ಮತನಾಡುತ್ತಾ, ಚುನಾವಣಾ ಅಧಿಕಾರಿಗಳು ಇಲ್ಲಿಯವರೆಗೆ 52 ಲಕ್ಷಕ್ಕೂ ಹೆಚ್ಚು ಮತದಾರರು ತಮ್ಮ ವಿಳಾಸಗಳಲ್ಲಿ ಇಲ್ಲ ಮತ್ತು ಇನ್ನೂ 18 ಲಕ್ಷ ಜನ ಸಾವನ್ನಪ್ಪಿದ್ದಾರೆ ಎಂದು ಚುನಾವಣಾ ಆಯೋಗ ಇತ್ತೀಚೆಗೆ ಬಹಿರಂಗಪಡಿಸಿರುವುದನ್ನು ರಾಹುಲ್ ಗಾಂಧಿ ಎತ್ತಿ ತೋರಿಸಿದರು.

'ಇದು ಕೇವಲ 52 ಲಕ್ಷ ಜನರ ವಿಷಯವಲ್ಲ. ಬಿಹಾರದ ಬಗ್ಗೆ ಮಾತ್ರವಲ್ಲ, ಅವರು ಮಹಾರಾಷ್ಟ್ರದಲ್ಲಿ ಮೋಸ ಮಾಡಿದ್ದಾರೆ. ನಾವು ಚುನಾವಣಾ ಆಯೋಗಕ್ಕೆ ಪ್ರಶ್ನೆಗಳನ್ನು ಕೇಳಿದ್ದೇವೆ, ಮತದಾರರ ಪಟ್ಟಿಯನ್ನು ತೋರಿಸಲು ಹೇಳಿದ್ದೇವೆ; ಅವರು ನಮಗೆ ಮತದಾರರ ಪಟ್ಟಿಯನ್ನು ತೋರಿಸಿಲ್ಲ. ನಾವು ವಿಡಿಯೋಗ್ರಫಿ ಕೇಳಿದ್ದೇವೆ. ಅವರು ಅದನ್ನು ನೀಡಿಲ್ಲ. ಆದರೆ ಕಾನೂನನ್ನು ಬದಲಾಯಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಒಂದು ಕೋಟಿ ಹೊಸ ಮತದಾರರು ಬಂದಿದ್ದರು ಮತ್ತು ಚುನಾವಣೆಯನ್ನು ಕದ್ದಿದ್ದಾರೆ' ಎಂದು ಆರೋಪಿಸಿದರು.

ಕರ್ನಾಟಕದಲ್ಲೂ 'ಭಯಂಕರ್ ಚೋರಿ (ಬೃಹತ್ ಕಳ್ಳತನ)' ಆಗಿರುವುದನ್ನು ನಾವು ಪತ್ತೆ ಹಚ್ಚಿದ್ದೇವೆ. ನಾನು ಅದನ್ನು ನಿಮಗೆ ಮತ್ತು ಚುನಾವಣಾ ಆಯೋಗಕ್ಕೆ ಕಪ್ಪು ಮತ್ತು ಬಿಳಿ ಬಣ್ಣದಲ್ಲಿ ತೋರಿಸುತ್ತೇನೆ. 'ಚೋರಿ'ಯನ್ನು ಹೇಗೆ ಮಾಡಲಾಗುತ್ತದೆ ಮತ್ತು ಎಲ್ಲಿಂದ ಮಾಡಲಾಗುತ್ತದೆ ಎಂಬುದನ್ನು ನಾನು ಬ್ಲ್ಯಾಕ್ ಎಂಡ್ ವೈಟ್‌ನಲ್ಲಿ ತೋರಿಸುತ್ತೇನೆ ಎಂದು ಮಾಜಿ ಕಾಂಗ್ರೆಸ್ ಅಧ್ಯಕ್ಷರು ಹೇಳಿದರು.

ಕರ್ನಾಟಕದ ಒಂದು ಲೋಕಸಭಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಅಲ್ಲಿನ ಚುನಾವಣಾ ಪ್ರಕ್ರಿಯೆ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದೆವು. ಬೋಗಸ್ ವೋಟಿಂಗ್ ಬಗ್ಗೆ ಇಂಚಿಂಚು ಮಾಹಿತಿ ನಮಗೆ ಲಭ್ಯವಾಗಿದೆ. ಎಲ್ಲಾ ವಿಚಾರಗಳನ್ನು ಸದ್ಯದಲ್ಲೇ ಜನರ ಮುಂದೆ ಇಡಲಿದ್ದೇವೆ. ಎಲ್ಲಾ ಕಳ್ಳಾಟ ಸದ್ಯದಲ್ಲೇ ಹೊರಬರಲಿದೆ ಎಂದು ರಾಹುಲ್ ಗಾಂಧಿ ಹೊಸಬಾಂಬ್ ಸಿಡಿಸಿದ್ದಾರೆ.

## 4ನೇ ಟೆಸ್ಟ್: ಮೊದಲ ದಿನದಂತ್ಯಕ್ಕೆ ಭಾರತ 264/4

**ಮ್ಯಾಂಚೆಸ್ಟರ್:** ಯಶಸ್ವಿ ಜೈಸ್ವಾಲ್ ಹಾಗೂ ಸಾಯಿ ಸುದರ್ಶನ್ ಅವರ ಅರ್ಧಶತಕದ ನೆರವಿನಿಂದ ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯದ ಮೊದಲ ದಿನದಂತ್ಯಕ್ಕೆ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿದೆ.

ಇಲ್ಲಿನ ಎಮಿರೇಟ್ಸ್ ಓಲ್ಡ್ ಟ್ರಾಫರ್ಡ್ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಆರಂಭಿಕರಾದ ಕೆ.ಎಲ್.ರಾಹುಲ್, ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 94 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ರಾಹುಲ್ 46 ರನ್ ಗಳಿಸಿ ನಿರ್ಗಮಿಸಿದರೇ, ಜೈಸ್ವಾಲ್ 10 ಬೌಂಡರಿ, 1 ಸಿಕ್ಸರ್ ಒಳಗೊಂಡ 58 ರನ್ ಗಳಿಸಿ ಔಟಾದರು. ನಂತರ ಬಂದ ನಾಯಕ ಶುಭ್‌ಮನ್ ಗಿಲ್ 12 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು.

ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಸಾಯಿ ಸುದರ್ಶನ್ 61 ರನ್ ಗಳಿಸಿ ಔಟಾದರು. ಉಳಿದಂತೆ ರಿಷಬ್ ಪಂತ್ 37 ರನ್ ಗಳಿಸಿ ಗಾಯಗೊಂಡು ನಿರ್ಗಮಿಸಿದರೇ, ರವೀಂದ್ರ ಜಡೇಜಾ, ಶಾರ್ದೂಲ್ ಠಾಕೂರ್ ತಲಾ 19 ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಇಂಗ್ಲೆಂಡ್ ಪರ ಬೆನ್ ಸ್ಟೋಕ್ಸ್ 2, ಲಿಯಾಮ್ ಡಾಸನ್, ಕ್ರಿಸ್ ವೋಕ್ಸ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

## ಜೈನಮುನಿ, ಸಾಧ್ವಿಗಳಿಂದ ಆಶೀರ್ವಾದ

ಮೈಸೂರು,ಜು.23– ಮೈಸೂರಿನ ಸ್ಥಾನಿಕವಾಸಿ ಜೈನ್ ಸಂಘದ ಆವರಣದಲ್ಲಿ ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್ ಸದಸ್ಯರು ಚಾತುರ್ಮಾಸದ ಅಂಗವಾಗಿ ಗುರು ದರ್ಶನ, ಸೇವಾ ಆಶೀರ್ವಾದ ಕಾರ್ಯಕ್ರಮದಡಿ ಮೈಸೂರಿಗೆ ಆಗಮಿಸಿರುವ ಜೈನಮುನಿ ಶ್ರೀ ವೈದೇಹಿ ಮುನೀಜಿ ಮಹಾರಾಜ್ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಮೈಸೂರು ಚಾಪ್ಟರ್ ಅಧ್ಯಕ್ಷ ರಾಜನ್ ಬಾಗ್‌ಮಾರ್, ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಗುಲೇಚಾ, ಚಾಪ್ಟರ್ ಜನರಲ್ ಸೆಕ್ರೆಟರಿ ಬಿ.ಕೆ.ದೀಪಕ್‌ಕುಮಾರ್ ಜೈನ್, ಪ್ರಾದೇಶಿಕ ಅಧ್ಯಕ್ಷ ಸುಖ್‌ರಾಜ್ ವಿನಾಯಕಿಯಾ, ಮಾಜಿ ಅಧ್ಯಕ್ಷರಾದ ಪ್ರಕಾಶ್ ಶ್ರೀ ಶ್ರೀಮಾಲ್, ವಿಮಲ್ ಪಿಟಿಲಿಯಾ, ಖಜಾಂಚಿ ಮನೋಹರ್ ಸಂಕ್ಲಾ, ಉಪಾಧ್ಯಕ್ಷರಾದ ನೇಮಿಚಂದ್ ಪಿಟಿಲಿಯಾ, ಕಾರ್ಯದರ್ಶಿಗಳಾದ ನವರತನ್ ಪಿಟಿಲಿಯಾ, ರಾಜೇಂದ್ರ ದೇಸರಾಲ, ಸುನೀಲ್ ಪಟ್ವಾ, ಸದಸ್ಯರಾದ ಪ್ರಕಾಶ್ ಗಾಂಧಿ, ಲಲಿತ್ ಭಟೇವಾರ, ಪುನೀತ್ ಜುಗ್‌ರಾಜ್, ವಿಕ್ರಂ ಕಾವಡ್, ಕಾರ್ಯದರ್ಶಿ ಸೀಮಾ ಬೋಹ್ರಾ, ಉಪಾಧ್ಯಕ್ಷೆ ಸಂತೋಷ್ ಸಲೇಚಾ, ಜಂಟಿ ಕಾರ್ಯದರ್ಶಿ ಅನಿತಾ ಗಡಿಯಾ, ಸದಸ್ಯರಾದ ಬಿಂದು ಬಾಗ್‌ಮಾರ್, ಸಂಗೀತ ಗುಲೇಚಾ, ಚಂಚಲ್ ಪಿಟಿಲಿಯಾ, ಸೀಮಾ ಪಿಟಿಲಿಯಾ, ಅಂಚಲ್ ದೇಸರಾಲ, ರಿತಾ ಭಟೇವಾರ, ಯೂತ್ ವಿಂಗ್ ಸದಸ್ಯರಾದ ನಿಕಿಲ್ ವೋರಾ, ಪ್ರಿಂಯಾಂಕ ಗುಲೇಚಾ ಮತ್ತಿತರರು ಉಪಸ್ಥಿತರಿದ್ದರು.



ಜೈನಮುನಿ ಶ್ರೀ ವೈದೇಹಿ ಮುನೀಜಿ ಮಹಾರಾಜ್ ಅವರಿಂದ ಆಶೀರ್ವಾದ ಪಡೆದರು.

### ಪಾಕಿಸ್ತಾನಕ್ಕೆ ತೀವ್ರ ಮುಖಭಂಗ

## ಬಲಿಷ್ಠ ಶಾಹೀನ್–3 ಪರಮಾಣು ಕ್ಷಿಪಣಿ ಪರೀಕ್ಷೆ ವೇಳೆ ತನ್ನದೇ ನೆಲದಲ್ಲಿ ಸ್ಫೋಟ

**ಇಸ್ಲಾಮಾಬಾದ್:** ಪಾಕಿಸ್ತಾನ ತಾನು ಹೆಮ್ಮೆಯಿಂದ ಹೇಳಿಕೊಳ್ಳುವ ಹಾಗೂ ತನ್ನ ಬಳಿ ಇರುವ ಶಾಹೀನ್ ಕ್ಷಿಪಣಿ ತೋರಿಸಿ ಜಗತ್ತಿಗೆ ಎದುರಿಸುತ್ತಿತ್ತು. ಆದರೆ ವರದಿಯ ಪ್ರಕಾರ, ಪಾಕಿಸ್ತಾನ ಸೇನೆಯ ಶಾಹೀನ್–3 ಬ್ಯಾಲಿಸ್ಟಿಕ್ ಕ್ಷಿಪಣಿ ಪರೀಕ್ಷೆ ವಿಫಲವಾಗಿದೆ. ಜುಲೈ 22ರಂದು ಪಾಕಿಸ್ತಾನ ಶಾಹೀನ್ 3 ಕ್ಷಿಪಣಿ ಪರೀಕ್ಷೆ ನಡೆಸಿದ್ದು ಅದು ಬಲೂಚಿಸ್ತಾನ್‌ನಲ್ಲಿ ಬಿದ್ದಿದೆ. ಈ ಕ್ಷಿಪಣಿ ನಿಯಂತ್ರಣ ತಪ್ಪಿ ಗುರಿ ತಪ್ಪಿದೆ.

ವರದಿಯ ಪ್ರಕಾರ, ಈ ಕ್ಷಿಪಣಿಯನ್ನು ಪಾಕಿಸ್ತಾನದ ಪಂಜಾಬ್‌ನ ಡೇರಾ ಘಾಜಿ ಖಾನ್‌ನಿಂದ ಹಾರಿಸಲಾಯಿತು. ಆದರೆ ಉಡಾವಣೆಯಾದ ನಂತರ, ಅದು ತನ್ನ ನಿರ್ದಿಷ್ಟ ಗುರಿಯಿಂದ ದಾರಿ ತಪ್ಪಿ ಬಲೂಚಿಸ್ತಾನದ ಗ್ರಾಪನ್ ಪಾಸ್‌ನಲ್ಲಿರುವ ಲೂಪ್ ಸೆಹ್ರಾನಿ ಲೆವೀಸ್ ನಿಲ್ದಾಣದಿಂದ ಕೇವಲ 500 ಮೀಟರ್ ದೂರದಲ್ಲಿ ಬಿದ್ದಿದೆ. ಶಾಹೀನ್–3 ಕ್ಷಿಪಣಿ ವಿಫಲವಾಗಿದೆ ಎಂದು ಸ್ಥಳೀಯ ಬಲೂಚ್ ನಾಗರಿಕರು ವೀಡಿಯೊವನ್ನು ಬಿಡುಗಡೆ ಮಾಡಿದ್ದಾರೆ. ಈ ಕ್ಷಿಪಣಿ ನಾಗರಿಕ ಪ್ರದೇಶದಲ್ಲಿ ಇನ್ನೂ ಕೆಲವು ಮೀಟರ್‌ಗಳಷ್ಟು ಬಿದ್ದಿದ್ದರೆ, ದೊಡ್ಡ ಅಪಘಾತ ಸಂಭವಿಸಬಹುದಿತ್ತು ಮತ್ತು ಅನೇಕ ನಾಗರಿಕರು ಪ್ರಾಣ ಕಳೆದುಕೊಳ್ಳಬಹುದಿತ್ತು ಎಂದು ಬಲೂಚ್‌ಗಳು ಹೇಳಿದ್ದಾರೆ.

## ನೇಮಕಾತಿ ಪತ್ರ ವಿತರಣೆ



ಮೈಸೂರು ಕೃಷ್ಣಮೂರ್ತಿಪುರಂ ರಾಮಮಂದಿರದಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಭೆಯಲ್ಲಿ ಟಿ.ಎಸ್.ಅರುಣ್ ಅವರಿಗೆ ಜಂಟಿ ಕಾರ್ಯದರ್ಶಿಯಾಗಿ ನೇಮಕಾತಿ ಪತ್ರವನ್ನು ಮಹಾಸಭಾ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ನೀಡಿದರು. ಈ ವೇಳೆ ಮೈಸೂರು ಜಿಲ್ಲಾ ಪ್ರತಿನಿಧಿ ಹಾಗೂ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್, ಮೈಸೂರು ಜಿಲ್ಲಾ ಪ್ರತಿನಿಧಿ ಹಾಗೂ ಸಂಘಟನಾ ಕಾರ್ಯದರ್ಶಿ ಡಾ.ಲಕ್ಷ್ಮೀ ದೇವಿ, ಉಪಾಧ್ಯಕ್ಷ ಎಚ್.ವಿ.ರಾಜೀವ್, ಅನಿಲ್, ಬಾಲಕೃಷ್ಣ, ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ್, ಜಂಟಿ ಕಾರ್ಯದರ್ಶಿ ಕಲ್ಕರೆ ನಾಗರಾಜ್, ಶಂಕರ್ ನಾರಾಯಣ, ಪ್ರಶಾಂತ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಸತ್ಯನಾರಾಯಣ ಉಪಸ್ಥಿತರಿದ್ದರು.

## ಕಲಾಸಿಪಾಳ್ಯದಲ್ಲಿ ಸ್ಫೋಟಕ ವಸ್ತುಗಳು ಪತ್ತೆ


**ಬೆಂಗಳೂರು:** ನಗರದ ಕಲಾಸಿಪಾಳ್ಯ ಬಿಎಂಟಿಸಿ ಬಸ್ ನಿಲ್ದಾಣದ ಆವರಣದಲ್ಲಿರುವ ಶೌಚಾಲಯದ ಬಳಿ ಇಡಲಾಗಿದ್ದ ಬ್ಯಾಗ್‌ವೊಂದರಲ್ಲಿ ಸ್ಫೋಟಕ ವಸ್ತುಗಳು ಪತ್ತೆ ಆಗಿದ್ದು, ಆತಂಕದ ವಾತಾವರಣ ಸೃಷ್ಟಿಯಾಗಿದೆ.

ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್ ಪತ್ತೆಯಾಗಿದೆ. ಸ್ಥಳಕ್ಕೆ ಕಲಾಸಿಪಾಳ್ಯ ಠಾಣೆಯ ಪೊಲೀಸರು, ಬಾಂಬ್ ತಪಾಸಣೆ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದ್ದಾರೆ.

## ನಾಳೆ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪರ 3 ಕೃತಿಗಳ ಬಿಡುಗಡೆ

ಮೈಸೂರು,ಜು.23(ಪಿಎಂ)– ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರು ಮೈಸೂರಿನ ಗಲ್ಲಿಗಳು ಹಾಗೂ ವೃತ್ತಗಳ ಇತಿಹಾಸದ ಕುರಿತು ಬರೆದ ಎರಡು ಪುಸ್ತಕಗಳು ಮತ್ತು ವೀರ ಸೇನಾನಿಗಳ ಸಾಹಸ ಗಾಥೆ ಒಳಗೊಂಡ ಮತ್ತೊಂದು ಕೃತಿ ಸೇರಿದಂತೆ ಒಟ್ಟು ಮೂರು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಜು.25 ರಂದು ನಡೆಯಲಿದೆ.

ಮೈಸೂರು ಕಲ್ಚರಲ್ ಅಸೋಸಿಯೇಷನ್, ವಿಸ್ಮಯ ಪ್ರಕಾಶನ ಹಾಗೂ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ (ಸಂಗೀತ ವಿವಿ) ಸಂಯುಕ್ತಾಶ್ರಯದಲ್ಲಿ ಅಂದು ಬೆಳಗ್ಗೆ 10.15ಕ್ಕೆ ಸಂಗೀತ ವಿವಿಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ 'ಮೈಸೂರು ವೃತ್ತಗಳ ವೃತ್ತಾಂತ', 'ಸಿಂದೂರ' ಮತ್ತು 'ಮೈಸೂರು ಗಲ್ಲಿ ಕಥೆಗಳು' ಎಂಬ ಮೂರು ಕೃತಿಗಳು ಬಿಡುಗಡೆಯಾಗಲಿವೆ.




ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಉದ್ಘಾಟಿಸಲಿದ್ದಾರೆ. ಮಹಾವೀರ ಚಕ್ರ ಪುರಸ್ಕೃತ ವೀರ ಸೇನಾನಿ ಲೆ.ಕ.ಪಿ.ಎಸ್. ಗಣಪತಿ (ಎಂವಿಸಿ), ಕರ್ನಾಟಕ ಪೊಲೀಸ್ ಅಕಾಡೆಮಿ ಸಹಾಯಕ ನಿರ್ದೇಶಕ ಸಂದೇಶ್ ಕುಮಾರ್ ಹಾಗೂ ಪತ್ರಕರ್ತ ಸುದರ್ಶನ ಚನ್ನಂಗಿಹಳ್ಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**24.07.2025 ಗುರುವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025**
**ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,**
**ತಿಥಿ: ಅಮಾವಾಸ್ಯೆ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್‌ಗಳ ಬಗ್ಗೆ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಆರ್ಥರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೀತಿಬಕುಷ್ಠ (ಸೋರಿಯಾಸಿಸ್) ಮಕ್ಕಳಲ್ಲಿ ಕಂಡುಬರುವ ನೆಗಡಿ, ಕೆಮ್ಮು, ಅಸ್ತಮಾ ಮತ್ತು ಅಲರ್ಜಿ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ನಾಡೋಜ ಡಾ. ರಾಜಕುಮಾರ್ ಅಧ್ಯಯನ ಪೀಠ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಶೇಷಾದ್ರಿಪುರಂ ಪದವಿ ಕಾಲೇಜು :** ಸಾಕ್ಷ್ಯಚಿತ್ರ ಮತ್ತು ಪುಸ್ತಕಗಳ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಹಂಪಿ ಕನ್ನಡ ವಿವಿ ಕುಲಪತಿ ಪ್ರೊ ಡಿ.ವಿ. ಪರಮಶಿವಮೂರ್ತಿ, ಅಧ್ಯಕ್ಷತೆ : ಶೇಷಾದ್ರಿಪುರಂ ಪದವಿ ಕಾಲೇಜು ಗೌರವ ಕಾರ್ಯದರ್ಶಿ ನಾಡೋಜ ವೂಡೇ ಪಿ. ಕೃಷ್ಣ, ಪುಸ್ತಕ ಲೋಕಾರ್ಪಣೆ : ಡಾ. ರಾಜ್‌ಕುಮಾರ್ ಅವರ ಪುತ್ರಿ ಶ್ರೀಮತಿ ಪೂರ್ಣಿಮಾ ರಾಮಕುಮಾರ್, ಪುಸ್ತಕಗಳ ಕುರಿತು: ಪ್ರಾಧ್ಯಾಪಕ ಪ್ರೊ. ಎಂ. ಕೃಷ್ಣೇಗೌಡ, ಚಲನಚಿತ್ರ ನಿರ್ದೇಶಕ ಬಿ.ಎಂ. ಗಿರಿರಾಜ್, ಉಪಸ್ಥಿತರು: ಹಂಪಿ ಕನ್ನಡ ವಿವಿ ಕುಲಸಚಿವ ಪ್ರೊ. ವಿಜಯ್ ಪೂಣಚ್ಚ ತಂಬಂಡ, ಪ್ರಕಾಶರಾಜ್ ಮೇಹು, ಪ್ರೊ. ಜಿ. ಪ್ರಶಾಂತ್‌ನಾಯಕ್, ಪ್ರೊ ಡಿ. ಸತೀಶ್‌ಚಂದ್ರ, ಬಿ.ಎ. ಅನಂತರಾಮು, ಸ್ಥಳ: ಕಾಲೇಜು ಸಭಾಂಗಣ, ಭಾರತ್ ಕ್ಯಾನ್ಸರ್ ಆಸ್ಪತ್ರೆ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನಾ ವಿಸ್ತರಣಾ ಕೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ವಿಶೇಷ ಉಪನ್ಯಾಸ ಮತ್ತು ವಚನ ಜಿಜ್ಞಾಸೆ ಪುಸ್ತಕ ಬಿಡುಗಡೆ ಹಾಗೂ ವಚನ ವಿಮರ್ಶೆಯ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ ಮತ್ತು ಪುಸ್ತಕ ಬಿಡುಗಡೆ : ಶಂಕರ ದೇವನೂರು, ಅಧ್ಯಕ್ಷತೆ : ಡಾ. ಎನ್.ಕೆ. ಲೋಲಾಕ್ಷಿ, ಬಹುಮಾನ ವಿತರಣೆ : ಡಾ. ವಿಜಯಕುಮಾರಿ ಕರಿಕಲ್, ಡಾ. ಎಸ್.ಡಿ. ಶಶಿಕಲಾ, ಪ್ರಾಸ್ತಾವಿಕ ನುಡಿ : ಡಾ. ಅರವಿಂದ ಮಾಲಗತ್ತಿ, ಸ್ಥಳ: ಮಹಾಮನೆ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಮತ್ತು ಎಸ್‌ವಿವೈಎಂ** : 8ನೇ ಮೈಸೂರು ವಿಜ್ಞಾನ ನಾಟಕೋತ್ಸವ, ಸಂಜೆ 4.30 ರಿಂದ ಉದ್ಘಾಟನೆ, ವಯೋಲಿನ್ ವಾದನ ಹಾಗೂ ನಲ್ನುಡಿ, ಉಪಸ್ಥಿತರು : ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ನಿರ್ದೇಶಕಿ ಡಾ. ಅನ್ನಪೂರ್ಣಿ ಸುಬ್ರಮಣ್ಯಂ, ಬಿ.ಎಸ್. ಕೃಷ್ಣಮೂರ್ತಿ, ಪ್ರಧಾನ ಭಾಷಣ : ಕಾದಂಬರಿಕಾರ ನೀಲಾಂಜನ ಚೌದರಿ, ಸೂರ್ಯ ಕಲೆಯ ವೀಕ್ಷಣೆ, ಮಹಿಳಾ ವಿಜ್ಞಾನಿಗಳು ಹಾಗೂ ಪುಸ್ತಕ ಪ್ರದರ್ಶನ, ಸಂಜೆ 6.30ಕ್ಕೆ ಬೆಂಗಳೂರಿನ ರಿದ್ಧಿ ರಂಗ ತಂಡದಿಂದ ನಾಟಕ 'ದಿ ಟ್ರಯಲ್ ಆಫ್ ಅಬ್ದುಸ್ ಸಲಾಮ್ (ಇಂಗ್ಲೀಷ್ ನಾಟಕ), ರಚನೆ ಮತ್ತು ನಿರ್ದೇಶನ : ನೀಲಾಂಜನ ಚೌಧರಿ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಗಳು, ಬೆಳಗ್ಗೆ 7.30ಕ್ಕೆ ತೈಲಾಭಿಷೇಕ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ರಾತ್ರಿ 7.30ಕ್ಕೆ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ಉತ್ಸವ, ಪ್ರಸಾದ ವಿನಿಯೋಗ, ಸ್ಥಳ : ದೇವಸ್ಥಾನ, ಕೆ.ಆರ್. ಮೊಹಲ್ಲಾ.

**ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.**

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸಂಜೆ 6.30ಕ್ಕೆ ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಮುಡುಕುತೊರೆ ಶ್ರೀ ಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮೀಜಿ, ಉದ್ಘಾಟನೆ : ಉಪ ವಿಭಾಗಾಧಿಕಾರಿ ಆಶಪ್ಪ, ಅಧ್ಯಕ್ಷತೆ : ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಸಂಜೆ 7 ರಿಂದ ಕನ್ನಡ ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಪ್ರವಚನ, ವಾಚನ : ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ,

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಿ. ಶಾಂತ ಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಪಿ.ಎಸ್. ರಂಜನಿ ಹಾಗೂ ಜಿ.ಪುಷ್ಪಲತಾ, ವ್ಯಾಖ್ಯಾನ : ಡಾ.ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.05 ಸರ್ಕೋಮ– ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.10 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ ನಾಗಮಂಗಲದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಬಿ.ಶಿವರಾಮು, ಪ್ರಸ್ತುತಿ : ಶಾಂತಕುಮಾರ್ .ಜಿ.

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಜಿ.ಎಸ್.ಟಿ. ತೆರಿಗೆ ಕುರಿತು ನೇರ ಫೋನ್–ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ–ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆಯ ಅಪರ ಆಯುಕ್ತರು ಹಾಗೂ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಸದಸ್ಯರಾದ ಪದ್ಮಾಕರ ಆರ್.ಕುಲಕರ್ಣಿ, ಪ್ರಸ್ತುತಿ–ಎನ್.ಕೇಶವಮೂರ್ತಿ ಹಾಗೂ ಬೇದ್ರೆ ಮಂಜುನಾಥ್, 6.50 ಕೃಷಿರಂಗ ಕಿಸಾನ್ ವಾಣಿ– ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕಡೆಯ ಕಾರ್ಯಕ್ರಮ, ರೈತ ಉತ್ಪಾದಕ ಕಂಪನಿಗಳ ನಿರ್ವಹಣೆ ಈ ಕುರಿತು ಸಂವಾದ–ಭಾಗವಹಿಸುತ್ತಾರೆ –ಹನೂರಿನ ಮುತ್ತತ್ತರಾಯ ರೈತ ಉತ್ಪಾದಕ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ರಾಮಸ್ವಾಮಿ ಮತ್ತು ಮದ್ದೂರು ತಾಲೂಕು ಕೆಸ್ತೂರಿನ ಆತಗುರು ರಾಗಿ ರೈತ ಉತ್ಪಾದಕ ಕಂಪನಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸಿ.ಕೆ.ಕವಿತಾ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರ

ಮೈಸೂರು ಮಿತ್ರ




ಆತ್ಮೀಯ ಜನಪ್ರಿಯ ಶಾಸಕರಾದ
ಶ್ರೀ ಕೆ. ಹರೀಶ್‌ಗೌಡ ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಾಶಯಕೋರುವವರು :
ಶ್ರೀರಂಗರಾಜು, ಉದ್ಯಮಿಗಳು, ಮೈಸೂರು
VISMAYA PRINTS
8050302424



## ಅಪಘಾತ ತಡೆಗಟ್ಟುವ ಮಹದುದ್ದೇಶದಿಂದ

# ಮೈಸೂರಲ್ಲಿ ಸಂಚಾರ ಬೀಟ್ ವ್ಯವಸ್ಥೆ ಜಾರಿ

### ಅಪಘಾತಕ್ಕೀಡಾಗುವ ವ್ಯಕ್ತಿಯ ಫೋಟೋ, ವಿಡಿಯೋ ತೆಗೆಯುವ ಬದಲು ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆಯಿರಿ: ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸಲಹೆ

● ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡುವ ದಾವಂತ ಬೇಡ ● ಕಳೆದ ವರ್ಷಕ್ಕಿಂತ ಈ ಬಾರಿ ಅಪಘಾತಗಳ ಸಂಖ್ಯೆ ಇಳಿಮುಖ ● ಸಮಸ್ಯೆ ಹೇಳುವ ಬದಲು, ಸಲಹೆ ನೀಡಿ; ಸಂಚಾರ ನಿಯಮ ಪಾಲಿಸಿ-ಪ್ರಾಣ ಉಳಿಸಿಕೊಳ್ಳಿ

ಮೈಸೂರು, ಜು.23(ಬಿಎಲ್‌ಯು)– ರಸ್ತೆ ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಿ ಫೋಟೋ, ವಿಡಿಯೋ ಮಾಡಿ ಸೋಷಿಯಲ್ ಮೀಡಿಯಾಗೆ ವೈರಲ್ ಮಾಡುವ ಬದಲು ಅಪಘಾತಕ್ಕೀಡಾದ ವ್ಯಕ್ತಿಯನ್ನು ಮೊದಲು ಆಸ್ಪತ್ರೆಗೆ ದಾಖಲಿಸುವ ಮಾನವೀಯತೆ ಮೆರೆಯಬೇಕು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸಲಹೆ ನೀಡಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಇಂದು ಸಂಚಾರ ಬೀಟ್ ವ್ಯವಸ್ಥೆ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿಗೆ ನಗರದ ರಾಮಾನುಜ ರಸ್ತೆಯಲ್ಲಿ ಆಟೋವೊಂದರಲ್ಲಿದ್ದವರ ಮೇಲೆ ಹಲ್ಲೆ ನಡೆಯಿತು. ಈ ವಿಚಾರದ ಬಗ್ಗೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡುವ ಬದಲು ಮೊಬೈಲ್‌ನಲ್ಲಿ ಫೋಟೋ ಮತ್ತು ವಿಡಿಯೋ ರೆಕಾರ್ಡ್ ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಫೋಟೋ ಮತ್ತು ವಿಡಿಯೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡುವ ದಾವಂತ ಬಿಟ್ಟು ಮಾನವೀಯತೆಯ ಕಾರ್ಯದಲ್ಲಿ ತೊಡಗಬೇಕು ಎಂದು ಸೀಮಾ ಲಾಟ್ಕರ್ ಕಿವಿಮಾತು ಹೇಳಿದರು.

ಮೈಸೂರಿನಲ್ಲಿ ಮೊದಲ ಬಾರಿಗೆ ಸಂಚಾರ ಬೀಟ್ ವ್ಯವಸ್ಥೆಯನ್ನು ಇಂದಿನಿಂದ ಜಾರಿಗೆ ತರಲಾಗಿದೆ. ಬೀಟ್ ಎಂದ ಮಾತ್ರಕ್ಕೆ ಕಳ್ಳತನ, ದರೋಡೆ ಕೃತ್ಯಗಳನ್ನು ನಿಯಂತ್ರಿಸುವ ಗಸ್ತು ಅಲ್ಲ. ಇದು ಅಪಘಾತಗಳನ್ನು ತಡೆಗಟ್ಟುವ ಸುರಕ್ಷತಾ ಕ್ರಮಗಳಾಗಿದೆ. ನಾಗರಿಕರನ್ನು ಬಳಸಿಕೊಂಡು ರಸ್ತೆ ಸುರಕ್ಷತಾ ವ್ಯವಸ್ಥೆಯಲ್ಲಿ ಸುಧಾರಣೆ ತರುವುದೇ ಆಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಕಳೆದ ವರ್ಷಕ್ಕಿಂತ ಈ ಬಾರಿ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ. ಇದು ಸಮಾಧಾನ ತರುವ ವಿಚಾರವಾಗಿದೆ ಎಂದು ಹೇಳಿದರು.

ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ನಾಗರಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಚಾರ ಬೀಟ್ ವ್ಯವಸ್ಥೆ ರೂಪಿಸಲಾಗುವುದು. ಈ ಮೂಲಕ ರಸ್ತೆ ಸುರಕ್ಷತಾ ಕ್ರಮ ಕೈಗೊಳ್ಳುವುದರ ಜೊತೆಗೆ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಇದರ ಮೂಲ ಉದ್ದೇಶವಾಗಿದೆ. ಸಂಚಾರ ಬೀಟ್ ವ್ಯವಸ್ಥೆಯಲ್ಲಿ ರಚಿಸಿರುವ ನಾಗರಿಕ ಸಮಿತಿ ಸದಸ್ಯರು ಸಮಸ್ಯೆ ಹೇಳುವ ಬದಲು ಸಲಹೆ ತಿಳಿಸಿ ಎಂದು ಸೀಮಾ ಲಾಟ್ಕರ್ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಸಂಚಾರ ವಿಭಾಗದ ಡಿಸಿಪಿ ಬಿಂದುಮಣಿ, ನಾವು ರೂಪಿಸುವ ಕಾರ್ಯಕ್ರಮ ಯೋಜನಾಬದ್ಧವಾಗಿದ್ದರೆ ಅದರಲ್ಲಿ ನಾವು ಯಶಸ್ವಿಯಾಗುತ್ತೇವೆ. ಇದೇ ರೀತಿ ಈಗ ಮೈಸೂರಿನಲ್ಲಿ ಮೊದಲ ಬಾರಿಗೆ ಪರಿಚಯಿಸಿರುವ ಸಂಚಾರ ಬೀಟ್ ವ್ಯವಸ್ಥೆ ಕೂಡ ಸುಗಮವಾಗಿ ಅನುಷ್ಠಾನವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಡಿಸಿಪಿ ಸುಂದರ್ ರಾಜ್, ಸುರಕ್ಷಿತ ಸಂಚಾರ ವ್ಯವಸ್ಥೆ ರೂಪಿಸಲು ಸಂಚಾರ ಬೀಟ್ ವ್ಯವಸ್ಥೆ ಪರಿಚಯಿಸಲಾಗಿದೆ. ಇದರ ಮೂಲಕ ಸಂಚಾರ ವ್ಯವಸ್ಥೆಯಲ್ಲಿ ಹಲವು ಸುಧಾರಣೆ ತರಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ಪ್ರತಿ ದಿನ ಅಪಘಾತದಿಂದ ಬಹಳಷ್ಟು ಜನರು ಸಾವನ್ನಪ್ಪುತ್ತಿದ್ದಾರೆ. ಹೆಲ್ಮೆಟ್ ಧರಿಸದಿರುವುದು, ಸಂಚಾರ ನಿಯಮ ಪಾಲಿಸದಿರುವುದು ಸೇರಿದಂತೆ ಹಲವು ನಿಯಮ ಉಲ್ಲಂಘನೆ ಇದಕ್ಕೆ ಮೂಲ ಕಾರಣವಾಗಿದೆ ಎಂದು ಹೇಳಿದರು.

ಬಹಳಷ್ಟು ಜನರು ಸಂಚಾರಿ ಪೊಲೀಸರಿಂದ ಪಾರಾಗಲು ಹೆಲ್ಮೆಟ್ ಧರಿಸುತ್ತಾರೆ. ಕೆಲವರು ದ್ವಿಚಕ್ರ ವಾಹನದ ಮುಂದೆ ಹೆಲ್ಮೆಟ್ ಇಟ್ಟುಕೊಂಡಿರುತ್ತಾರೆ. ಸಂಚಾರಿ ಪೊಲೀಸರನ್ನು ನೋಡಿದ ಕೂಡಲೇ ಹೆಲ್ಮೆಟ್ ಧರಿಸುತ್ತಾರೆ. ಆದರೆ ಹೆಲ್ಮೆಟ್ ನಮ್ಮ ಪ್ರಾಣ ಉಳಿಸಲು ಇರುವ ಸುರಕ್ಷಾ ಸಾಧನಾ ಎಂಬ ಸತ್ಯಾಂಶ ವಾಹನ ಸವಾರರಿಗೆ ತಿಳಿದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹೆಲ್ಮೆಟ್ ಧರಿಸದ ಕಾರಣ ಬಹಳಷ್ಟು ಜನರು ಸಾವನ್ನಪ್ಪಿರುವ ನಿದರ್ಶನಗಳಿವೆ. ಈ ಹಿನ್ನೆಲೆ ಸಂಚಾರ ನಿಯಮಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

ವಿದೇಶದಲ್ಲಿ ಅಪಘಾತಗಳ ಸಂಖ್ಯೆ ವಿರಳ. ಆದರೆ ಭಾರತದಲ್ಲಿ ಅತೀ ಹೆಚ್ಚು ಸಂಖ್ಯೆ ಕೆಲವರು, ಅಪಘಾತಗಳು ಸಂಭವಿಸುತ್ತವೆ. ಈ ಹಿನ್ನೆಲೆಯಲ್ಲಿ ಸುರಕ್ಷತಾ ರಸ್ತೆ ಸಂಚಾರ ವ್ಯವಸ್ಥೆ ಅನುಷ್ಠಾನ ಮಾಡಲು ಸಂಚಾರ ಬೀಟ್ ವ್ಯವಸ್ಥೆಯನ್ನು ಇಂದಿನಿಂದ ಜಾರಿ ಮಾಡಲಾಗಿದೆ. ಆಯಾ ಪೊಲೀಸ್ ಠಾಣೆಗಳಲ್ಲಿ ಆಗಾಗೆ ನಾಗರಿಕ ಸಮಿತಿಗಳ ಸಭೆ ನಡೆಸಲಾಗುವುದು ಎಂದು ಶಿವಶಂಕರ್ ತಿಳಿಸಿದರು. ಮೈಸೂರು ನಗರದ ಪೊಲೀಸ್ ಠಾಣೆಗಳಲ್ಲಿ ರಚಿಸಿರುವ ನಾಗರಿಕ ಸಮಿತಿಯ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### ರಸ್ತೆ ಸುರಕ್ಷತೆ ಸುಧಾರಣೆಗೆ ಪೊಲೀಸ್ ಇಲಾಖೆಯ ದಿಟ್ಟ ಸುಧಾರಣಾ ಕ್ರಮ

ಮೈಸೂರು, ಜು.23(ಬಿಎಲ್‌ಯು)– ಮೈಸೂರು ನಗರದಲ್ಲಿ ಹೆಚ್ಚುತ್ತಿರುವ ಅಪಘಾತಗಳನ್ನು ನಿಯಂತ್ರಿಸಿ ರಸ್ತೆ ಸುರಕ್ಷತಾ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆ ದಿಟ್ಟ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಸಾರ್ವಜನಿಕರ ಸಂಪರ್ಕದೊಂದಿಗೆ ಸಂಚಾರ ವ್ಯವಸ್ಥೆಯನ್ನು ಸುಧಾರಿಸಲು ಜನಸ್ನೇಹಿ ಮತ್ತು ಸಬಲೀಕರಣಗೊಂಡ ಸಂಚಾರ ಬೀಟ್ ವ್ಯವಸ್ಥೆಯನ್ನು ಇಂದಿನಿಂದ ಜಾರಿ ಮಾಡಲಾಗಿದೆ. ಅಲ್ಲದೆ ಸುರಕ್ಷಿತ, ಶಿಸ್ತುಬದ್ಧ ಮತ್ತು ಪರಿಣಾಮಕಾರಿ ಸಂಚಾರ ಬೀಟ್ ವ್ಯವಸ್ಥೆ ಯಶಸ್ವಿಗೊಳಿಸಲು ಸಾರ್ವಜನಿಕರ ತೊಡಗಿಸಿಕೊಳ್ಳಲಾಗಿದೆ.



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಬುಧವಾರ ನಡೆದ ಸಂಚಾರ ಬೀಟ್ ವ್ಯವಸ್ಥೆಯನ್ನು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಉದ್ಘಾಟಿಸಿದರು. ಡಿಸಿಪಿಗಳಾದ ಸುಂದರ್ ರಾಜ್, ಬಿಂದುಮಣಿ, ಎಸಿಪಿ ಶಿವಶಂಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

### ಸಂಚಾರ ಬೀಟ್ ಮೇಲ್ವಿಚಾರಣೆ; ಪರಿಶೀಲನೆ

ಬೀಟ್ ಮೇಲುಸ್ತುವಾರಿ ಅಧಿಕಾರಿಗಳು ವಾರಕ್ಕೊಮ್ಮೆ ಸಂಚಾರ ಬೀಟ್‌ಗಳ ಪರಿಶೀಲನೆ ನಡೆಸುವುದು. ಬೀಟ್ ನಲ್ಲಿ ತುರ್ತು ಮಾಹಿತಿಗಳಿದ್ದಲ್ಲಿ ಅದನ್ನು ಮೇಲಾಧಿಕಾರಿಗಳಿಗೆ ವರದಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದು.

- ಸಂಚಾರ ಬೀಟ್ ವ್ಯವಸ್ಥೆಯಲ್ಲಿ ಆರು ಸಿವಿಲ್ ಪೊಲೀಸ್ ಸ್ಟೇಷನ್‌ಗಳನ್ನು ಒಟ್ಟುಗೂಡಿಸಿ ಒಂದು ಸ್ಟೇಷನ್ ಎಂದು ಪರಿಗಣಿಸಲಾಗಿದೆ.
- ಒಂದು ಬೀಟ್ ಸ್ಟೇಷನ್‌ನಲ್ಲಿ 4 ಪೊಲೀಸ್ ಪೇದೆಗಳಿರುತ್ತಾರೆ.
- ಹಾಗೆಯೇ ತಲಾ ಒಬ್ಬೊಬ್ಬ ಪಿಎಸ್‌ಐ, ಎಎಸ್‌ಐ ಇರುತ್ತಾರೆ.
- ಮೈಸೂರಿನಲ್ಲಿರುವ ಎಲ್ಲಾ 36 ಸ್ಟೇಷನ್‌ಗಳಲ್ಲಿ ಸಂಚಾರ ಬೀಟ್ ವ್ಯವಸ್ಥೆ ಜಾರಿಯಲ್ಲಿರುತ್ತದೆ.
- ಒಂದು ಸ್ಟೇಷನ್‌ಗೆ ಐವರು ಪರಿಣಿತರ ಆಯ್ಕೆ ಮಾಡಲಾಗಿದೆ.
- ಸಂಚಾರ ಬೀಟ್‌ನಲ್ಲಿ ಜನ ಬರೀ ಸಮಸ್ಯೆ ಹೇಳುವ ಬದಲು ಸಲಹೆ ನೀಡಬೇಕಿದೆ.

#### ಸಂಚಾರ ಬೀಟ್ ವ್ಯವಸ್ಥೆಯ ಉದ್ದೇಶಗಳು–

- ಪ್ರತಿ ಸಂಚಾರ ಬೀಟ್ ವ್ಯಾಪ್ತಿಯಲ್ಲಿ ನಿರಂತರ ಸಂಚಾರ ಮೇಲ್ವಿಚಾರಣೆಗಾಗಿ ಕಾರ್ಯೋನ್ಮುಖ ಸಂಚಾರ ಅಧಿಕಾರಿ ಮತ್ತು ಸಿಬ್ಬಂದಿ ನಿಯೋಜಿಸುವುದು
- ಸಂಚಾರ ಬೀಟ್ ವೇಳೆ ಸಂಭವಿಸುವ ರಸ್ತೆ ಅಪಘಾತ ಮತ್ತು ಸಂಚಾರ ಅಡಚಣೆಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸುವುದು
- ಜಂಕ್ಷನ್‌ಗಳಲ್ಲಿ ಹಾಗೂ ಅಪಘಾತ ವಲಯಗಳಲ್ಲಿ ಮೋಟಾರು ವಾಹನ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವುದು

#### ಸಂಚಾರ ಬೀಟ್ ಅಧಿಕಾರಿಗಳ ಪ್ರಮುಖ ಜವಾಬ್ದಾರಿಗಳು

- ಟ್ರಾಫಿಕ್ ಸಿಗ್ನಲ್ ಲೈಟ್‌ಗಳು, ಸಿಸಿಟಿವಿ, ಸಂಚಾರಿ ಪರಿಕರಗಳ ಕಾರ್ಯ ನಿರ್ವಹಣೆ ಬಗ್ಗೆ ಪರಿಶೀಲಿಸುವುದು
- ಅನಧಿಕೃತ ಪಾರ್ಕಿಂಗ್, ಫುಟ್ ಪಾತ್, ರಸ್ತೆ ಅತಿಕ್ರಮಣ ತೆರವಿಗೆ ಕ್ರಮ, ರಸ್ತೆ ಗುಂಡಿಗಳು ಮತ್ತು ಇತರೆ ಸಂಚಾರ ಅಡೆತಡೆಗಳ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡುವುದು
- ಬೀಟ್ ಸಿಬ್ಬಂದಿಯು ನಿರ್ವಹಿಸುವ ಸಂಚಾರ ಬೀಟ್ ಪುಸ್ತಕವನ್ನು ನಿರಂತರವಾಗಿ ಪರಿಶೀಲಿಸುವುದು. ಬೀಟ್ ಪುಸ್ತಕ ನಿರ್ವಹಣೆ ಸಂಬಂಧ ಸಿಬ್ಬಂದಿಗೆ ಅಗತ್ಯ ಸಲಹೆ-ಸೂಚನೆ ನೀಡುವುದು.
- ಬೀಟ್ ವ್ಯಾಪ್ತಿಯಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಬೀಟ್ ವ್ಯಾಪ್ತಿಯ ನಿವಾಸಿಗಳೊಡನೆ ಸಂಚಾರ ಅರಿವು ಕಾರ್ಯಕ್ರಮ ರೂಪಿಸುವುದು.

## ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ನಿವಾಸದಲ್ಲಿ ಒಳಮೀಸಲಾತಿ ಕುರಿತು ಚರ್ಚೆ



ಸಂಸದ ಗೋವಿಂದ ಕಾರಜೋಳ, ಮಾಜಿ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಅವರು ಹಿರಿಯ ವಕೀಲ ಎಸ್. ಅರುಣ್‌ಕುಮಾರ್ ನಿವಾಸಕ್ಕೆ ಭೇಟಿ ನೀಡಿ, ಒಳಮೀಸಲಾತಿ ಬಗ್ಗೆ ಚರ್ಚಿಸಿದರು.

ಮೈಸೂರು, ಜು.23– ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್. ಅರುಣ್ ಕುಮಾರ್ ಅವರ ಮನೆಗೆ ಚಿತ್ರದುರ್ಗ ಸಂಸದ ಎಂ.ಗೋವಿಂದ ಕಾರಜೋಳ ಹಾಗೂ ಮಾಜಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಭೇಟಿ ನೀಡಿ, ಸುಮಾರು 30 ವರ್ಷಗಳಿಂದ ಒಳ ಮೀಸಲಾತಿಗಾಗಿ ಹೋರಾಟ ಮಾಡುತ್ತಿರುವ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳು ಆಗಸ್ಟ್ ಒಂದರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿ ಒಂದು ವರ್ಷ ಆಗುವ ಹಿನ್ನೆಲೆಯಲ್ಲಿ ಶೀಘ್ರಗತಿಯಲ್ಲಿ ಒಳ ಮೀಸಲಾತಿಯನ್ನು ಜಾರಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು.

ಇದೇ ಆಗಸ್ಟ್ ಒಂದರಂದು ನಡೆಯಲಿರುವ ಹೋರಾಟಕ್ಕೆ ಸಮಾಜದ ಎಲ್ಲಾ ಸಂಘಟನೆಗಳು, ಪಕ್ಷಾತೀತ ನಾಯಕರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋರಾಟವನ್ನು ಮುನ್ನಡೆಸಲು ಕರೆ ಕೊಟ್ಟರು.

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ಉಪಾಧ್ಯಕ್ಷರೂ ಆದ ಹಿರಿಯ ವಕೀಲರಾದ ಶಿವಕುಮಾರ್ ಎಂ ಬೆಳ್ತೂರು, ಎಂ ದಾಸಪ್ಪ ಮಾಳಪ್ಪ ಕುರ್ಕಿ, ಎಂ ಆರ್ ಸುರೇಂದ್ರ ಕುಮಾರ್, ಎಸ್.ರಾಜು, ಸಮಾಜದ ಮುಖಂಡರಾದ ಅರಕಲವಾಡಿ ನಾಗೇಂದ್ರ, ಪ್ರಸನ್ನ ಚಕ್ರವರ್ತಿ, ರವಿಕುಮಾರ್, ನಾಗರಾಜು, ಸ್ವಾಮಿ, ನಂಜನಗೂಡು ಮಧು, ಪ್ರಸನ್ನ, ಡಾ.ಬಸವರಾಜ್ ಮತ್ತು ವಿದ್ಯಾರ್ಥಿ ಮುಖಂಡರುಗಳು ಹಾಗೂ ಸಮಾಜ ಮುಖಂಡರುಗಳು ಉಪಸ್ಥಿತರಿದ್ದರು

## ಪೌರಕಾರ್ಮಿಕರಿಗೆ ಪಾದಪೂಜೆ ಸಲ್ಲಿಸಿ ಸನ್ಮಾನ



ಸ್ವಚ್ಛ ನಗರಗಳಲ್ಲಿ ಮೈಸೂರು ಮೂರನೇ ಸ್ಥಾನಕ್ಕೆ ಬರಲು ಕಾರಣಕರ್ತರಾದ ಪೌರಕಾರ್ಮಿಕರನ್ನು ಮಾಜಿ ಕಾರ್ಪೊರೇಟರ್ ಮಾ.ವಿ. ರಾಮಪ್ರಸಾದ್ ಪಾದಪೂಜೆ ಮಾಡಿ, ಸನ್ಮಾನಿಸಿದರು.

ಮೈಸೂರು, ಜು.23– ದೇಶದ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಮೈಸೂರಿಗೆ ಮೂರನೇ ಸ್ಥಾನ ದೊರೆತಿರುವ ಹಿನ್ನೆಲೆಯಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್ ಅವರು ನಗರದ ಚಾಮುಂಡಿ ಪುರಮ್ರುತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ವಾರ್ಡ್ ನಂಬರ್ 55ರ ಪೌರಕಾರ್ಮಿಕರಿಗೆ ಪಾದಪೂಜೆ ಸಲ್ಲಿಸಿ, ಆರತಿ ಬೆಳಗಿಸಿ, ಸಿಹಿಹಂಚಿ, ಸನ್ಮಾನಿಸಿದರು.

ನಂತರ ಮಾತನಾಡಿದ ಅವರು, ಇದು ನಿಜಕ್ಕೂ ಸಂತಸದ ಸುದ್ದಿ. ಇಂತಹ ಬೆಳವಣಿಗೆಯಿಂದ ಪ್ರವಾಸೋದ್ಯಮ ಕ್ಷೇತ್ರವು ಬೆಳೆಯುತ್ತದೆ. ಇದಕ್ಕೆ ಕಾರಣರಾದ ಹಗಲಿರಲು ಶ್ರಮಿಸುವ ಪೌರಕಾರ್ಮಿಕರು, ಸಾರ್ವಜನಿಕರು, ಮಾಧ್ಯಮ ಹಾಗೂ ವಿವಿಧ ಸಂಘ-ಸಂಸ್ಥೆಗಳಿಗೆ ವಿಶೇಷ ಅಭಿನಂದನೆಗಳು. ಮುಂದಿನ ಬಾರಿ ಮೈಸೂರು ನಗರ ಮೊದಲ ಸ್ಥಾನಕ್ಕೆ ಬರಲಿ ಎಂದು ಆಶಿಸಿದರು. ಸ್ವಚ್ಛತೆ ಬರೀ ಕೇವಲ ನಗರ ಪಾಲಿಕೆಯಿಂದ ಮಾತ್ರ ಸಾಧ್ಯವಿಲ್ಲ. ಸಾರ್ವಜನಿಕರು ಸಂಘ-ಸಂಸ್ಥೆಗಳ ಸಹಭಾಗಿತ್ವ ಕೂಡ ಮುಖ್ಯವಾಗುತ್ತದೆ ಎಂದು ಹೇಳಿದರು.

ಮೈಸೂರು ಮಹಾನಗರ ಪಾಲಿಕೆಯಲ್ಲಿ ನಿಯಂತ್ರಣ ಕೊಠಡಿ, ಆಧುನಿಕ ಯಂತ್ರೋಪಕರಣಗಳು, ಹಾಗೂ ಸಿಬ್ಬಂದಿಗಳನ್ನು ಹೆಚ್ಚಾಗಿ ನೇಮಿಸಬೇಕು ಮತ್ತು ಹೊಸ ಹೊಸ ಆವಿಷ್ಕಾರಗಳನ್ನು ಅಳವಡಿಸಲು ಅಧಿಕಾರಿಗಳು ಮುಂದಿನ ದಿನಗಳಲ್ಲಿ ಆಲೋಚಿಸಬೇಕು ಎಂದರು. ನಗರ ಪಾಲಿಕೆ ವಲಯ ಆಯುಕ್ತ ಮಂಜುನಾಥ್ ರೆಡ್ಡಿ, ಪರಿಸರ ಅಭಿಯಂತರಾದ ಜ್ಯೋತಿ, ಆರೋಗ್ಯ ನಿರೀಕ್ಷಕ ಶಿವಪ್ರಸಾದ್, ಸೂಪರ್‌ವೈಸರ್ ಶಂಕರ್, ಸಮಾಜ ಸೇವಕರಾದ ಜಿ.ರಾಘವೇಂದ್ರ, ಲಕ್ಷ್ಮೀ ನಾರಾಯಣ, ನಿರಂಜನ್, ಮಂಜುನಾಥ್, ಧರ್ಮೇಂದ್ರ, ಸೋಮೇಶ್, ರವಿ, ಪವನ, ಚೇತನ್, ರಾಮಯ್ಯ, ಶಿವಲಿಂಗಚಾರ್, ಮಧು, ಶಿವು, ನಾಗಣ್ಣ ಹಾಗೂ ಸ್ಥಳೀಯರು ಹಾಜರಿದ್ದರು

## ಜುಲೈನಲ್ಲೇ ತಮಿಳುನಾಡಿಗೆ ಹರಿದ 100 ಟಿಎಂಸಿ ನೀರು; ಕೆಆರ್‌ಎಸ್ ಹೊಸ ದಾಖಲೆ

ಮಂಡ್ಯ, ಜು.23– ಕಾವೇರಿ ಜಲಾನಯನ ಪ್ರದೇಶದಲ್ಲಿ ಭರ್ಜರಿ ಮಳೆಯಾಗಿದ್ದು, ಕೆಆರ್‌ಎಸ್‌ನಿಂದ ಜುಲೈನಲ್ಲೇ ತಮಿಳುನಾಡಿಗೆ 100 ಟಿಎಂಸಿ ದಾಖಲೆ ಪ್ರಮಾಣದ ನೀರು ಹರಿಬಿಡಲಾಗಿದೆ. ಜೂನ್‌ನಲ್ಲೇ ಭರ್ತಿಯಾಗಿ ಕೆಆರ್‌ಎಸ್ ಡ್ಯಾಂ ದಾಖಲೆ ಬರೆದಿತ್ತು. ಈಗ ತಮಿಳುನಾಡಿಗೆ ಭಾರೀ ಪ್ರಮಾಣದ ನೀರು ಹರಿಸಿದೆ. ಜುಲೈನಲ್ಲೇ ಈ ರಾಜ್ಯಕ್ಕೆ 100 ಟಿಎಂಸಿ ನೀರನ್ನು ಹರಿಸಿದ್ದು, ತಮಿಳುನಾಡಿಗೆ ಸೇರಿದ ನೀರಿನಿಂದಲೂ ವಿಶೇಷ ದಾಖಲೆಯಾಗಿದೆ

ಜೂನ್ ಹಾಗೂ ಜುಲೈನಲ್ಲಿ ಇಷ್ಟು ಪ್ರಮಾಣದ ನೀರು ತಮಿಳುನಾಡಿಗೆ ಹರಿದಿರಲಿಲ್ಲ. ಸುಪ್ರೀಂ ಕೋರ್ಟ್ ಆದೇಶದಂತೆ ವರ್ಷದಲ್ಲಿ 177.25 ಟಿಎಂಸಿ ನೀರು ಕೊಡಬೇಕು. ಒಂದೇ ತಿಂಗಳಿನಲ್ಲಿ ಆ ರಾಜ್ಯಕ್ಕೆ ಶೇ.56ರಷ್ಟು ನೀರು ಸೇರಿದೆ.

## ಲಂಚ ಸ್ವೀಕಾರ: ಮೂವರು ಲೋಕಾಯುಕ್ತ ಬಲೆಗೆ





ಮಂಡ್ಯ, ಜು.23– ಅನ್ಯಕ್ರಾಂತವಾದ ಭೂಮಿ ವಿನ್ಯಾಸ ನಕ್ಷೆ ಅನುಮೋದನೆಗೆ ಲಂಚಕ್ಕೆ ಬೇಡಿಕೆ ಇಟ್ಟು ಅದನ್ನು ಸ್ವೀಕರಿಸುವಾಗ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕಿ ಸೇರಿದಂತೆ ಮೂವರು ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ನಗರದಲ್ಲಿ ಜರುಗಿದೆ.

ನಗರದ ಚಾಮುಂಡೇಶ್ವರಿ ಬಡಾವಣೆಯಲ್ಲಿರುವ ಯೋಜನಾ ಪ್ರಾಧಿಕಾರದ ಕಚೇರಿಯಲ್ಲಿ ವ್ಯಕ್ತಿಯೊಬ್ಬರಿಂದ ಲಂಚ ಸ್ವೀಕರಿಸುವ ವೇಳೆ ಸಹಾಯಕ ನಿರ್ದೇಶಕಿ ಅನನ್ಯ ಮನೋಹರ್, ಕೇಸ್ ವರ್ಕರ್ ಸೌಮ್ಯ ಹಾಗೂ ಹೊರಗುತ್ತಿಗೆ ನೌಕರ ಹರೀಶ್ ಲೋಕಾಯುಕ್ತರಿಗೆ ಸಿಕ್ಕಿಬಿದ್ದವರಾಗಿದ್ದಾರೆ.

ಮದ್ದೂರು ತಾಲೂಕಿನ ಚಂದೂಪುರ ಗ್ರಾಮದ ಪುನೀತ್ ಅವರ ತಾಯಿ ಲಕ್ಷ್ಮಿ ಅವರ ಹೆಸರಿನಲ್ಲಿ ಭೂಮಿ ಅನ್ಯ ಕ್ರಾಂತವಾಗಿದ್ದು, ಅದರ ವಿನ್ಯಾಸ ನಕ್ಷೆ ಅನುಮೋದನೆಗೆ ಕಳೆದ 8 ತಿಂಗಳ ಹಿಂದೆ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಆದರೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ್ದರೂ ಅನುಮೋದನೆ ನೀಡದೇ ಸತಾಯಿಸುತ್ತಿದ್ದರು ಎನ್ನಲಾಗಿದೆ.

ಕೊನೆಗೆ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಪುನೀತ್ ಬಳಿ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಲಂಚದ ಹಣ ದುಬಾರಿ ಆಯಿತು ಎಂದೇಳಿ 30 ಸಾವಿರಕ್ಕೆ ಒಪ್ಪಿಸಿ ನಂತರದಲ್ಲಿ ಸಹಾಯಕ ನಿರ್ದೇಶಕರೂ ಸೇರಿದಂತೆ ಸಿಬ್ಬಂದಿ ವಿರುದ್ಧ ಲೋಕಾಯುಕ್ತ ಪೊಲೀಸರಿಗೆ ಪುನೀತ್ ದೂರು ನೀಡಿದ್ದರು. ಮಂಗಳವಾರ ಪುನೀತ್ ಅವರು ಲಂಚದ ಹಣದಲ್ಲಿ 15 ಸಾವಿರವನ್ನು ಮುಂಗಡ ನೀಡುವುದಕ್ಕೆ ಚಾಮುಂಡೇಶ್ವರಿ ನಗರದಲ್ಲಿರುವ ಕಚೇರಿಗೆ ತೆರಳಿದ್ದರು. ಆ ವೇಳೆ ಸಹಾಯಕ ನಿರ್ದೇಶಕಿ ಅನನ್ಯ, ಕೇಸ್ ವರ್ಕರ್ ಸೌಮ್ಯ ಮತ್ತು ನೌಕರ ಹರೀಶ್ ಹಣವನ್ನು ಸ್ವೀಕರಿಸುವುದಕ್ಕೆ ಹಿಂದು- ಮುಂದು ನೋಡಿದರು. ನಂತರ 15 ಸಾವಿರ ರೂ. ಕಚೇರಿಯಲ್ಲಿದ್ದ ದೇವರ ಮುಂದೆ ಇಟ್ಟು ಹೋಗುವಂತೆ ಪುನೀತ್‌ಗೆ ಸೂಚಿಸಿದರು.

ಈ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಮೂವರನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದು, ದಿಢೀರ್ ದಾಳಿಯಿಂದಾಗಿ ಸಹಾಯಕ ನಿರ್ದೇಶಕಿ ಅನನ್ಯ ಸೇರಿದಂತೆ ಕಚೇರಿ ನೌಕರರು ದಂಗಾದರು. ಲೋಕಾಯುಕ್ತ ಪೊಲೀಸರು ತನಿಖೆಯನ್ನು ಮುಂದುವರೆಸಿದರು. ದಾಳಿಯಿಂದ ಕಂಗೆಟ್ಟ ಅನನ್ಯ ಮತ್ತು ಸೌಮ್ಯ ಕಣ್ಣೀರಿಟ್ಟರು. ಮಂಡ್ಯ ಲೋಕಾಯುಕ್ತ ಅಧೀಕ್ಷಕ ಸುರೇಶ್ ಬಾಬು, ಇನ್ಸ್‌ಪೆಕ್ಟರ್ ಬ್ಯಾಟ ರಾಯನಗೌಡ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ.

## ನಾಳೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ದೆಹಲಿಗೆ



ಬೆಂಗಳೂರು, ಜು.23– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುರುವಾರ ಮಧ್ಯಾಹ್ನ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳಲಿದ್ದಾರೆ. ಇದೇ 25ರಂದು ನವದೆಹಲಿಯ ತಾಲ್‌ಕಟೋರ ಕ್ರೀಡಾಂಗಣದಲ್ಲಿ ನಡೆಯಲಿರುವ ಕಾಂಗ್ರೆಸ್ ಒಬಿಸಿ ನಾಯಕತ್ವ ಭಾಗೀದಾರಿ ನ್ಯಾಯ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ. ದೆಹಲಿ ಭೇಟಿಯ ಸಂದರ್ಭದಲ್ಲಿ ಉಭಯ ನಾಯಕರೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ, ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮತ್ತು ನಿಗಮ-ಮಂಡಳಿ ಅಧ್ಯಕ್ಷರು, ಸದಸ್ಯರ ನೇಮಕ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

## ಗೃಹಿಣಿ ನೇಣಿಗೆ ಶರಣು



ಶ್ರೀರಂಗಪಟ್ಟಣ, ಜು.23– ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೆಳಗೊಳ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. ಗ್ರಾಮದ ದೊಡ್ಡ ಬೀದಿ ನಿವಾಸಿ ಕುಮಾರ್ ಎಂಬುವರ ಪತ್ನಿ ಲಕ್ಷ್ಮೀ(23) ಆತ್ಮಹತ್ಯೆ ಮಾಡಿಕೊಂಡವರು. ಕೌಟುಂಬಿಕ ಕಲಹದಿಂದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದ್ದು, ನನ್ನ ಮಗಳ ಸಾವಿಗೆ ಸಂಬಂಧಿಸಿದಂತೆ ಯಾವುದೇ ಅನುಮಾನವಿಲ್ಲ. ಹೀಗಾಗಿ ಮುಂದಿನ ಕ್ರಮ ಕೈಗೊಳ್ಳುವಂತೆ ಕೆ.ಆರ್.ಸಾಗರ ಠಾಣೆಗೆ ಮೃತಳ ತಂದೆ ದೂರು ನೀಡಿದ್ದು, ಎಸ್‌ಐ ರಮೇಶ್ ಕಿರಕಿಕಟ್ಟೆ ದೂರು ದಾಖಲಿಸಿಕೊಂಡು, ಶವವನ್ನು ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

## ಜು.27ರಂದು ನಿನಾದ ಗೃಹ ಸಂಗೀತ ಕಛೇರಿ

ಮೈಸೂರು, ಜು. 23– ನಗರದ ಕೇರ್ಗಳ್ಳಿಯಲ್ಲಿ ರಿಷಭ್ ಸಿದ್ಧಿ ಲೇಔಟ್‌ನ ನಿನಾದ ಸಂಸ್ಥೆಯಲ್ಲಿ ಜು. 27 ರಂದು ಸಂಜೆ 6 ಗಂಟೆಗೆ ನಿನಾದ ಗೃಹ ಸಂಗೀತ ಕಛೇರಿ ಸರಣಿಯ 15ನೇ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಂಜನಿ ಮೆಮೋರಿಯಲ್ ಟ್ರಸ್ಟ್ ನಡೆಸುವ ಈ ಕಾರ್ಯಕ್ರಮದಲ್ಲಿ ಅಂದು ಪಂ.ವೀರಭದ್ರಯ್ಯ ಹೀರೆಮಠ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ನಡೆಯಲಿದೆ. ಇವರಿಗೆ ತಬಲಾದಲ್ಲಿ ಮಂಗಳೂರಿನ ಯುವ ತಬಲಾ ವಾದಕ ರಾಜೇಶ್ ಭಾಗವತ್ ಹಾಗೂ ಹಾರ್ಮೋನಿಯಂನಲ್ಲಿ ಹೇಮಂತ್ ಭಾಗವತ್ ಸಹಕಾರ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ 9449676014 ಸಂಪರ್ಕಿಸಬಹುದು.

## ನಿಧನ

### ಶತಾಯುಷಿ ನಿಂಗಮ್ಮ



ತಿ.ನರಸೀಪುರ, ಜು.23– ತಾಲೂಕಿನ ಕೊತ್ತೇಗಾಲ ಗ್ರಾಮದ ನಿವಾಸಿ ನಿಂಗಮ್ಮ (101) ಬುಧವಾರ ಸಂಜೆ ನಿಧನರಾದರು. ಮೃತರು ತಾಲೂಕು ಕುರುಬರ ಸಂಘದ ಕಾರ್ಯದರ್ಶಿ ಬಸವರಾಜು ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಲಲಿತಮ್ಮ



ಮೈಸೂರು, ಜು.23– ಹೆಚ್.ಡಿ.ಕೋಟೆ ತಾಲೂಕಿನ ಕಾಳಿಹುಂಡಿ ಗ್ರಾಮದ ಲೇಟ್ ಕೆ.ಎಸ್.ಶಂಭುಲಿಂಗೇಗೌಡರ ಪತ್ನಿ ಲಲಿತಮ್ಮ(74) ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಹೆಚ್.ಡಿ.ಕೋಟೆ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಉಪನ್ಯಾಸಕ ಕೆ.ಎಸ್.ಅಜಿತ್‌ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶತಾಯುಷಿ ಕಿಕ್ಕೇರಮ್ಮ



ಕೆ.ಆರ್.ಪೇಟೆ, ಜು.23– ತಾಲೂಕಿನ ಮೂಡನಹಳ್ಳಿ ಗ್ರಾಮದ ಹಿರಿಯ ಮುಖಂಡ ಲೇ.ಲಕ್ಕೇಗೌಡರ ಪತ್ನಿ ಕಿಕ್ಕೇರಮ್ಮ (100) ಬುಧವಾರ ರಾತ್ರಿ ನಿಧನರಾದರು. ಮೃತರು ಐವರು ಪುತ್ರರು, 7 ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

## ಅರ್ಬನ್ ಹಾಥ್‌ನಲ್ಲಿ 'ಹಾಥ್ ಕರ್ಗ್ ಉತ್ಸವ'ಕ್ಕೆ ಚಾಲನೆ

### ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ



ರಾಜ್ಯ ಕೈಮಗ್ಗ ಉತ್ಪನ್ನ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಮೈಸೂರು, ಜು.23(ವಿವಿಹೆಚ್)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ 'ಹಾಥ್ ಕರ್ಗ್ ಉತ್ಸವ್', 'ನನ್ನ ಕೈಮಗ್ಗ ನನ್ನ ಹೆಮ್ಮೆ' ಶೀರ್ಷಿಕೆಯಡಿ ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಇದೇ ಜು.23 ರಿಂದ ಆ.4 ವರೆಗೆ ನಡೆಯುವ ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಒಂದೇ ಸೂರಿನಡಿ ವಿವಿಧ ರಾಜ್ಯಗಳ ಕರಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳು ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಹಕರಿಗೆ ಸಿಗುವಂತೆ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

**ಮೇಳದಲ್ಲಿ ಪ್ರದರ್ಶನಗೊಳ್ಳುವ ಉತ್ಪನ್ನಗಳು:** ರಾಜ್ಯದ ರೇಷ್ಮೆ ಸೀರೆ, ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ಕಾಟನ್ ಸೀರೆಗಳು, ನೆಲ ಹೊದಿಕೆಗಳು, ಬೆಡ್ ಶೀಟ್‌ಗಳು, ಕಾಂಜಿವರಂ ಸೀರೆ, ಕೇರಳದ ಕೈಮಗ್ಗ ಉತ್ಪನ್ನಗಳು, ಬಿಹಾರ, ಜಾರ್ಖಂಡ್ ತಸ್ಸರ್ ಸೀರೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಸೀರೆ, ವಿವಿಧ ರಾಜ್ಯಗಳ ಡ್ರೆಸ್ ಮೆಟೀರಿಯಲ್‌ಗಳು, ಕರಕುಶಲ ವಸ್ತುಗಳು ಒಂದೇ ಸೂರಿನಡಿ ದೊರೆಯುತ್ತಿವೆ. ರಾಜ್ಯದ ವಿವಿಧ ಜಿಲ್ಲೆಗಳಾದ ಚಾಮರಾಜನಗರ, ಮಂಡ್ಯ, ಮೈಸೂರು ಸೇರಿದಂತೆ ಸುಮಾರು 75ಕ್ಕೂ ಹೆಚ್ಚು ಕಡೆಗಳಿಂದ ಕೈಮಗ್ಗ ನೇಕಾರರು, ಕುಶಲ ಕರ್ಮಿಗಳು ಪಾಲ್ಗೊಂಡಿದ್ದಾರೆ. ಉತ್ಸವದಲ್ಲಿ ಶೇ.20ರ ರಿಯಾಯಿತಿ ದರದಲ್ಲಿ ಉತ್ಪನ್ನಗಳು ದೊರೆಯುತ್ತವೆ.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯ ಎಂ.ಬಿ.ದ್ಯಾಬೇರಿ, ಕಾವೇರಿ ಹ್ಯಾಂಡ್‌ಲೂಮ್ಸ್ ವ್ಯವಸ್ಥಾಪಕ ಜಿ.ಪಿ.ಶ್ರೀನಿವಾಸ ಮೂರ್ತಿ, ಅಧ್ಯಕ್ಷ ಬಿ.ಜೆ.ಗಣೇಶ್, ನೇಕಾರ ಸೇವಾ ಕೇಂದ್ರದ ಉಪನಿರ್ದೇಶಕ ಡಾ.ಸಿ.ಪ್ರಭಾಕರನ್, ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯ ಅಭಿವೃದ್ಧಿ ಅಧಿಕಾರಿ ಎಚ್.ಕೆ.ಮಾದೇಶ, ಅರ್ಬನ್ ಹಾತ್ ಯೋಜನಾಧಿಕಾರಿ ಶಿವನಂಜಸ್ವಾಮಿ, ಸಂಯೋಜನಾಧಿಕಾರಿ ರಾಕೇಶ್ ರೈ, ಸುಂದರಪ್ಪ ಹಾಜರಿದ್ದರು.

## ಹುಟ್ಟುಹಬ್ಬದ ಶುಭಾಶಯ



ಮಾಜಿ ಉಪಮೇಯರ್ ವಿ. ಶೈಲೇಂದ್ರ ಅವರು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಅಶೋಕಪುರಂ ಮಹೇಶ್, ಮುಖ್ಯೋಪಾಧ್ಯಾಯ ದೇವರಾಜ್, ಉದ್ಯಮಿ ವಿನಯ್ ಉಪಸ್ಥಿತರಿದ್ದರು

## ಬಿಕ್ಲು ಶಿವ ಹತ್ಯೆ: ನಾಲ್ಕು ತಾಸು ಶಾಸಕ ಬೈರತಿ ಬಸವರಾಜ್ ವಿಚಾರಣೆ

ಬೆಂಗಳೂರು, ಜು.23– ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರು ಎರಡನೇ ಬಾರಿಗೆ ವಿಚಾರಣೆಗೆ ಹಾಜರಾಗಿ ತನಿಖಾಧಿಕಾರಿಗಳ ಎದುರು ತಮ್ಮ ಹೇಳಿಕೆ ದಾಖಲಿಸಿದರು.

ತನಿಖಾಧಿಕಾರಿಯೂ ಆಗಿರುವ ಕೆ.ಜಿ.ಹಳ್ಳಿ ಉಪ ವಿಭಾಗದ ಎಸಿಪಿ ಪ್ರಕಾಶ್ ರಾಥೋಡ್ ಅವರು ಶಾಸಕರಿಗೆ ವಿವಿಧ ಆಯಾಮದಲ್ಲಿ ಪ್ರಶ್ನೆಗಳನ್ನು ಕೇಳಿ ವಿಡಿಯೊ ರೆಕಾರ್ಡ್ ಮಾಡಿಕೊಂಡರು. ನಾಲ್ಕು ತಾಸು ನಡೆದ ವಿಚಾರಣೆಯಲ್ಲಿ ಮೊದಲ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನ ನಂಟಿನ ಬಗ್ಗೆ ಪ್ರಶ್ನೆ ಕೇಳಲಾಯಿತು ಎಂದು ಮೂಲಗಳು ತಿಳಿಸಿವೆ.







### ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮೇಳಾಪುರ ಗ್ರಾಮದಲ್ಲಿ ವಾಸವಾಗಿರುವ ಸುಮಾರು 70 ವರ್ಷ ವಯಸ್ಸುಳ್ಳ ಮಲ್ಲೇಗೌಡ ಬಿನ್ ಲೇಟ್ ಪಟೇಲ್ ನಿಂಗೇಗೌಡರ ಇರಾದೆಯ ಮೇರೆಗೆ ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:- ನಮ್ಮ ಕಕ್ಷಿದಾರರ, ಅವರ ಸಹೋದರ ಚಂದ್ರ ಶೇಖರ್ ಮತ್ತು ಅವರ ತಾಯಿ ಶ್ರೀಮತಿ ದೇವೀರಮ್ಮನವರ ನಡುವೆ ಅವರ ಎಲ್ಲಾ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಗಳಿಗೆ ಸಂಬಂಧಿಸಿದಂತೆ ದಿನಾಂಕ 22-12-2000 ರಂದು ಆಗಿದ್ದ ಮೂಲ ಪಂಚಾಯತಿ ಪಾಲು ಪಾರಿಕತ್ ಅನ್ನು ನಮ್ಮ ಕಕ್ಷಿದಾರರು ಶ್ರೀರಂಗಪಟ್ಟಣದ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಅಸಲು ದಾವಾ ಸಂಖ್ಯೆ 73/2023ಕ್ಕೆ ಸಂಬಂಧಿಸಿದಂತೆ ಸಲ್ಲಿಸಬೇಕಾಗಿದ್ದ ಕಾರಣ ದಿನಾಂಕ 04-06-2025 ರಂದು ಸದರಿ ಅಸಲು ದಾವಾ ಸಂಖ್ಯೆ: 73/2023 ಕ್ಕೆ ಸಂಬಂಧಿಸಿದಂತೆ ಘನ ನ್ಯಾಯಾಲಯಕ್ಕೆ ಹಾಜರಾಗಿ ಸದರಿ ಮೂಲ ಪಂಚಾಯತ್ ಪಾಲು ಪಾರಿಕತ್ ಅನ್ನು ಸಲ್ಲಿಸುವುದಕ್ಕಾಗಿ ಸದರಿ ಪಂಚಾಯತಿ ಪಾಲು ಪಾರಿಕತ್ ಅನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿಕೊಂಡು ಅವರ ಮೇಳಾಪುರದ ಮನೆಯಿಂದ ಸಿಟಿ ಬಸ್ ಮೂಲಕ ಹೊರಟು ಬೆಳಿಗ್ಗೆ 09:45 ರಿಂದ 10:00 ಗಂಟೆ ಸಮಯದಲ್ಲಿ ಶ್ರೀರಂಗಪಟ್ಟಣ ಬಸ್ ನಿಲ್ದಾಣಕ್ಕೆ ಬಂದಿದ್ದು ಸದರಿ ಬಸ್ ನಿಲ್ದಾಣದಲ್ಲಿಯೇ, ನಮ್ಮ ಕಕ್ಷಿದಾರರು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿಕೊಂಡು ತಂದಿದ್ದ ಈ ಮೇಲೆ ಹೇಳಿರುವ ದಿನಾಂಕ 22-12-2000 ರ ಮೂಲ ಪಂಚಾಯತಿ ಪಾಲುಪಾರಿಕತ್, ಪ್ಲಾಸ್ಟಿಕ್ ಕವರ್‌ನೊಂದಿಗೆ ಕಳೆದುಹೋಗಿರುತ್ತದೆ. ನಮ್ಮ ಕಕ್ಷಿದಾರರು ದಿನಾಂಕ 04-06-2025 ರಿಂದ ದಿನಾಂಕ 06-06-2025 ರವರೆಗೆ ಸದರಿ ಮೂಲ ಪಂಚಾಯತಿ ಪಾಲುಪಾರಿಕತ್ ಅನ್ನು ಹುಡುಕಲು ಪಟ್ಟ ಎಲ್ಲಾ ಪ್ರಯತ್ನಗಳು ವಿಫಲವಾದ ಕಾರಣ ನಮ್ಮ ಕಕ್ಷಿದಾರರು ಅನ್ಯಮಾರ್ಗವಿಲ್ಲದೆ ದಿನಾಂಕ 07-06-2025 ರಂದು ಆ ಸಂಬಂಧ ಆರಕ್ಷಕ ನಿರೀಕ್ಷಕರು, ಶ್ರೀರಂಗಪಟ್ಟಣ ಆರಕ್ಷಕ ಠಾಣೆ, ರವರಿಗೆ ದೂರು ನೀಡಿದ್ದು ಆ ಸಂಬಂಧ ಸದರಿ ಆರಕ್ಷಕ ನಿರೀಕ್ಷಕರು ಸದರಿ ದಿನಾಂಕ 07-06-2025ರಂದೆ ನಮ್ಮ ಕಕ್ಷಿದಾರರಿಗೆ ಸ್ವೀಕೃತಿ ಪತ್ರವನ್ನು (ಉಲ್ಲೇಖ ಸಂಖ್ಯೆ ಡಿ.ಪಿ.ಎಲ್ ನಂಬರ್ 25/2025 ಮತ್ತು ಜಿ.ಎಸ್.ಸಿ ಸಂಖ್ಯೆ ಪಿ.ಒ.ಒ-844250600304) ನೀಡಿರುತ್ತಾರೆ, ನಮ್ಮ ಕಕ್ಷಿದಾರರು ಈ ಮೇಲೆ ಹೇಳಿರುವಂತೆ ಸ್ವೀಕೃತಿ ಪತ್ರವನ್ನು ಪಡೆದಂದಿನಿಂದ ಈವರೆವಿಗೂ ಸದರಿ 22-12-2000 ರ ಮೂಲ ಪಂಚಾಯತಿ ಪಾಲು ಪಾರಿಕತ್ ಅನ್ನು ಹುಡುಕಲು ಪಟ್ಟ ನಮ್ಮ ಕಕ್ಷಿದಾರರ ಎಲ್ಲಾ ಪ್ರಯತ್ನಗಳು ಮತ್ತೊಮ್ಮೆ ವಿಫಲವಾಗಿರುತ್ತವೆ. ಆದ್ದರಿಂದ ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲೆ ಹೇಳಿರುವ ದಿನಾಂಕ 22-12-2000 ರ ಮೂಲ ಪಂಚಾಯತಿ ಪಾಲುಪಾರಿಕತ್, ಸಾರ್ವಜನಿಕರಾರಿಗಾದರೂ ದೊರಕಿದಲ್ಲಿ, ಸದರಿಯವರು ಸದರಿ ಮೂಲ ಪಂಚಾಯತಿ ಪಾಲುಪಾರಿಕತ್ ಅನ್ನು ನಮ್ಮ ಕಕ್ಷಿದಾರರಿಗಾಗಲಿ ಅಥವಾ ನಮಗಾಗಲಿ ಹಿಂದಿರುಗಿಸಬೇಕೆಂದು, ಒಂದು ವೇಳೆ ಸಾರ್ವಜನಿಕರಾರಾದರೂ ಸದರಿ ಮೂಲ ಪಂಚಾಯತಿ ಪಾಲುಪಾರಿಕತ್ ಅನ್ನು ಯಾವುದೇ ರೀತಿಯಲ್ಲಾಗಲಿ ದುರುಪಯೋಗಪಡಿಸಿಕೊಂಡಲ್ಲಿ ದುರುಪಯೋಗಪಡಿಸಿಕೊಂಡವರ ಮೇಲೆ ನಮ್ಮ ಕಕ್ಷಿದಾರರು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಸೂಕ್ತ ರೀತಿಯ ಕಾನೂನಿನ ಕ್ರಮ ಕೈಗೊಳ್ಳಲು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆಂದು, ಆ ಸಂಬಂಧ ಉದ್ಭವಿಸುವ ಸಕಲ ರೀತಿಯ ಖರ್ಚುಗಳಿಗೂ ದುರುಪಯೋಗಪಡಿಸಿಕೊಂಡವರೆ ಸಂಪೂರ್ಣ ಜವಾಬ್ದಾರರಾಗುತ್ತಾರೆಂದು ತಿಳಿಯತಕ್ಕದ್ದು.

Sd/- M.C. Dileepkumar, B.Com., LL.B, Advocate, Vijayashree Law Associates,
KAR No. 2541/1999, No. K-8/1 & K-8/1A (Old No. 1207), 2nd Floor,
V.V. Main Road, Near KSS Patha Shala, K.R. Mohalla, Mysore-570 024.

ಸಹಿ/– ಕಕ್ಷಿದಾರರು
23-7-2025, ಮೈಸೂರು

### PUBLIC NOTICE

NOTICE is hereby given to the general public that, my client/s is/are intending to purchase the below-mentioned schedule property from its owner. Mr. Madaiah S/o Mr. Late Kulla Madaiah. Any person/s, firms, societies, institutions, entities. claiming to have any right, title, interest, benefit, claim, or demand in, or to the schedule property, and/or any part thereof, by way of sale, exchange, gift, lease. tenancy, license, assignment, mortgage, charge, lien, trust, family arrangements/settlement, encumbrance, inheritance, bequest, easement, possession, maintenance, development rights, order/decree/ judgment of any understanding, or otherwise, howsoever, to the schedule property is required to intimate the same, along with the true copies of all documentary evidence/ proof in support thereof, to the undersigned, at the address given below, within 7 [Seven] days from the date of publication of this notice. Thereafter, my client will proceed to complete the transaction without being liable for any claims put forth thereafter. And any claim/s received post the time frame shall not be binding on my client. but be deemed to have been waived, abandoned, and disregarded for all intents and purposes.

**SCHEDULE PROPERTY**

All that piece and parcel of the Property No. 43, having E-Khatha No: 25374345 bearing PID No. 56-1-523-70 measuring East to West 12 Meters or 40 Feet and North to South 15.20 Meters or 50 Feet in all, measuring 182.40 Square Meters or 2000 Square Feet, along with a residential building of 111.4836 Square Meters consisting of Ground Floor, situated at No:43, 3rd Stage, Kesare, N.R. Mohalla, Mysuru 570007 falling under Ward No. 56 NR Constituency and bounded on: East by: Road ; North by: Road ; West by: Site No. 43 (Same site partitioned) ; South by: Site No. 44.

Sd/- Sridevi Dakshinamurthy, Advocate
No. 4651/B, Shivaji Main Road,
N.R.Mohalla, Mysuru - 570007.
Mob: 9901362616

Place: Mysuru, Date: 24-07-2025







**ಮೈಸೂರು ಮಿತ್ರ 46**
**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು


### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.

ಸಂ.: ಮೈಅಪ್ರಾ:ನಯೋಶಾ:ಭೂಉಬ:ನಯೋ–1:2025–26 ದಿನಾಂಕ: 22.07.2025

### ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕುರುಬಾರಹಳ್ಳಿ ಗ್ರಾಮದ ಸ.ನಂ.18ರ 11ಎಕರೆ 30ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಮೆ॥ ವಿನಾಯಕ ಎಂಟರ್ ಪ್ರೈಸಸ್ ಪರವಾಗಿ ಅಶ್ವಿನ್ ಪೈ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



LAND IN QUESTION

ಸಹಿ/–
ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/686/SA/2025-26

# ಪ್ರತಿಪಕ್ಷಗಳಿಂದ ಪ್ರತಿಭಟನೆ: ಮೂರನೇ ದಿನವೂ ಸಂಸತ್ ಕಲಾಪ ಮುಂದೂಡಿಕೆ



ನವದೆಹಲಿ: ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮತ್ತು ಆಪರೇಷನ್ ಸಿಂಧೂರ ಸೇರಿದಂತೆ ಹಲವಾರು ವಿಷಯಗಳ ಕುರಿತು ಚರ್ಚೆಗೆ ಒತ್ತಾಯಿಸಿ ಪ್ರತಿಪಕ್ಷಗಳು ಕಲಾಪಕ್ಕೆ ಅಡ್ಡಿಪಡಿಸುತ್ತಲೇ ಇದ್ದುದರಿಂದ ಸಂಸತ್ತಿನ ಉಭಯ ಸದನಗಳ ಕಲಾಪವನ್ನು ಬುಧವಾರ ಸತತ ಮೂರನೇ ದಿನವೂ ಮುಂದೂಡಲಾಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಫಲಕಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ, ವಿರೋಧ ಪಕ್ಷದ ಸದಸ್ಯರು ಲೋಕಸಭೆಯಲ್ಲಿ ಸದನದ ಬಾವಿಗೆ ಇಳಿದು ಪ್ರತಿಭಟನೆ ನಡೆಸಿದ್ದರಿಂದ ಕಲಾಪವನ್ನು ನಾಳೆಗೆ ಮುಂದೂಡಲಾಯಿತು. ಇದಕ್ಕೂ ಮೊದಲು ಮಧ್ಯಾಹ್ನ 2 ಗಂಟೆಯವರೆಗೆ ಕಲಾಪ ಮುಂದೂಡಲಾಯಿತು. ಪ್ರತಿಪಕ್ಷಗಳ ಪ್ರತಿಭಟನೆ ಮತ್ತು ಘೋಷಣೆ ಕೂಗುವುದನ್ನು ಮುಂದುವರೆಸಿದವು. ಹೀಗಾಗಿ ಸ್ಪೀಕರ್ ಕಲಾಪವನ್ನು ಮುಂದೂಡಿದರು.

ವಿರೋಧ ಪಕ್ಷದ ಸದಸ್ಯರು 'SIR WAPAS LO(Roll Back SIR)' ಎಂದು ಘೋಷಣೆಗಳನ್ನು ಕೂಗಿದರು.

ಪ್ರತಿಭಟನಾ ನಿರತ ಸಂಸದರು ಬೀದಿಗಳಲ್ಲಿ ವರ್ತಿಸಿದಂತೆ ಸದನದಲ್ಲಿ ವರ್ತಿಸುತ್ತಿದ್ದಾರೆ ಎಂದು ಸ್ಪೀಕರ್ ಓಂ ಬಿರ್ಲಾ ಕಿಡಿ ಕಾರಿದರು ಮತ್ತು ಅವರ ವಿರುದ್ಧ 'ಕಠಿಣ' ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ನಿಮ್ಮನ್ನು ಆಯ್ಕೆ ಮಾಡಿದ ಜನರ ಆಶಯಗಳು ಮತ್ತು ಆಕಾಂಕ್ಷೆ ಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನೀವು ವರ್ತಿಸಬೇಕು. ಜನರ ಜೀವನವನ್ನು ಸುಲಭಗೊಳಿಸುವ ವಿಷಯಗಳ ಕುರಿತು ಚರ್ಚೆ ನಡೆಸಬೇಕು. ಆದರೆ ನೀವು ಸಂಸತ್ತಿನಲ್ಲೂ ಬೀದಿಯಲ್ಲಿ ವರ್ತಿಸುವಂತೆ ವರ್ತಿಸುತ್ತಿದ್ದೀರಿ ಎಂದು ಸ್ಪೀಕರ್ ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ಮೇಲ್ಮನೆಯಲ್ಲೂ ಇದೇ ರೀತಿಯ ದೃಶ್ಯಗಳು ಕಂಡುಬಂದವು. ಹೀಗಾಗಿ ರಾಜ್ಯಸಭಾ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು. ನಂತರ ಮಧ್ಯಾಹ್ನ 2 ಗಂಟೆಗೆ ದಿನದ ಎಲ್ಲಾ ಕಲಾಪಗಳನ್ನು ಸ್ಥಗಿತಗೊಳಿಸಿ ನಾಳೆಗೆ ಮುಂದೂಡಲಾಯಿತು.

ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ, ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಕುರಿತು ಉಭಯ ಸದನಗಳಲ್ಲಿ ಚರ್ಚಿಸುವಂತೆ ಆಗ್ರಹಿಸಿ ಕಳೆದ ಮೂರು ದಿನಗಳಿಂದ ಪ್ರತಿಪಕ್ಷಗಳು ಪ್ರತಿಭಟಿಸುತ್ತಿವೆ.

ಪ್ರತಿಪಕ್ಷಗಳ ಬೇಡಿಕೆಯನ್ನು ಪರಿಗಣಿಸುತ್ತಿಲ್ಲ. ಇದರಿಂದ ಕಲಾಪಕ್ಕೆ ಅಡ್ಡಿಯಾಗುತ್ತಿದೆ. ಕಲಾಪಕ್ಕೆ ಅಡ್ಡಿಯಾದರೆ, ಅದರ ಅತಿದೊಡ್ಡ ಫಲಾನುಭವಿ ಸರ್ಕಾರ ಎಂದು ತೃಣಮೂಲ ಕಾಂಗ್ರೆಸ್(ಟಿಎಂಸಿ) ಸಂಸದ ಡೆರೆಕ್ ಒ ಬ್ರಿಯಾನ್ ಹೇಳಿದ್ದಾರೆ.

# ರಾಷ್ಟ್ರೀಯ ಹೆದ್ದಾರಿ ಅಪಘಾತ: ಆರು ತಿಂಗಳ ಅವಧಿಯಲ್ಲಿ 27,000 ಮಂದಿ ಸಾವು

ನವದೆಹಲಿ: ಈ ವರ್ಷದ ಮೊದಲ ಆರು ತಿಂಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ 26,770 ಜನರು ಸಾವಿಗೀಡಾಗಿದ್ದಾರೆ ಎಂದು ಬುಧವಾರ ಸಂಸತ್ತಿಗೆ ತಿಳಿಸಲಾಯಿತು. ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, 2024ರಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ (ಎನ್‌ಎಚ್) 52,609 ಮಾರಕ ಅಪಘಾತಗಳು ಸಂಭವಿಸಿವೆ ಎಂದು ಹೇಳಿದರು. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೆಚ್ಚಿನ ಸಂಚಾರ ದಟ್ಟಣೆ ಇರುವ ರಾಷ್ಟ್ರೀಯ ಹೆದ್ದಾರಿ ಮತ್ತು ದೆಹಲಿ-ಮೀರತ್ ಎಕ್ಸ್‌ಪ್ರೆಸ್‌ವೇ, ಟ್ರಾನ್ಸ್-ಹರಿಯಾಣ, ಪೂರ್ವ ಪೆರಿಫೆರಲ್ ಎಕ್ಸ್‌ಪ್ರೆಸ್‌ವೇ, ದೆಹಲಿ ಮುಂಬೈ ಎಕ್ಸ್‌ಪ್ರೆಸ್‌ವೇಯಂತಹ ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇಗಳಲ್ಲಿ ಸುಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆ (ಎಟಿಎಂಎಸ್) ಅನ್ನು ಸ್ಥಾಪಿಸಿದೆ ಎಂದು ಗಡ್ಕರಿ ಸದನಕ್ಕೆ ತಿಳಿಸಿದರು.

## ಕೆ.ಜಿ.ಹಳ್ಳಿ-ಡಿಜೆ.ಹಳ್ಳಿ ಗಲಭೆ

# ತಪ್ಪೊಪ್ಪಿಕೊಂಡ ಮೂವರಿಗೆ 7 ವರ್ಷ ಜೈಲು

ಬೆಂಗಳೂರು, ಜು.23– ಬೆಂಗಳೂರಿನ ಕೆ.ಜಿ.ಹಳ್ಳಿ ಮತ್ತು ಡಿಜೆ.ಹಳ್ಳಿ ಪೊಲೀಸ್ ಠಾಣೆಗಳಿಗೆ ಬೆಂಕಿ ಹಚ್ಚಿದ 2020ರ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳಿಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಿಶೇಷ ನ್ಯಾಯಾಲಯವು 7 ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿದೆ.

ಇಕ್ರಮುದ್ದೀನ್ ಸೈಯದ್ ನವೀದ್ (ಎ14), ಸೈಯದ್ ಆಸಿಫ್ (ಎ16) ಹಾಗೂ ಮೊಹಮ್ಮದ್ ಅತೀಫ್ (ಎ18) ಅವರುಗಳೇ ಶಿಕ್ಷೆಗೆ ಗುರಿಯಾದವರು.

ಈ ಮೂವರು ಆರೋಪಿಗಳು ಕೋರ್ಟ್ ಮುಂದೆ ತಮ್ಮ ತಪ್ಪನ್ನು ಒಪ್ಪಿಕೊಂಡ ಹಿನ್ನೆಲೆಯಲ್ಲಿ, ಎನ್‌ಐಎ ವಿಶೇಷ ನ್ಯಾಯಾಧೀಶರು ಶಿಕ್ಷೆ ಪ್ರಕಟಿಸಿದ್ದಾರೆ. ಈ ಪ್ರಕರಣದ ವಿಚಾರಣೆಯಲ್ಲಿ ಎನ್‌ಐಎ ಪರವಾಗಿ ಹಿರಿಯ ಸರ್ಕಾರಿ ವಕೀಲರಾದ ಪ್ರಸನ್ನ ಕುಮಾರ್ ವಾದಿಸಿದ್ದಾರೆ. ಈ ಪ್ರಕರಣದಲ್ಲಿ ಒಟ್ಟು 138 ಆರೋಪಿಗಳ ವಿರುದ್ಧ ಚಾರ್ಜ್ ಶೀಟ್ ಸಲ್ಲಿಕೆಯಾಗಿದ್ದು, ಇವರಲ್ಲಿ ಮೊದಲಿಗೆ ಈ 3 ಮಂದಿ ಆರೋಪಿಗಳು ತಪ್ಪು ಒಪ್ಪಿಕೊಂಡಿದ್ದಾರೆ.

**ಪ್ರಕರಣದ ಹಿನ್ನಲೆ:** 2020ರಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆಯಾದ ಎಂಬ ಕಾರಣ ನೀಡಿ ಹಲವಾರು ಜನರು ಕೆ.ಜಿ.ಹಳ್ಳಿ ಮತ್ತು ಡಿಜೆ.ಹಳ್ಳಿ ಪೊಲೀಸ್ ಠಾಣೆಗಳಿಗೆ ನುಗ್ಗಿ ಬೆಂಕಿ ಹಚ್ಚಿದ್ದರು. ಈ ವೇಳೆ ಸಾರ್ವಜನಿಕ ಆಸ್ತಿ, ವಾಹನಗಳು ಮತ್ತು ದಾಖಲೆಗಳಿಗೆ ಭಾರಿ ಹಾನಿಯುಂಟಾಗಿತ್ತು. ಈ ಪ್ರಕರಣವನ್ನು ನಿಭಾಯಿಸಲು ಕೇಂದ್ರ ಸರ್ಕಾರವು ಎನ್‌ಐಎಗೆ ಪ್ರಕರಣ ಹಸ್ತಾಂತರಿಸಿತ್ತು. ಇನ್ನೂ 135ಕ್ಕೂ ಹೆಚ್ಚು ಆರೋಪಿಗಳ ವಿರುದ್ಧ ವಿಚಾರಣೆ ಮುಂದುವರಿದಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ತೀರ್ಪುಗಳು ಹೊರಬರುವ ನಿರೀಕ್ಷೆಯಲ್ಲಿವೆ. ತಪ್ಪು ಒಪ್ಪಿಕೊಂಡಿರುವ ಆರೋಪಿಗಳಿಗೆ ಈಗ ಶಿಕ್ಷೆ ವಿಧಿಸಿದ್ದು, ಇದರಲ್ಲಿ ಭಾಗಿಯಾದ ಆರೋಪಿಗಳಿಗೆ ಶಿಕ್ಷೆ ಖಚಿತ ಎಂಬ ಸಂದೇಶವನ್ನು ನ್ಯಾಯಾಲಯ ರವಾನಿಸಿದೆ.

# ಜು.25ರಿಂದ ಮೈಸೂರು ಶ್ರೀ ಸುತ್ತೂರು ಶಾಖಾ ಮಠದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ, ಪ್ರವಚನ ಕಾರ್ಯಕ್ರಮ

ಮೈಸೂರು, ಜು.23– ಮೈಸೂರು ಶ್ರೀ ಸುತ್ತೂರು ಶಾಖಾ ಮಠದಲ್ಲಿ ಜು.25 ರಿಂದ ಅ.23ರವರೆಗೆ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪ್ರತಿ ದಿನ ಬೆಳಗ್ಗೆ ವಿಶೇಷ ಪೂಜೆ, ಸಂಜೆ 6 ರಿಂದ 6.30ರವರೆಗೆ ಸಾಮೂಹಿಕ ಪ್ರಾರ್ಥನೆ 6.30 ರಿಂದ 7.30 ರವರೆಗೆ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ವ ಚಿಂತಾಮಣಿ' ಕೃತಿಯ ಪ್ರವಚನವಿರುತ್ತದೆ. ಡಾ. ಕೆ. ಅನಂತರಾಮು ಹಾಗೂ ಡಾ. ಬಿ.ವಿ. ವಸಂತಕುಮಾರ್ ಪ್ರವಚನ ನೀಡಲಿದ್ದು, ವಿದ್ವಾನ್ ಕೃ. ರಾಮಚಂದ್ರ ವಾಚನ ಮಾಡಲಿದ್ದಾರೆ.

ಪ್ರವಚನ ಕಾರ್ಯಕ್ರಮದ ಉದ್ಘಾಟನೆಯು ಜು.25 ಗುರುವಾರ ಸಂಜೆ 6ಕ್ಕೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಲಿದೆ. ನಂಜನಗೂಡು ತಾಲೂಕು ಶ್ರೀ ಕಾರ್ಯಸ್ವಾಮಿ ಮಠ, ಸಂಗಮ ಕ್ಷೇತ್ರದ ಶ್ರೀ ಮಹೇಶ್ವರ ಸ್ವಾಮಿಗಳ ಸಮ್ಮುಖದಲ್ಲಿ, ಮೈಸೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಹಿಂದಿನ ವರ್ಷಗಳಂತೆ ಆಸಕ್ತರಿಗೆ ಮಾಸಪರ್ಯಂತ ಜೆ.ಪಿ.ನಗರ, ಜೆಎಸ್‌ಎಸ್ ಬಡಾವಣೆ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿಯಿಂದ ವಾಹನ ವ್ಯವಸ್ಥೆ ಮಾಡಲಾಗಿದೆ. ಭಕ್ತಾದಿಗಳು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀಗುರುಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ.

# ಆಂಧ್ರದಲ್ಲಿ ಬೆಂಗಳೂರಿನ ಇಬ್ಬರು ಉದ್ಯಮಿಗಳ ಬರ್ಬರ ಹತ್ಯೆ





ಬೆಂಗಳೂರು, ಜು.23– ಬೆಂಗಳೂರು ಮೂಲದ ಇಬ್ಬರು ಉದ್ಯಮಿಗಳು ಹಾಗೂ ಬಿಜೆಪಿ ಮುಖಂಡರನ್ನು ಆಂಧ್ರ ಪ್ರದೇಶ ರಾಜ್ಯದ ಬಾಪಟ್ಲ ಜಿಲ್ಲೆಯಲ್ಲಿ ಬುಧವಾರ ಮಧ್ಯಾಹ್ನ ಬರ್ಬರವಾಗಿ ಕತ್ತು ಸೀಳಿ ಕೊಲೆ ಮಾಡಿ, ಹೆದ್ದಾರಿ ಬಳಿಯಲ್ಲಿ ಬೀಸಾಡಲಾಗಿದೆ.

ಇವರಿಬ್ಬರೂ ತಂದೆ–ಮಗ ಆಗಿದ್ದಾರೆ. ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಕೋರ್ಟ್ ಕೇಸಿಗೆ ತೆರಳಿದ್ದಾಗ, ಇಬ್ಬರನ್ನೂ ಅಪಹರಿಸಿ ಬರ್ಬರವಾಗಿ ಕತ್ತು ಸೀಳಿ ಕೊಲೆ ಮಾಡಲಾಗಿದೆ. ಮೃತರನ್ನು ಉದ್ಯಮಿಯೂ ಆದ ಮಹದೇವಪುರ ಬಿಜೆಪಿ ಯುವ ಮುಖಂಡ ಪ್ರಶಾಂತರೆಡ್ಡಿ ಹಾಗೂ ಅವರ ತಂದೆ ವೀರಸ್ವಾಮಿರೆಡ್ಡಿ ಎಂದು ಗುರುತಿಸಲಾಗಿದೆ. ವೀರಸ್ವಾಮಿ ರೆಡ್ಡಿ ಹಾಗೂ ಪ್ರಶಾಂತ ರೆಡ್ಡಿ ಇಬ್ಬರೂ ಬೆಂಗಳೂರಿನ ಕಾಡುಗುಡಿ ಮೂಲದ ಉದ್ಯಮಿಗಳಾಗಿದ್ದು, ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಆಪ್ತ ಮೂಲಗಳಲ್ಲಿ ಇವರು ಗುರುತಿಸಿಕೊಂಡಿದ್ದರು. ಚೆಕ್‌ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದ ಕೋರ್ಟ್ ಕೇಸ್ ವಿಚಾರಣೆಗೆ ಆಂಧ್ರ ಪ್ರದೇಶ ರಾಜ್ಯಕ್ಕೆ ತೆರಳಿದ್ದ ವೇಳೆ ಅವರನ್ನು ಹತ್ಯೆ ಮಾಡಲಾಗಿದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**SITE FOR SALE**
20X30 WEST FACE MUDA ALLOTED VIJAYNAGAR 4TH STAGE 3RD PHASE. DIRECT OWNER BROKERS EXCUSE
9972399939

**ಸುವರ್ಣ ಯಾತ್ರಾ**
3 ದಿನಗಳ ಶಿರಡಿ ಪ್ರವಾಸ 15/8/25
3 ದಿನಗಳ ಪುರಿ ಪ್ರವಾಸ 15/8/25
4 ದಿನಗಳ ಕಾಶಿ ಪ್ರವಾಸ 29/8/25
8 ದಿನಗಳ ಕಾಮಾಕ್ಯ ಪ್ರವಾಸ 23/9/25
9 ದಿನಗಳ ಅಯೋಧ್ಯಾ ಮತ್ತು ನೇಪಾಳ ಪ್ರವಾಸ 11/9/25
6360146483 / 9008381022

**RERA APPROVED – RAI ESTATES – MUDA APPROVED**
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

**ಟೈಲರಿಂಗ್ ತರಬೇತಿ**
* Limited Offer * Basic Tailoring * Advance Tailoring * Fashion Designing, * Embroidery Works
ತಕ್ಷಣ ಸಂಪರ್ಕಿಸಿ: ಗಾನವಿ ಇಂಟರ್ ನ್ಯಾಷನಲ್, ಮೈಸೂರು
9620636665 / 9620476665 9620436665 / 6360737581

**SITE FOR SALE**
39X40-SOUTH WEST CORNER.M.S. RAMAIAH LAYOUT (MUDA APPROVED) ATTACHED TO VIJAYNAGAR 4TH STAGE
9972399939

**ಸೈಟು ಮಾರಾಟಕ್ಕಿದೆ**
20x30 E/F
ನಾರಾಯಣಗುರು ನಗರ (ಕುಮಾರಬೀಡು, ದೀಪಾಹೌಸ್ ಸೊಸೈಟಿದು)
9742421313
9945779947

**ITI ಗೆ ಪ್ರವೇಶಾವಕಾಶ**
ITI ( Fitter-NSQF) ವೃತ್ತಿಗೆ SSLC/PUC Pass Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ವಿರುತ್ತದೆ. N.C.V.T ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Also Admission for Nursery, LKG & UKG
BENAKA ITI College, Near Cauvery Circle, Dr. Rajkumar Road, Raghavendra Nagar, Mysore.
9342123467 / 9141756695

**CHANGE OF NAME**
I, Vijaya Jayaram Shetty, residing at No.2, Block No. 23, Maduvana Layout, Srirampura 2nd Stage, Mysore-570023, Karnataka State have changed my name from Vijaya to Vijaya Jayaram Shetty on my own free will vide affidavit sworn in before Notary Saraswathi J. on 19th June 2025.
Sd/- Vijaya Jayaram Shetty

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ**
Mob: 8618373596

**ಬೇಕಾಗಿದ್ದಾರೆ**
[ಕನ್ಸಲ್‌ಟೆನ್ಸಿ ಅಲ್ಲ] ಮೈಸೂರಿನಲ್ಲಿರುವ A.W.G ಕಂಪನಿಗೆ SSLC, PUC, ITI, Diploma, Any Degree ಆದಂತಹ ಗ್ರಾಮೀಣ+ನಗರದ 146 ಅಭ್ಯರ್ಥಿಗಳು ಬೇಕಾಗಿದ್ದಾರೆ. Freshers ಗಳಿಗೆ ಹೆಚ್ಚಿನ ಆದ್ಯತೆ. ತಿಂಗಳಿಗೆ : 21,500 – 26,500/– ವಯೋಮಿತಿ: 18 ರಿಂದ 35 ವರ್ಷಗಳು (ಉಚಿತ ಊಟ+ವಸತಿ ಸೌಲಭ್ಯವಿದೆ) ಶಾಂತಿ
7090212014 / 7349699460

**ಸೋಲಾರ್ ಸರ್ವೀಸ್**
ಅನ್ನು ಕಂಪನಿ ಕಡೆಯಿಂದ 700 ರೂ. ಗೆ 1–7–2025 ರಿಂದ 1–8–2025 ರವರೆಗೆ ಮಾಡಿಕೊಡಲಾಗುತ್ತದೆ.
Mob: 9008711654

**ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನೆ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ**
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

**SBIT TRAVELS**
Group Tour
Chardham 14DAYS
SEP 18
Air tickets | Entry tickets | Meals Hotel | All tours and transfers
9343524127
(Saraswathipuram, Mysuru)

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಸಂಪರ್ಕಿಸಿ
88843 43885

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್**
8197383645, 9008711654

**V-GUARD**
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಬೇಕಾಗಿದ್ದಾರೆ**
ಕುವೆಂಪುನಗರದ ಸೀರೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ ಮತ್ತು ಟೈಲರ್ (ಹುಡುಗ) ಬೇಕಾಗಿದ್ದಾರೆ. ಕುವೆಂಪು ನಗರದ ಸುತ್ತಮುತ್ತಲಿನ ನಿವಾಸಿಗಳಿಗೆ ಪ್ರಥಮ ಆದ್ಯತೆ.
8296695765 / 7348843351

**ಬೇಕಾಗಿದ್ದಾರೆ**
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗಳಿಗೆ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ : 13,773/-+ESI+PF ವಿದ್ಯಾಭ್ಯಾಸ : SSLC, PUC Pass/Fail, Shift Start at 8.00AM, Factory Labour Work Only. ಸಂಪರ್ಕಿಸಿ
ಸುಷ್ಮಾ : 7892725603
ಪ್ರಕಾಶ್: 8971460235

**WANTED**
1. Helpers, 2. ITI fitters, turners , mechatronics, 3. Office assistant, Office Accountants (12th commerce pass, Bcom) 4. ITI, Diploma Electrical (for machine maintenance), 5.Diploma Mechanical ( Autocad, solidwork)
0821-2582668, 7204445679
Mystech Machines #Q113, 4th Cross, 8th Main, Hebbal Industrial Estate, Mysore - 570016
Email: mystechmachines@gmail.com

**ಬೇಕಾಗಿದ್ದಾರೆ**
PGಯಲ್ಲಿ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ, ವಸತಿ ಇರುತ್ತದೆ. ಆಕರ್ಷಕ ಸಂಬಳ
99009 44982
95357 44143

**'R' ರಿಯಲ್ ಎಸ್ಟೇಟ್**
ಸೈಟುಗಳು ಮಾರಾಟಕ್ಕಿದೆ ಸಂಪರ್ಕಿಸಿ
95384 12881

**CHANGE OF NAME**
Myself USHA S, W/o Sham Sunder Talreja, #107, Brigade Horizan Chamundi vihar Layout, Mysuru-570010. Have Changed My Name to USHA TALREJA, Affidavit Sworn in hereby Notary M. Anantha Murthy
Sd/- USHA TALREJA

**ತಕ್ಷಣ ಬೇಕಾಗಿದ್ದಾರೆ**
ನಂಜನಗೂಡಿನ ಕಡಕೋಳ ಏರಿಯಾದ TVS Factoryಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ: 48 ವರ್ಷದ ಒಳಗಡೆ ಸಂಬಳ: 18,500/- 8 Hrs+W/O ಊಟ, ತಿಂಡಿ ವಸತಿ ಸೌಲಭ್ಯವಿದೆ
9620777819 / 9880727819

**ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ**
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಚಿನ್ನದ ದರ : 9200/-
91484 36811

**WANTED**
Sales Executive for Construction Chemicals and Tile Adhesives.
Sumukha Enterprises, Vanivilas Road, Mysore
83102 10812

**FOR SALE**
Sri Krishna Medicals & Clinic
#7/A, Shop No. 1 Madhuvana Layout, Srirampura, 3rd Stage, Mysore-570023
9964114386

**HOUSE FOR SALE**
20X30 South Face, Ground + First Floor, MANASI NAGARA, Agent Excuse
9108416410

**ತಕ್ಷಣ ಬೇಕಾಗಿದ್ದಾರೆ**
ಲೇಡಿ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ ವಿದ್ಯಾರಣ್ಯಪುರಂ, ಕನಕಗಿರಿ (ಊಟ, ತಿಂಡಿ ಸೌಲಭ್ಯವಿದೆ) ಗುಂಡೂರಾವ್‌ನಗರ, ಚಾಮುಂಡಿಪುರಂ.
9964263516/ 8123563128

**ತಕ್ಷಣ ಬೇಕಾಗಿದ್ದಾರೆ**
ಅಗ್ರಹಾರ, ಹೆಬ್ಬಾಳು ಮತ್ತು ಮೇಟಗಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. Bonus, EL, ESI & PF ಸೌಲಭ್ಯವಿರುತದೆ. ಸಂಬಳ ರೂ.18,000/–
7006635122 / 9880727819

**HOUSE FOR LEASE**
25X60 G/F-2BHK F/F - 2BHK, S/F- Room, Attach Toilat, Kitchen. Near- Sri Rampura Ring Road, Opp. KSRTC Layout
99006 34621

**ಅನುಬಂಧ ಮ್ಯಾರೇಜಸ್**
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ನೇರ ಸಂಪರ್ಕಿಸಿ: ಫೋಟೋ, ಬಯೋಡೇಟಾ, ಜಾತಕವನ್ನು ವಾಟ್ಸಪ್ ಮಾಡಿರಿ
9449408551
6361740552

**JOB REQUIREMENT**
PUC/Any Degree Ladies Only. Computer knowledge with tally must. For Two Wheeler Showroom Kuvempunagar. Contact:
Mob: 9342289618

**SITE FOR SALE**
In Mysuru
Uttanahalli near Heritage layout, Mysuru
Mob: 9845376860

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ( 8 Hours duty for Security Guard) ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಹೆಬ್ಬಾಳು ಕೈಗಾರಿಕ ನಗರ ಮೈಸೂರು
Call: 7829393555/9886200104

**HOUSE FOR RENT/LEASE**
2 BHK House North Facing with solar & Wardrobes (30x40) Bogadi 2nd Stage, (North)
Contact: 886779326

**ಕೆಲಸಕ್ಕೆ ಬೇಕಾಗಿದ್ದಾರೆ**
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಮಾಡುವ OMNI Car ಗೆ ಡ್ರೈವರ್ ಬೇಕಾಗಿದ್ದಾರೆ ಸ್ಥಳ: ಡಾ|| ರಾಜ್‌ಕುಮಾರ್ ರಸ್ತೆ.
ಸಂಪರ್ಕಿಸಿ: 8861221755

**HOUSE SALE**
ShardadeviNagar
2 BHK Single Floor, Old House,Renovated, 30x40,MUDA, N/F Door,Price -1.30 Cr
8660105902

**Villa Plots FOR SALE**
30x40,30x50,40x60
28 Acres Project,MUDA App 1 Kms from Adithya Circle, Dattagalli, Kergalli,Mysore
8660105902

**WANTED**
Female - 5 Nos. For Office Work & Telecalling Work
Qualification: Any Degree Pass or Fail
Call: 8147034927

**PRAKRUTHI PROPERTIES**
FOR SALE
30x40@ 22 lakhs Near RT Nagar BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 40 Lakh in Bogadi
95386 90359, 90359 90359

**SITES FOR SALE**
Sites for Sale in easy installments from city only 6.5 KM, From ring road 1.2 Kms only. Hale Kesare Main Road
96069 75149

Required Delivery Bikers and Drivers for the Reputation e-Commerce Company
Salary - 25,000/- 30,000/- Joining Bones 5,000/-
8310381391
7892156457

**ಪ್ರಮಾಣ ಪತ್ರ**
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಚಟ್ನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಪುಟ್ಟಸ್ವಾಮಿರವರ ಧರ್ಮಪತ್ನಿಯಾದ ಶ್ರೀಮತಿ ಮರಿಯಮ್ಮ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ,
ಮರಿಯಮ್ಮ ಮತ್ತು ಚಿಕ್ಕಮರಿಯಮ್ಮ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ ಹಾಗೂ ನನ್ನ ಪತಿಯ ಹೆಸರು ಪುಟ್ಟಸ್ವಾಮಿ ಮತ್ತು ಪುಟ್ಟಸ್ವಾಮಿಗೌಡ ಎರಡೂ ಹೆಸರುಗಳು ನನ್ನ ಪತಿಯದೇ ಆಗಿರುತ್ತದೆ ಹಾಗೂ ಎರಡೂ ಹೆಸರಿನ ವ್ಯಕ್ತಿಗಳು ನಾವೇ ಆಗಿರುತ್ತೇವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/- ಮರಿಯಮ್ಮ

**ಓಂ ಶ್ರೀ ಕಾಲಭೈರವ ಪರಿಹಾರ ಪೀಠ**
ಪಂ. ರಾಘವನ್ 9945767049
ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ. ಚಿಂತೆ ಬೇಡ ಧನವಶ, ಭೂಮಿ ಕೋರ್ಟ್‌ಕೇಸ್, ನಂಬಿದರಲ್ಲಿ ಮೋಸ, ಸತಿಪತಿ ಕಲಹ, ಸಂತಾನ, ಆರೋಗ್ಯ ಆರ್ಥಿಕ, ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಅತ್ತೆ–ಸೊಸೆ ಕಲಹ, ಸ್ತ್ರೀ–ಪುರುಷ ಪ್ರೇಮ ವಿಚಾರ ಇನ್ನಾವುದೇ ಸಮಸ್ಯೆಗಳಿದ್ದರು ಶಾಶ್ವತ ಶೀಘ್ರ ಪರಿಹಾರ ಶತಸಿದ್ಧ.

**PM ASSOCIATES**
Experts in ITR Filing, GST Compliance & Registration. Trusted service, timely delivery.
8762959832

**FOR RENT**
1500 Sq.Ft GODOWN Space in heart of the city suitable for FMCG / Pharma / Hardware Distributors.
98451 29141

**ಸಸ್ಯಹಾರಿ ಹೋಟೆಲ್‌ಗೆ ಬೇಕಾಗಿದ್ದಾರೆ**
ಅಡುಗೆ ಭಟ್ಟರು – 25 ಸಾವಿರ ತಿಂಗಳಿಗೆ ಚಾಟ್ – 25 ಸಾವಿರ ತಿಂಗಳಿಗೆ (ಪಾನಿಪುರಿ, ಗೋಬಿ, ಬಜ್ಜಿ, ಪಕೋಡ) ಸಪ್ಲೇಯರ್ / ತರಕಾರಿ ಕಟ್ಟಿಂಗ್ 15 ಸಾವಿರ ತಿಂಗಳಿಗೆ (ಹುಡುಗರು ಮಾತ್ರ)
91415 84958

**ವಧು ಬೇಕಾಗಿದೆ**
ಪ್ರವೇಟ್ ಕಂಪನಿಯಲ್ಲಿ ಕೆಲಸ, ತೋಟವಿರುವ ಮೈಸೂರಿನಲ್ಲಿ ವಾಸವಿರುವ ವರನಿಗೆ ವಧು ಬೇಕು
WA- 7349320216

**Jnanajyothi Vidyalaya.(HPS) Beerihundi**
Wanted Teachers B,Sc.M.Sc.B,Ed Teachers-2 wanted for HPS immediately.
9845390377
8197057626

**ಮೈಸೂರು ಮಿತ್ರ 46 – ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೋಮವಾರ ಗುರುವಾರ ಶನಿವಾರ**
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ


ಚಾಮರಾಜ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು
ಸನ್ಮಾನ್ಯ ಶ್ರೀ ಕೆ.ಹರೀಶ್‌ಗೌಡರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ವಿನ್ಯಾಸ
ಮೊ: 74 1115 1112
ಕನ್ನಡ ಸ್ನೇಹ ಬಳಗ ಕೆ.ಜಿ.ಕೊಪ್ಪಲು, ಮೈಸೂರು
ಪಿ. ಬಂದೀಗೌಡ
ಅಧ್ಯಕ್ಷರು
ರಮೇಶ್
ಖಜಾಂಚಿ
ರಾಜಕುಮಾರ್ (ದತ್ತ)
ಉಪಾಧ್ಯಕ್ಷರು


ಕನ್ನೇಗೌಡನ ಕೊಪ್ಪಲು ಶ್ರೀ ಮುರುಳೇಶ್ವರ ಧರ್ಮದರ್ಶಿ ಸಮಿತಿ(ರಿ)
ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರಾದ
ಕೆ.ಹರೀಶ್‌ಗೌಡ ರವರಿಗೆ
53ನೇ ಹುಟ್ಟುಹಬ್ಬದ ಶುಭಾಶಯಗಳು
ಡಾ|| ಎಂ. ಮಹದೇವಯ್ಯ ಅಧ್ಯಕ್ಷರು
ಎಲ್. ನಾಗೇಂದ್ರ ಉಪಾಧ್ಯಕ್ಷರು
ಪ್ರೊಫೆಸರ್ ಕೆ. ಆರ್. ರಂಗಯ್ಯ ಕಾರ್ಯದರ್ಶಿ
ಪಿ.ಮಹದೇವಪ್ಪ ಖಜಾಂಚಿ
ಆರ್.ಶಿವಲಿಂಗ ಸಹಕಾರ್ಯದರ್ಶಿ
ನಿಂಗಪ್ಪ ಸದಸ್ಯರು
ಕೆ. ಶಿವಲಿಂಗು ಸದಸ್ಯರು
ಬಿ. ಸೋಮಣ್ಣ ಸದಸ್ಯರು
ಕೆ. ನಂಜುಂಡಸ್ವಾಮಿ ಸದಸ್ಯರು
ಪ್ರಕಟಣೆ : ಕನ್ನೇಗೌಡನ ಕೊಪ್ಪಲು ಶ್ರೀ ಮುರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಸಮಿತಿ(ರಿ)


ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರು
ಜನಮೆಚ್ಚಿನ ನಾಯಕರಾದ
ಸನ್ಮಾನ್ಯ ಶ್ರೀ
ಕೆ.ಹರೀಶ್‌ಗೌಡ ರವರಿಗೆ
ಜನ್ಮದಿನದ ಶುಭಾಶಯಗಳು

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಜುಲೈ 24 ಗುರುವಾರ 2025

ಪುಟಗಳು: VIII




# ತೆರಿಗೆ ಸಂಕಷ್ಟದಿಂದ ಸಣ್ಣ ವ್ಯಾಪಾರಿಗಳನ್ನು ಕಾಪಾಡಿ...

## ಅಂಗಡಿಗಳ ಮುಂಭಾಗ ಪೋಸ್ಟರ್ ಅಭಿಯಾನ



ಕೆಎಂಪಿಕೆ ಟ್ರಸ್ಟ್ ವತಿಯಿಂದ ಪೋಸ್ಟರ್ ಅಭಿಯಾನ ನಡೆಸಲಾಯಿತು.

ಮೈಸೂರು, ಜು.23– ರಾಜ್ಯ ಸರ್ಕಾರ ಇದೀಗ ಸಣ್ಣ ವ್ಯಾಪಾರಿಗಳಿಗೂ ಜಿಎಸ್‌ಟಿ ಹೆಸರಿನಲ್ಲಿ ಅಧಿಕ ತೆರಿಗೆ ವಿಧಿಸುವ ಮೂಲಕ ಅವರನ್ನು ಸಂಕಷ್ಟಕ್ಕೆ ತಳ್ಳುತ್ತಿದೆ ಎಂದು ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಆರೋಪಿಸಿದರು.

ನಗರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ಮುಂಭಾಗ ಕೆಎಂಪಿಕೆ ಟ್ರಸ್ಟ್ ವತಿಯಿಂದ 'ತೆರಿಗೆ ಸಂಕಷ್ಟದಿಂದ ಸಣ್ಣ ವ್ಯಾಪಾರಿಗಳನ್ನು ಕಾಪಾಡಿ' ಪೋಸ್ಟರ್ ಹಿಡಿದು ಸರ್ಕಾರದ ಗಮನ ಸೆಳೆದರು.

ಸಣ್ಣ ವ್ಯಾಪಾರಿಗಳಿಗೆ ಲಕ್ಷಾಂತರ ರೂ. ಪಾವತಿಸುವಂತೆ ರಾತ್ರೋರಾತ್ರಿ ನೋಟಿಸ್ ನೀಡುವ ಮೂಲಕ ಸಾವಿರಾರು ಕುಟುಂಬಗಳನ್ನು ಬೀದಿಗೆ ತಳ್ಳುವ ಕೆಲಸಕ್ಕೆ ಕೈ ಹಾಕಿರುವ ರಾಜ್ಯ ಸರ್ಕಾರದ ದಮನಕಾರಿ ನಡೆಯನ್ನು ಖಂಡಿಸಿದರು.

ಪ್ರತಿದಿನ ಸಣ್ಣಪುಟ್ಟ ವ್ಯಾಪಾರದ ಮೂಲಕ ಜೀವನ ಕಂಡುಕೊಂಡಿರುವ ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟಿಸ್ ನೀಡಿದ್ದು ಸರಿಯಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಕ್ಷಣ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು. ಸಣ್ಣ ಪುಟ್ಟ ವ್ಯಾಪಾರಿಗಳಲ್ಲಿ ಜಿಎಸ್‌ಟಿ ಪದ್ಧತಿ, ವ್ಯವಸ್ಥೆ ಬಗ್ಗೆ ಅರಿವು ಮೂಡಿಸಬೇಕು ಎಂದು ಮನವಿ ಮಾಡಿದರು. ಪರಮೇಶ್ ಗೌಡ, ಪ್ರಮೋದ್ ಗೌಡ, ಅಭಿ, ಎಸ್‌ಎನ್ ರಾಜೇಶ್, ಇನ್ನಿತರರು ಹಾಜರಿದ್ದರು.

# ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಸಿಪಿಐ(ಎಂ) ಪ್ರಚಾರಾಂದೋಲನ

## ಮೈಸೂರು ಜಿಲ್ಲಾ ಜಲ್ವಂತ ಸಮಸ್ಯೆ ನಿವಾರಣೆಗೆ ಆಗ್ರಹ



ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ, ಮೈಸೂರು ಜಿಲ್ಲೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮೈಸೂರು ನಗರ ಸ್ಥಳೀಯ ಸಮಿತಿಯಿಂದ ಬುಧವಾರ ಎಫ್‌ಟಿಎಸ್ ವೃತ್ತದ ಮುಂಭಾಗ ಪ್ರಚಾರಾಂದೋಲನ ನಡೆಸಲಾಯಿತು.

ಮೈಸೂರು, ಜು.23(ಜಿಎ)–ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ, ಮೈಸೂರು ಜಿಲ್ಲೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮೈಸೂರು ನಗರ ಸಮಿತಿಯಿಂದ ಬುಧವಾರ ಎಫ್‌ಟಿಎಸ್ ವೃತ್ತದ ಮುಂಭಾಗ ಪ್ರಚಾರಾಂದೋಲನ ನಡೆಸಲಾಯಿತು.

ಈ ಪ್ರಚಾರಾಂದೋಲನವನ್ನು ಮೈಸೂರು ಹೆಸರಾಂತ ಸಾಹಿತಿಗಳು, ಪ್ರಗತಿಪರ ಚಿಂತಕರಾದ ಹೊರೆಯಾಲ ದೊರೆಸ್ವಾಮಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಒಂದು ಕಡೆ ರೈತರ ಬೆಳೆಗಳಿಗೆ ಬೆಲೆ ಇಲ್ಲದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ವಿದ್ಯಾವಂತರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಹಾಗೆಯೇ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಾಗಿ ಬಡವರ ಮತ್ತು ಕಾರ್ಮಿಕರ ಜೀವನ ದುಬಾರಿಯಾಗಿದೆ. ಮತ್ತೊಂದು ಕಡೆ ದೇವರ, ಧರ್ಮದ ಹೆಸರಲ್ಲಿ ಜನರನ್ನು ವಿಂಗಡಿಸಲಾಗುತ್ತಿದೆ. ರೈತರಿಗೆ ಭೂಮಿ ಕೊಡಬೇಕಾದ ಸರ್ಕಾರ ಕಾರ್ಪೋರೇಟ್ ಕಂಪನಿಗಳಿಗೆ ಭೂಮಿ ಕೊಡಲು ಆಸಕ್ತಿ ವಹಿಸುತ್ತಿದೆ. ಇದರಿಂದಾಗಿ ರೈತರು ಭೂಹೀನರಾಗುತ್ತಿದ್ದಾರೆ. ವಸತಿ ನಿರ್ಮಾಣ ಸಂಸ್ಥೆಗಳು ವಸತಿ ನಿರ್ನಾಮ ಸಂಸ್ಥೆಗಳಾಗಿವೆ ಎಂದರು.

ದೇಶದಲ್ಲಿ ಎಡಪಕ್ಷ ಮಾತ್ರ ರೈತರು, ಕಾರ್ಮಿಕರು ಮತ್ತು ಬಡವರ ಪರವಾಗಿ ಹೋರಾಡುತ್ತಿವೆ. ಸಿಪಿಐ(ಎಂ) ಪಕ್ಷವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಹಾಗೂ ಜಿಲ್ಲೆಯ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಜನಪರವಾಗಿ ನಡೆಸುತ್ತಿರುವ ಈ ಪ್ರಚಾರ ಸಭೆಗಳನ್ನು ಜನತೆ ಬೆಂಬಲಿಸಬೇಕೆಂದು ಕರೆ ನೀಡಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸುಬ್ರಹ್ಮಣ್ಯ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಗೆ ಯಾವುದೇ ಯೋಜನೆಗಳನ್ನು ಮಾಡುತ್ತಿಲ್ಲ. ಜಿಲ್ಲೆಯಲ್ಲಿ ಹಲವು ಕೈಗಾರಿಕೆಗಳು ಮುಚ್ಚುತ್ತಿವೆ. ಕೈಗಾರಿಕಾ ಸ್ಥಾಪನೆಗೆ ಸ್ವಾಧೀನ ಪಡಿಸಿಕೊಂಡ ಸಾವಿರಾರು ಎಕರೆ ಭೂಮಿ ಖಾಲಿ ಬಿದ್ದಿದೆ. ಅಲ್ಲಿ ಹೊಸ ಕೈಗಾರಿಕೆ ಸ್ಥಾಪಿಸಿ ಉದ್ಯೋಗ ಸೃಷ್ಟಿಗೆ ಗಮನ ಹರಿಸಬೇಕು. ಹಾಗೇ ನಗರದಲ್ಲಿ ವಾರ್ಡ್ ಕ್ಲಿನಿಕ್ ತೆರೆಯಲು ಮಹಾನಗರ ಪಾಲಿಕೆ ಮುಂದಾಗಬೇಕು ಹಾಗೂ ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಪತ್ರ ನೀಡಬೇಕೆಂದು ಆಗ್ರಹಿಸಿದರು.

ಪ್ರಚಾರಾಂದೋಲನದಲ್ಲಿ ಜಿಲ್ಲಾ ಸಮಿತಿಯ ಸದಸ್ಯರಾದ ಕೆ.ಬಸವರಾಜ್, ಎನ್.ವಿಜಯ್ ಕುಮಾರ್, ಜಯರಾಂ, ಜಿ.ರಾಜೇಂದ್ರ, ಲ.ಜಗನ್ನಾಥ್, ಕೃಷ್ಣಮೂರ್ತಿ, ಯೋಗಾನರಸಿಂಹ, ಬಾಲಾಜಿ ರಾವ್, ರಾಘವೇಂದ್ರ ರಘುಪೂಜಾರಿ, ಬಸವಯ್ಯ, ಬಲರಾಂ, ಶ್ರೀಧರ್, ಚನ್ನಪ್ಪ ಮತ್ತಿತರರು ಪಾಲ್ಗೊಂಡಿದ್ದರು.

## ಎಂ.ಎಸ್ಸಿ ಸ್ನಾತಕೋತ್ತರ ಪದವಿಯಲ್ಲಿ ಹೆಚ್.ಪಿ.ಅದಿತಿ ಪ್ರಥಮ ರ್‍ಯಾಂಕ್



ಮೈಸೂರು, ಜು.23– ಮಂಗಳೂರಿನ ಸೈಂಟ್ ಆಗ್ನೆಸ್ ಪದವಿ ಕಾಲೇಜಿನ (ಸ್ವಾಯತ್ತ) ವಿದ್ಯಾರ್ಥಿ ಕುಮಾರಿ ಹೆಚ್.ಪಿ. ಅದಿತಿ 2023–2025 ಸಾಲಿನಲ್ಲಿ ಎಂ ಎಸ್ಸಿ ಸ್ನಾತಕೋತ್ತರ ಪದವಿ ಮನಃಶಾಸ್ತ್ರ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಇತ್ತೀಚೆಗೆ ಮಂಗಳೂರಿನ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪದವಿ ಪತ್ರವನ್ನು ನೀಡಲಾಗಿದೆ. ಕುಮಾರಿ ಅದಿತಿ ನಿವೃತ್ತ ಫಾರ್ಮಸಿ ಅಧಿಕಾರಿಯಾದ ಎಚ್. ಪಿ. ಪ್ರಸನ್ನ ಹಾಗೂ ನಿವೃತ್ತ ಶುಶ್ರೂಷಾಧಿಕಾರಿ ಹೇಮಲತಾ ದಂಪತಿಯ ಪುತ್ರಿ. ಮೈಸೂರಿನ ಬೋಗಾದಿಯಲ್ಲಿರುವ ದಾಸನಕೊಪ್ಪಲಿನಲ್ಲಿ ವಾಸವಾಗಿರುವ ಇವರು ಪ್ರಸ್ತುತ ಜೆಎಸ್‌ಎಸ್ ಹೈಯರ್ ಅಕಾಡೆಮಿ ಮತ್ತು ಸಂಶೋಧನಾ ಕೇಂದ್ರದಲ್ಲಿ ನೃತ್ಯ ಚಾಲನೆ ಚಿಕಿತ್ಸೆ ವಿಷಯದಲ್ಲಿ ಪಿಎಚ್‌ಡಿ ಮಾಡುತ್ತಿದ್ದಾರೆ.

## ಧರ್ಮಸ್ಥಳ ಪ್ರಕರಣ

# ನಿಷ್ಪಕ್ಷಪಾತ ತನಿಖೆ ಆಗ್ರಹ



ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸೀಮಾ ಅವರು ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ಮೈಸೂರು, ಜು.23(ಜಿಎ)– ಧರ್ಮಸ್ಥಳ ವ್ಯಾಪ್ತಿಯಲ್ಲಿ ಜರುಗಿದೆ ಎನ್ನಲಾದ ಪ್ರಕರಣಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಆಗ್ರಹಿಸಿ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯು ಮನವಿ ಪತ್ರ ಸಲ್ಲಿಸಿದೆ.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸೀಮಾ ಅವರು ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸುವ ಮೂಲಕ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಧರ್ಮಸ್ಥಳ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಲ್ಲಿ ನಡೆದಿವೆ ಎನ್ನಲಾದ ಅನೇಕ ಪ್ರಕರಣಗಳು, ವ್ಯಕ್ತಿಯೋರ್ವನ ಮೇಲೆ ದಾಖಲಾಗಿರುವ ಎಫ್‌ಐಆರ್ ಬಗ್ಗೆ ತನಿಖೆ ನಡೆಸಿ ನ್ಯಾಯಾ ಒದಗಿಸುವಂತೆ ಅವರು ಒತ್ತಾಯಿಸಿದ್ದಾರೆ.

ಯಾರೇ ತಪ್ಪಿತಸ್ಥರು, ಯಾವುದೇ ಉನ್ನತ ಸ್ಥಾನದಲ್ಲಿದ್ದರೂ, ಎಷ್ಟೇ ಪ್ರಭಾವಿ ವಲಯದವರಾಗಿದ್ದರೂ ಅವರಿಗೆ ಕಠಿಣ ಶಿಕ್ಷೆಯಾಗಬೇಕು. ಹಾಗೂ ಎಲ್ಲಾ ಸಾಕ್ಷಿಗಳಿಗೆ ಮತ್ತು ಸಂತ್ರಸ್ತ ಕುಟುಂಬಗಳಿಗೆ ರಕ್ಷಣೆ ನೀಡಬೇಕು. ಆತಂಕ, ನೋವು, ಆಕ್ರೋಶದಲ್ಲಿರುವ ಜನತೆಗೆ ಭರವಸೆ ನೀಡಬೇಕೆಂದು ಎಂದು ಪತ್ರದ ಮೂಲಕ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಆಗ್ರಹಿಸಿದೆ.

## ವಾರ್ಷಿಕ ಸಾಮಾನ್ಯ ಸಭೆ




ರೌಂಡ್ ಟೇಬಲ್ ಇಂಡಿಯಾದ ಭಾಗವಾದ ಮೈಸೂರು ಎಲೈಟ್ ಲೇಡೀಸ್ ಸರ್ಕಲ್ 141 ವಾರ್ಷಿಕ ಸಾಮಾನ್ಯ ಸಭೆ ಇತ್ತೀಚೆಗೆ ನಡೆಯಿತು. ಸಭೆಯಲ್ಲಿ ನಕ್ಷಾ ಬಿಲ್ಡರ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಕೆ. ಪ್ರತಿಭಾ ನಾಯಕ್ ಅಧ್ಯಕ್ಷೆಯಾಗಿ, ಆಯುಷಿ ಜೈನ್ ಕಾರ್ಯದರ್ಶಿಯಾಗಿ, ಆರ್. ಅಪೂರ್ವ ಖಜಾಂಚಿಯಾಗಿ ಮತ್ತಿತರರು ಅಧಿಕಾರ ಸ್ವೀಕರಿಸಿದರು.

# ಮಾಜಿ ಸೈನಿಕರಿಂದ ಜು. 26ಕ್ಕೆ ಕಾರ್ಗಿಲ್ ವಿಜಯೋತ್ಸವ

## ಇದೇ ವೇಳೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಮಾಜಿ ಯೋಧರ ಪರಿವಾರಕ್ಕೆ ಚಿಕಿತ್ಸೆಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಜು.23(ಎಂಟಿವೈ)– ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಜು.26ರಂದು ಬೆಳಗ್ಗೆ 8.30ಕ್ಕೆ 26ನೇ ಕಾರ್ಗಿಲ್ ವಿಜಯೋತ್ಸವ ಆಯೋಜಿಸಲಾಗಿದೆ ಎಂದು ಮೈಸೂರು ಮಾಜಿ ಸೈನಿಕರ ಮೂವ್ಮೆಂಟ್ ಅಧ್ಯಕ್ಷ ಪ್ರಿನ್ಸ್ ಅಂತೋಣಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಎಕ್ಸ್–ಸರ್ವಿಸ್ ಮೆನ್ ಮೂವ್ಮೆಂಟ್ ವತಿಯಿಂದ ಕಾರ್ಗಿಲ್ ಯುದ್ಧದ ವಿಜಯವನ್ನು ವಿಶಿಷ್ಟ ರೀತಿಯಲ್ಲಿ ಸ್ಮರಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಮಾಜಿ ಸೈನಿಕರು, ಅವರ ಕುಟುಂಬ ಸದಸ್ಯರು, ದೇಶ ಭಕ್ತರು ಪಾಲ್ಗೊಳ್ಳಲಿದ್ದಾರೆ. ಜು.26ರಂದು ಬೆಳಗ್ಗೆ 8 ಗಂಟೆಗೆ ಪುರಭವನದ ಆವರಣದಲ್ಲಿ ಮಾಜಿ ಸೈನಿಕರು ಮತ್ತು ಕುಟುಂಬ ಸದಸ್ಯರು ಸೇರಲಿದ್ದು, ಅಲ್ಲಿಂದ ಮಹಾತ್ಮಗಾಂಧಿ ವೃತ್ತಕ್ಕೆ ಮೆರವಣಿಗೆ ಮೂಲಕ ಆಗಮಿಸಲಿದ್ದಾರೆ. ಬಳಿಕ ಕಾರ್ಗಿಲ್ ಯುದ್ಧದಲ್ಲಿ ಮಡಿದ ಭಾರತೀಯ ವೀರ ಯೋಧರ ಸ್ಮರಣೆಯೊಂದಿಗೆ ಗೌರವ ಸಮರ್ಪಿಸಲಾಗುತ್ತದೆ ಎಂದು ತಿಳಿಸಿದರು.

**ಆರೋಗ್ಯ ಸೇವೆಗಾಗಿ ಪ್ರತಿಭಟನೆ:** ಕಾರ್ಗಿಲ್ ವಿಜಯೋತ್ಸವದ ಬಳಿಕ ಪುರಭವನಕ್ಕೆ ಬಂದು ಮಾಜಿ ಸೈನಿಕರು ಮತ್ತು ಕುಟುಂಬದ ಸದಸ್ಯರಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆಗೆ ಒತ್ತಾಯಿಸಿ, ತೋಳಿಗೆ ಕಪ್ಪುಪಟ್ಟಿ ಧರಿಸಿ ಪ್ರತಿಭಟಿಸಲಾಗುತ್ತದೆ. ಮಾಜಿ ಸೈನಿಕರು ಇದುವರೆಗೂ ಯಾವುದೇ ಪ್ರತಿಭಟನೆ ನಡೆಸಿಲ್ಲ. ಆದರೆ, ಕೇಂದ್ರ ಆರೋಗ್ಯ ಸೇವೆ ಅಡಿಯಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು ಆರೋಗ್ಯ ಸೇವೆ ನಿರಾಕರಿಸುತ್ತಿವೆ. ಮಾಜಿ ಸೈನಿಕರು ಆರ್ಥಿಕವಾಗಿ ಸಬಲರಾಗಿಲ್ಲ. ನಿವೃತ್ತಿ ಬಳಿಕ ಸಣ್ಣ–ಪುಟ್ಟ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ ಎಂದರು.

ಮಾಜಿ ಸೈನಿಕರಿಗೆ ಶ್ವಾಸಕೋಶ, ಹೃದ್ರೋಗ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ. ಆದರೆ ಇವುಗಳಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಕೇಂದ್ರ ಆರೋಗ್ಯ ಸೇವೆ ಅಡಿಯಲ್ಲಿ ಚಿಕಿತ್ಸೆ ದೊರೆಯುತ್ತಿಲ್ಲ. ಈ ಕುರಿತು ಸಂಬಂಧಿಸಿದವರಿಗೆ ಹಲವಾರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ನಗರದ ಕೆಲ ಪ್ರತಿಷ್ಠಿತ ಆಸ್ಪತ್ರೆಗಳು ಈ ಸೇವಾ ವ್ಯಾಪ್ತಿಗೆ ಬರಲು ನಿರಾಕರಿಸುತ್ತಿವೆ. ಹೀಗಾಗಿ ಈಗ ಅನಿವಾರ್ಯವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ. ಇದರಲ್ಲಿ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಭಾಗಗಳ ಮಾಜಿ ಸೈನಿಕರು ಪಾಲೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಎಕ್ಸ್–ಸರ್ವಿಸ್‌ಮೆನ್ ಮೂವ್ಮೆಂಟ್ ಪದಾಧಿಕಾರಿಗಳಾದ ವಿವೇಕಾನಂದ ನಾಯ್ಡು, ಕಿಶೋರ್ ಕದಂ, ರಾಮನಾರಾಯಣ, ಯೋಗಣ್ಣ, ಶ್ರೀಧರ್ ಇದ್ದರು.

# ವಿವಿಸಿ ಇಂಜಿನಿಯರಿಂಗ್ ಕಾಲೇಜಿನ ಪೂರ್ವ ವಿದ್ಯಾರ್ಥಿಗಳ ಸಮಾವೇಶ



ಮೈಸೂರು, ಜು.23– ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ (ವಿವಿಸಿ) ವಾರ್ಷಿಕ ಪೂರ್ವ ವಿದ್ಯಾರ್ಥಿಗಳ ಸಮಾವೇಶ ಬೆಂಗಳೂರು ಲಲಿತ್ ಅಶೋಕ ಹೋಟೆಲ್‌ನಲ್ಲಿ ಅದ್ದೂರಿಯಾಗಿ ನಡೆಯಿತು. 2001ರಿಂದ 2025ರವರೆಗೆ ಪದವೀಧರರಾದ ಸುಮಾರು 400ಕ್ಕೂ ಹೆಚ್ಚು ಪೂರ್ವ ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸಿ, ಕಾಲೇಜಿನ ಹಾಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರೊಂದಿಗೆ ಉದ್ಯೋಗ ವ್ಯವಸ್ಥೆ ಮಾಡುವ ಭರವಸೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ. ಸದಾಶಿವಗೌಡ, ಉಪ ಪ್ರಾಂಶುಪಾಲರಾದ ಡಾ. ಶೋಭಾ ಶಂಕರ್, ವಿವಿ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಉಪಾಧ್ಯಕ್ಷ ಬಿ. ಶಿವಲಿಂಗಪ್ಪ, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಪೂರ್ವ ವಿದ್ಯಾರ್ಥಿ ಸಂಘದ ಸಂಯೋಜಕ ಡಾ. ಎನ್.ಎಸ್. ಲಿಂಗೇಗೌಡ ಉಪಸ್ಥಿತರಿದ್ದರು.

## ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.23– ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ಇಡನ್ ಗಾರ್ಡನ್ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜು.24ರಂದು ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ರಾಜೀವ್‌ನಗರ 2ನೇ ಹಂತ, ಯಾಸಿನ್ ಸುತ್ತ–ಮುತ್ತ, ಅಶೀನಾ ಬಡಾವಣೆ, ರೇಷ್ಮೆ ಉದ್ಯೋಗ್ ಬಡಾವಣೆ, ಮಾಡ್ರನ್ ಬಡಾವಣೆ, ಇಡನ್ ಗಾರ್ಡನ್, ಷರೀಫ್ ಗಾರ್ಡನ್, ರಾಕ್‌ಲೈನ್ ವೆಂಕಟೇಶ್ ಬಡಾವಣೆ, ಕ್ರಿಶ್ಚಿಯನ್ ಕಾಲೋನಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯವಾಗಲಿದೆ.

# ಹಾರ್ಟ್‌ಸಂಸ್ಥೆಯಿಂದ ಹೃದಯ ಸಂಬಂಧಿ ಆರೋಗ್ಯ ತಪಾಸಣೆ



ಮೈಸೂರು, ಜು. 23– ಟಿ.ವಿ.ಎಸ್ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ ಹಾರ್ಟ್ ಸಂಸ್ಥೆ, ಮೈಸೂರು ಪ್ರಾಥಮಿಕ ಆರೋಗ್ಯ ಕೇಂದ್ರ, ಸಿದ್ದರಾಮಯ್ಯನ ಹುಂಡಿ ಗ್ರಾಮ ಪಂಚಾಯಿತಿ, ನಾರಾಯಣ ಹೆಲ್ತ್, ಎ.ಎಸ್.ಜಿ ಕಣ್ಣಿನ ಆಸ್ಪತ್ರೆ, ಮೈಸೂರು ಸಿಪ್ಲ ಬ್ರೀತ್ ಫ್ರೀ ಹಾಗೂ ರಾಯನಹುಂಡಿ ಗ್ರಾಮಸ್ಥರ ಸಹಕಾರದೊಂದಿಗೆ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರವನ್ನು ಟಿವಿಎಸ್ ಸಂಸ್ಥೆಯ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ ವಿಭಾಗದ ಹಿರಿಯ ನಿರ್ದೇಶಕ ಮೋಹನ್ ಕಾನ್ಸಾಟ್, ಟ್ರಸ್ಟ್‌ನ ಸಮುದಾಯ ಅಭಿವೃದ್ಧಿ ಅಧಿಕಾರಿ ರಮೇಶ್ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆ ಮಹೇಶ್, ಹಾರ್ಟ್ ಸಂಸ್ಥೆಯ ಸಂಯೋಜಕ ಶಿವಲಿಂಗ ಹಾಗೂ ವೇದಿಕೆಯ ಗಣ್ಯರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಬಿಪಿ ಮತ್ತು ಸಕ್ಕರೆ ಕಾಯಿಲೆ ಪರೀಕ್ಷೆ, ಕಣ್ಣಿನ ತಪಾಸಣೆ, ಶ್ವಾಸಕೋಶ ಪರೀಕ್ಷೆ, ಇಸಿಜಿ, ಸಾಮಾನ್ಯ ರೋಗ ತಪಾಸಣೆ ನಡೆಯಿತು. 120 ಮಧುಮೇಹ ರಕ್ತದೊತ್ತದ ಪರೀಕ್ಷೆ ಮಾಡಲಾಯಿತು. 95 ಜನರಿಗೆ ಕಣ್ಣಿನ ಪರೀಕ್ಷೆ, ಶಸ್ತ್ರಚಿಕಿತ್ಸೆಗೆ ರೆಫರಲ್ ಮಾಡಿ, 35 ಜನರಿಗೆ ಶ್ವಾಸಕೋಶ ಪರೀಕ್ಷೆ ನಡೆಸಲಾಯಿತು. ಸಾಮಾನ್ಯ ರೋಗ ತಜ್ಞರು ರೋಗಿಯ ಲಕ್ಷಣಗಳನ್ನು ಆಧರಿಸಿ 42 ಜನರಿಗೆ ಇಸಿಜಿ ಪರೀಕ್ಷೆ ಮಾಡುವಂತೆ ತಿಳಿಸಿದರು.

ಶಿಬಿರದಲ್ಲಿ ಗ್ರಾಮದ ಮುಖಂಡರಾದ ರಾಮಣ್ಣ ಜವರೇಗೌಡ, ಬೀರಪ್ಪ ಮೂರ್ತಿ, ನಾರಾಯಣ ಹೆಲ್ತ್ ಪ್ರಶಾಂತ್, ಸಿಪ್ಲ ಬ್ರಿತ್ ಫ್ರೀ ನಾ ಸಮೀರ್, ಪ್ರಾಥಮಿಕ ಆರೋಗ್ಯ ಸಂರಕ್ಷಣಾ ಅಧಿಕಾರಿ ಸುಲೋಚನಾ, ಸಮುದಾಯ ಆರೋಗ್ಯ ಅಧಿಕಾರಿ ಅಮೃತ ರಾಜ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಆಶಾ ಕಾರ್ಯಕರ್ತೆ ನಂದಿನಿ, ಮಂಗಳಗೌರಿ, ಸವಿತಾ, ಕೆವಿಕೆ ಶಿವಕುಮಾರ್, ಎಸ್‌ಎಸ್‌ಟಿ ಕೃಷಿ ಅಧಿಕಾರಿ ಬ್ರೇಜನಿವ್, ಎಸ್‌ಎಸ್‌ಟಿ ಗ್ರಾಮ ಅಭಿವೃದ್ಧಿ ಅಧಿಕಾರಿ ಕುಮಾರ್, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಇದ್ದರು.

## ನಾಳೆಯಿಂದ ಸೆಸ್ಕ್ ಆನ್‌ಲೈನ್ ಸೇವೆಗಳ ಅಲಭ್ಯ

ಮೈಸೂರು, ಜು.23(ಜಿಎ)–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಉನ್ನತೀಕರಣದ ಹಿನ್ನೆಲೆ ಆನ್‌ಲೈನ್ ಸೇವೆಗಳು ಜು.25 ರಿಂದ 27ರವರೆಗೆ ಲಭ್ಯ ಇರುವುದಿಲ್ಲ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಿಗದಿತ ದಿನಾಂಕಗಳಂದು ಸರ್ವರ್ ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಜು.25ರಂದು ರಾತ್ರಿ 8.30 ರಿಂದ ಜು.27ರಂದು ರಾತ್ರಿ 10 ಗಂಟೆಯವರೆಗೆ ಸೆಸ್ಕ್‌ನ ಆನ್‌ಲೈನ್ ಸೇವೆಗಳಾದ ಆನ್‌ಲೈನ್ ವಿದ್ಯುತ್ ಬಿಲ್ ಪಾವತಿ, ಹೊಸ ಸಂಪರ್ಕಕ್ಕಾಗಿ ಅರ್ಜಿ, ಹೆಸರು ಬದಲಾವಣೆ, ಜಕಾತಿ ಬದಲಾವಣೆ, ನಗದು ಕೌಂಟರ್ ಹಾಗೂ ಇನ್ನಿತರೆ ಆನ್ ಲೈನ್ ಸೇವೆಗಳು ಲಭ್ಯವಿರುವುದಿಲ್ಲ.

ಸೆಸ್ಕ್ ವ್ಯಾಪ್ತಿಯ ವಿ.ವಿ. ಮೊಹಲ್ಲಾ, ಹೂಟಗಳ್ಳಿ, ಕುವೆಂಪುನಗರ, ರಾಮಕೃಷ್ಣನಗರ, ಕೇಂದ್ರೀಯ ಉಪವಿಭಾಗ, ಚಾಮುಂಡಿಪುರಂ, ಎನ್.ಆರ್.ಮೊಹಲ್ಲಾ, ಜ್ಯೋತಿನಗರ, ನಂಜನಗೂಡು, ಕೆ.ಆರ್.ನಗರ, ಹುಣಸೂರು, ಚಾಮರಾಜನಗರ, ಕೊಳ್ಳೇಗಾಲ, ಮಡಿಕೇರಿ, ಮಂಡ್ಯ, ಮಳವಳ್ಳಿ, ಹಾಸನ, ಚನ್ನರಾಯಪಟ್ಟಣ ಮತ್ತು ಅರಸಿಕೆರೆ ವ್ಯಾಪ್ತಿಯ ಗ್ರಾಹಕರಿಗೆ ಆನ್‌ಲೈನ್ ಸೇವೆಗಳು ಲಭ್ಯವಿರುವುದಿಲ್ಲ. ವಿದ್ಯುತ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ. ಆದ್ದರಿಂದ ಗ್ರಾಹಕರು ಸಹಕರಿಸುವಂತೆ ಸೆಸ್ಕ್ ಪ್ರಕಟಣೆಯಲ್ಲಿ ಕೋರಿದೆ.

## ಛದ್ಮವೇಷ, ಜಾನಪದ ಭಾವಗೀತೆ ಸ್ಪರ್ಧೆಗಳು

ಮೈಸೂರು, ಜು.23– ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ನರ್ಸರಿ, ಪ್ರೈಮರಿ ಮತ್ತು ಪ್ರೌಢಶಾಲೆಯ ಮೂರು ವಿಭಾಗಗಳಿಗೆ ಅಂತರ ಶಾಲಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ನರ್ಸರಿ ವಿಭಾಗದ ಎಲ್.ಕೆಜಿ ವಿದ್ಯಾರ್ಥಿಗಳಿಗೆ– ಆರೋಗ್ಯಕರ ಆಹಾರ, ಯು.ಕೆ.ಜಿ. ವಿದ್ಯಾರ್ಥಿಗಳಿಗೆ – ಗೃಹ ಬಳಕೆ ವಸ್ತುಗಳು, ಎಂಬ ಛದ್ಮವೇಷ ಸ್ಪರ್ಧೆಗಳು ಹಾಗೂ ಪ್ರೈಮರಿ ವಿಭಾಗಕ್ಕೆ ಜಾನಪದ ಗೀತೆ, ಪ್ರೌಢಶಾಲಾ ವಿಭಾಗಕ್ಕೆ ಭಾವಗೀತೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ನೋಂದಣಿಗೆ ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. 02.08.2025 ರಂದು ಶನಿವಾರ ಬೆಳಗ್ಗೆ 09.00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ದಿನಾಂಕ 26.07.2025ರ ಒಳಗೆ ನೊಂದಣಿ ಮಾಡಿಕೊಳ್ಳಬೇಕು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ರೂ.500/–, ರೂ.250/–, ರೂ.150/–, ರೂ.100/– ನಗದು ಬಹುಮಾನಗಳನ್ನು ಪದಕಗಳೊಡನೆ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಗುವುದು. ಪ್ರಥಮ ಮತ್ತು ದ್ವಿತೀಯ ಸ್ಥಾನಗಳಿಸುವ ಶಾಲೆಗೆ ಪರ್ಯಾಯ ಪಾರಿತೋಷಕವನ್ನು ಹಾಗೂ ಸ್ಮರಣಿಕೆಯನ್ನು ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಶ್ರೀಮತಿ ಶುಭಾ – 9481170174 ಸಂಪರ್ಕಿಸಬಹುದು.

# ಥ್ರೋಬಾಲ್ ಕರ್ನಾಟಕ ತಂಡಕ್ಕೆ ಸೇಂಟ್ ಜೋಸೆಫ್ ಕಾಲೇಜು ವಿದ್ಯಾರ್ಥಿನಿ ಆಯ್ಕೆ



ಮೈಸೂರು, ಜು.23(ಜಿಎ)–ಮೈಸೂರಿನ ಜಯಲಕ್ಷ್ಮೀಪುರಂನ ಸೇಂಟ್ ಜೋಸೆಫ್ ಫಸ್ಟ್ ಗ್ರೇಡ್ ಕಾಲೇಜಿನ ವಿದ್ಯಾರ್ಥಿನಿ ಪೃಥ್ವಿ ಪಿ.ಶೆಟ್ಟಿ 48ನೇ ಹಿರಿಯ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ತಂಡವನ್ನು ಪ್ರತಿನಿಧಿಸಲು ಆಯ್ಕೆಗೊಂಡಿದ್ದಾರೆ.

ಮಾರ್ಚ್ 28ರಿಂದ 30 ರವರೆಗೆ ಛತ್ತೀಸ್‌ಗಢದ ಭಿಲಾಯ್‌ನಲ್ಲಿ ನಡೆದ ಫೆಡರೇಶನ್ ಕಪ್‌ನಲ್ಲಿ ಕರ್ನಾಟಕ ಮಹಿಳಾ ಥ್ರೋಬಾಲ್ ತಂಡವನ್ನು ಪ್ರತಿನಿಧಿಸಿದ್ದು, ಕರ್ನಾಟಕ ಮಹಿಳಾ ತಂಡವು ಉತ್ತಮ ಪ್ರದರ್ಶನ ನೀಡಿ ರನ್ನರ್‌ಅಪ್ ಸ್ಥಾನವನ್ನು ಪಡೆದುಕೊಂಡಿದೆ. ಆ.16ರಿಂದ 18ರವರೆಗೆ ಜಾರ್ಖಂಡ್‌ನ ರಾಂಚಿಯಲ್ಲಿ ನಡೆಯಲಿರುವ 48ನೇ ಹಿರಿಯ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ತಂಡವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ.

# ಮೈಸೂರು ಅರಮನೆ ಚಿತ್ರ ಕಲಾವಿದ ಎಸ್.ಆರ್.ಅಯ್ಯಂಗಾರ್ ಚಿತ್ರಕಲೆಗಳ ಪ್ರದರ್ಶನ



## ಖ್ಯಾತ ಗಂಜೀಫಾ ಕಲಾವಿದ ಗಂಜೀಫಾ ರಘುಪತಿ ಭಟ್‌ರಿಂದ ಚಾಲನೆ



ಮೈಸೂರು ಅರಮನೆ ಚಿತ್ರಕಲಾವಿದ ಎಸ್.ಆರ್.ಅಯ್ಯಂಗಾರ್ ರಚಿತ ಚಿತ್ರಕಲೆಗಳ ಪ್ರದರ್ಶನಕ್ಕೆ ಖ್ಯಾತ ಗಂಜೀಫಾ ಚಿತ್ರಕಲಾವಿದ ಗಂಜೀಫಾ ರಘುಪತಿ ಭಟ್ ಚಾಲನೆ ನೀಡಿದರು.

ಮೈಸೂರು, ಜು.23(ಎಂಕೆ)– ಮೈಸೂರು ಅರಮನೆ ಚಿತ್ರಕಲಾವಿದರಾದ ಎಸ್.ಆರ್.ಅಯ್ಯಂಗಾರ್ ರಚಿತ ಅತ್ಯಾಕರ್ಷಕ ಪ್ರಾಚೀನ ಚಿತ್ರಕಲೆಗಳ ಪ್ರದರ್ಶನಕ್ಕೆ ಬುಧವಾರ ಚಾಲನೆ ನೀಡಲಾಯಿತು.

ನಗರದ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿರುವ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನಲ್ಲಿ ಜು.26ರವರೆಗೆ ನಡೆಯುವ ಚಿತ್ರಕಲಾ ಪ್ರದರ್ಶನಕ್ಕೆ ಖ್ಯಾತ ಗಂಜೀಫಾ ಚಿತ್ರಕಲಾವಿದ ಗಂಜೀಫಾ ರಘುಪತಿ ಭಟ್ ಚಾಲನೆ ನೀಡಿದರು.

ಮೈಸೂರು ಅರಮನೆ ಆವರಣ, ನೈಸರ್ಗಿಕ ಸೇರಿದಂತೆ ಹತ್ತು–ಹಲವು ಪ್ರಾಚೀನ ಚಿತ್ರಕಲೆಗಳನ್ನು ವೀಕ್ಷಣೆ ಮಾಡಿದ ಬಳಿಕ ಮಾತನಾಡಿದ ಅವರು, ವಿಜಯನಗರ ಸಾಮ್ರಾಜ್ಯ ಪತನದ ನಂತರ ಮೈಸೂರು ಸಂಸ್ಥಾನಕ್ಕೆ ಬಂದ ಅನೇಕ ಕಲಾವಿದರು ಅಂದಿನ ಕಾಲದಲ್ಲಿ ರವಿವರ್ಮನ ಪ್ರಭಾವಕ್ಕೊಳಗಾಗಿ ಚಿತ್ರಿಸಿರುವ ಚಿತ್ರಕಲೆಗಳು ಇಂದಿಗೂ ಆಕರ್ಷಣೆಯವಾಗಿದ್ದು, ಇಂದಿಗೂ ಗಮನ ಸೆಳೆಯುತ್ತಿವೆ ಅವುಗಳಲ್ಲಿ ಎಸ್.ಆರ್. ಅಯ್ಯಂಗಾರ್ ಅವರು ರಚಿಸಿರುವ ಚಿತ್ರಗಳು ಸೇರಿವೆ. ಅವರು ಚಿತ್ರಿಸಿರುವ ಕಲೆಗಳನ್ನು ಗಮನಿಸಿದರೆ, ಅವುಗಳಲ್ಲಿ ಸತ್ಯ–ಸತ್ವವೆಂಬುದು ಅಡಗಿದೆ ಎಂದರು.

ಮೈಸೂರಿನಲ್ಲಿ ಚಿತ್ರಕಲೆ ಉಳಿದಿದೆ ಎಂಬುದಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ನೀಡಿದ ಕೊಡುಗೆಯೇ ಕಾರಣ. ಆದರೆ, ಇತ್ತೀಚೆಗೆ ಎಐ(ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ಬೆಳೆದಂತೆ ಚಿತ್ರಕಲೆ ಮೇಲಿನ ಆಸಕ್ತಿ ಕಡಿಮೆಯಾಗುತ್ತಿದೆ. ಆದ್ದರಿಂದ ಚಿತ್ರಕಲೆಯನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಚಿತ್ರಕಲೆಯ ಪ್ರೋತ್ಸಾಹಕ್ಕೆ ಅನುಗುಣವಾದ ಕಾರ್ಯಚಟುವಟಿಕೆಗಳನ್ನು ರೂಪಿಸಬೇಕು. ದೇಶೀಯ ಚಿತ್ರಕಲೆಯನ್ನು ಉಳಿಸುವ ಕಾರ್ಯವಾಗಬೇಕು. ಹಾಗೆಯೇ ಈ ಜಾಗದಲ್ಲಿ ಶಾಶ್ವತವಾಗಿ ಚಿತ್ರಕಲಾ ಗ್ಯಾಲರಿ ಆಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಆರ್ಕಿಟೆಕ್ಚರ್ ಬಿ.ಎಲ್.ಮಂಜುನಾಥ್, ಅರಮನೆ ಕಲಾವಿದರಾದ ದಿ.ಎಸ್.ಆರ್. ಅಯ್ಯಂಗಾರ್ ಮೊಮ್ಮಗ ಅವಿನಾಶ್ ಪಾಠಕ್, ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನ ಸಹಾಯಕ ಪ್ರಾಧ್ಯಾಪಕ ಮದ್ವೇಶ್ ಪಾಂಡುರಂಗಿ ಮತ್ತಿತರರು ಉಪಸ್ಥಿತರಿದ್ದರು.

### ಪ್ರಾಚೀನ ಚಿತ್ರಕಲೆಗಳ ಆಕರ್ಷಣೆ...!

ಮೈಸೂರು ಅರಮನೆ ಚಿತ್ರ ಕಲಾವಿದರಾದ ದಿವಂಗತ ಎಸ್.ಆರ್. ಅಯ್ಯಂಗಾರ್ ಅವರು, 1934 ರಿಂದ 1945ರ ನಡುವೆ ಚಿತ್ರಿಸಲಾದ 16ಕ್ಕೂ ಹೆಚ್ಚು ಪ್ರಾಚೀನ ಚಿತ್ರಕಲೆಗಳು ಕಲಾಭಿಮಾನಿಗಳು, ವಿದ್ಯಾರ್ಥಿಗಳ ಗಮನ ಸೆಳೆಯುತ್ತಿವೆ. ಜೊತೆಗೆ ಎಸ್.ಆರ್. ಅಯ್ಯಂಗಾರ ಅವರಿಗೆ ಲಭಿಸಿರುವ ಪ್ರಶಸ್ತಿಗಳ ವೀಕ್ಷಣೆಗೆ ಇಡಲಾಗಿದೆ.


ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರು
ಜನನೆಚ್ಚಿನ ನಾಯಕರಾದ
ಸನ್ಮಾನ್ಯ ಶ್ರೀ
ಕೆ.ಹರೀಶ್‌ಗೌಡರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಎಂ.ಎಸ್.ಜಿ. ಗ್ರೂಪ್ಸ್
ಎಂ.ಜಿ.ಕೊಪ್ಪಲ್, ಮೈಸೂರು
ಕೇಬಲ್ ಪುಟ್ಟರಾಜು


ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರು
ಜನನೆಚ್ಚಿನ ನಾಯಕರಾದ
ಸನ್ಮಾನ್ಯ ಶ್ರೀ
ಕೆ.ಹರೀಶ್‌ಗೌಡರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು
ಕೆ.ಹೆಚ್.ಜಿ. ಗ್ರೂಪ್ಸ್

# ಕೆಬಿಜಿಯವರಿಗೆ ಪತ್ರಿಕಾ ಛಾಯಾಗ್ರಾಹಕರ ಶ್ರದ್ಧಾಂಜಲಿ

ಮೈಸೂರು, ಜು.23(ಜಿಎ)– ಇತ್ತೀಚೆಗೆ ನಿಧನರಾದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ(ಕೆಬಿಜಿ) ಅವರಿಗೆ ಬುಧವಾರ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ ಮಾತನಾಡಿ, 'ಸ್ಟಾರ್ ಆಫ್ ಮೈಸೂರ್', 'ಮೈಸೂರು ಮಿತ್ರ' ಪತ್ರಿಕೆಗಳ ಮೂಲಕ ಕೆಬಿಜಿ ಅವರು ಮೈಸೂರಿನ ಸುದ್ದಿ ಸಮಾಚಾರವನ್ನು ತಲುಪಿಸಲು ಸಾಕಷ್ಟು ಶ್ರಮ ವಹಿಸಿದರು. ಸಣ್ಣ ಪತ್ರಿಕೆಗಳ ತವರೂರಾದ ಮೈಸೂರಿಗೆ ಎರಡು ಪತ್ರಿಕೆಗಳು ಸಾಕಷ್ಟು ಕೊಡುಗೆ ನೀಡಿವೆ ಎಂದರು.

ಒಂದು ಪತ್ರಿಕೆ ಸಂಸ್ಥೆಯನ್ನು ವ್ಯವಸ್ಥಿತವಾಗಿ ಸ್ಥಾಪಿಸಿ, ಪತ್ರಿಕೆಯಲ್ಲಿ ಯಾವುದೇ ತಪ್ಪುಗಳು ಆಗದಂತೆ ಗಮನ ವಹಿಸುತ್ತಿದ್ದರು. ಕೆಬಿಜಿ ಅವರು ಹುಟ್ಟು ಹಾಕಿದ 'ಸ್ಟಾರ್ ಆಫ್ ಮೈಸೂರ್', 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದವರು ಇಂದು ರಾಜ್ಯ ಮಾತ್ರವಲ್ಲದೇ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಕೆಲಸ ಮಾಡಿದ್ದಾರೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಕೆಲವೊಂದು ಸಂಸ್ಥೆಯವರು ಸಂದರ್ಶನವನ್ನು ಮಾಡುತ್ತಿರಲಿಲ್ಲ. ಅಷ್ಟು ಶಿಸ್ತಿನಿಂದ ಎರಡು ಪತ್ರಿಕೆಗಳು ಕೂಡಿದೆ ಎಂದು ತಿಳಿಸಿದರು.

ಕೆಬಿಜಿ ಅವರು ಕೇವಲ ಪತ್ರಿಕೋದ್ಯಮಕ್ಕೆ ಮಾತ್ರ ಸೀಮಿತವಾಗದೇ ಮೈಸೂರು ನಗರಕ್ಕೂ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಇಂದಿನ ಮೈಸೂರಿನ ಅಭಿವೃದ್ಧಿ ಮತ್ತು ಪರಿಸರಕ್ಕೆ ನೀಡಿರುವ ಕೊಡುಗೆ ಅಪಾರ. ಅವರ ಹೆಸರನ್ನು ಮೈಸೂರಿನ ಯಾವುದಾದರೂ ಒಂದು ವೃತ್ತಕ್ಕೆ ನಾಮಕರಣ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಯಾದವ್, ಖಜಾಂಚಿ ನಂದನ್, ಪತ್ರಿಕಾ ಛಾಯಾಗ್ರಾಹಕರಾದ ಚಂದ್ರು, ಬಸವರಾಜು, ಉದಯ್, ಹಂಪ ನಾಗರಾಜ್, ಗವಿಮಠ ರವಿ, ನವೀನ್, ಅರುಣ್, ಪತ್ರಕರ್ತರಾದ ಎಂ.ಟಿ. ಯೋಗೇಶ್‌ಕುಮಾರ್, ಜಯಂತ್, ರಾಮ್, ಕೆ.ಪಿ.ನಾಗರಾಜ್ ಉಪಸ್ಥಿತರಿದ್ದರು.

## ಮೈಸೂರಿನ ವೃತ್ತವೊಂದಕ್ಕೆ ಕೆಜಿಜಿ ಹೆಸರು ನಾಮಕರಣಕ್ಕೆ ಮನವಿ



ಇತ್ತೀಚೆಗೆ ನಿಧನರಾದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ಬುಧವಾರ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮಾರ್ಗನ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಜೂನಿಯರ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಮಾಲಿಕ್ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಜೂನಿಯರ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಎಕ್ಕ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| 3 ಬಿಹೆಚ್‌ಕೆ (ತ) | 4 ಪ್ರದರ್ಶನಗಳು |
| **ಸಂಗಂ** | |
| ಎಕ್ಕ (ಕ) | 4 ಪ್ರದರ್ಶನಗಳು |
| **ಲಿಡೋ** | |
| ತಮ್ಮುಡು (ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಮಾದೇವ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | 28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ. |
| ಸ್ಕ್ರೀನ್ 2 | ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ. |
| ಸ್ಕ್ರೀನ್ 3 | ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ. |
| ಸ್ಕ್ರೀನ್ 4 | ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ. |
| ಸ್ಕ್ರೀನ್ 2 | ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ. |
| ಸ್ಕ್ರೀನ್ 3 | ಯುದ್ಧಕಾಂಡ 2 (ಕ): ಸಂ.6.50ಕ್ಕೆ. |
| ಸ್ಕ್ರೀನ್ 4 | ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಚರ್ಚೆ



ಮೈಸೂರು–ಕೊಡಗು ಮಾಜಿ ಸಂಸದ ಪ್ರತಾಪ್ ಸಿಂಹ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಸಂಸತ್ ಭವನದ ಅವರ ಕಚೇರಿಯಲ್ಲಿ ಭೇಟಿ ಮಾಡಿ ಚರ್ಚಿಸಿದರು. ಈ ವೇಳೆ ಭಾರತದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಹ್ಲಾದ್ ಜೋಶಿ ಉಪಸ್ಥಿತರಿದ್ದರು.

# ನ್ಯಾಯಾಲಯದ ವ್ಯಾಜ್ಯ ಮುಗಿಯುವವರೆಗೆ ಅತಿಥಿ ಉಪನ್ಯಾಸಕರ ಸೇವೆ ಮುಂದುವರೆಸಿ

## ಉನ್ನತ ಶಿಕ್ಷಣ ಸಚಿವರಿಗೆ ಎಂಎಲ್‌ಸಿ ಕೆ.ವಿವೇಕಾನಂದ ಪತ್ರ

ಮೈಸೂರು, ಜು.23(ಎಂಕೆ)– ನ್ಯಾಯಾಲಯದಲ್ಲಿ ವ್ಯಾಜ್ಯ ಮುಗಿಯುವವರೆಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸೇವೆಯನ್ನು ಮುಂದುವರೆಸುವಂತೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಪತ್ರ ಬರೆದಿದ್ದಾರೆ.



ಕೆ.ವಿವೇಕಾನಂದ

ರಾಜ್ಯಾದ್ಯಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸೇವಾ ಅವಧಿ ಆ.2ರಂದು ಮುಗಿಯಲಿದ್ದು, ಏಕಕಾಲದಲ್ಲಿ ಸುಮಾರು 10,500 ಅತಿಥಿ ಉಪನ್ಯಾಸಕರು ಕರ್ತವ್ಯದಿಂದ ಬಿಡುಗಡೆ ಹೊಂದಲಿದ್ದಾರೆ. ಇದರಿಂದ ಕಾಲೇಜಿನಲ್ಲಿ ಪಾಠ–ಪ್ರವಚನಕ್ಕೆ ತೊಂದರೆಯಾಗಲಿದೆ. ಅಲ್ಲದೆ ಅವರ ಸ್ಥಾನಕ್ಕೆ ಪರ್ಯಾಯವಾಗಿ ನೇಮಿಸಿಕೊಳ್ಳಲು ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದರಿಂದ ಯಾವುದೇ ನೇಮಕಾತಿಯ ಕೌನ್ಸೆಲಿಂಗ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.

ಅಲ್ಲದೆ ವಿದ್ಯಾರ್ಥಿಗಳಿಗೆ ಇನ್ನು 2 ತಿಂಗಳಿಗೆ ಪರೀಕ್ಷೆ ಬರುವುದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವ್ಯಾಜ್ಯವು ಇತ್ಯರ್ಥಗೊಳ್ಳುವವರೆಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಗಳನ್ನು ಸೇವೆಯಲ್ಲಿ ಮುಂದುವರೆಸಲು ಅಗತ್ಯ ಕ್ರಮಕ್ಕೆ ಗೊಳ್ಳುವಂತೆ ಮನವಿ ಮಾಡಿದ್ದಾರೆ.

# ಜಿಎಸ್‌ಟಿ ಗದಾಪ್ರಹಾರ ಖಂಡಿಸಿ ಸಣ್ಣ ವ್ಯಾಪಾರಿಗಳ ಹೋರಾಟಕ್ಕೆ ಬಿಜೆಪಿ ಬೆಂಬಲ

## ಮುಖ್ಯಮಂತ್ರಿ ಕುಮ್ಮಕ್ಕಿನಿಂದಲೇ ಅಧಿಕಾರಿಗಳು ವರ್ತಕರಿಗೆ ನೋಟಿಸ್ ಕೊಟ್ಟಿದ್ದಾರೆ; ವಿಜಯೇಂದ್ರ

ಬೆಂಗಳೂರು, ಜು.23(ಕೆಎಂಶಿ)– ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ವಿರೋಧಿಸಿ ತರಕಾರಿ, ಹಣ್ಣು, ಹೂವು, ಹಾಲು ಸೇರಿದಂತೆ ಸಣ್ಣ ವ್ಯಾಪಾರಿಗಳು ನಡೆಸುತ್ತಿರುವ ಹೋರಾಟಕ್ಕೆ ಬಿಜೆಪಿಯ ಸಂಪೂರ್ಣ ಬೆಂಬಲವಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಾಣಿಜ್ಯ ತೆರಿಗೆ ಇಲಾಖೆಯಿಂದ ನೋಟಿಸ್ ನೀಡುತ್ತಿರುವುದಕ್ಕೆ ಬೀದಿಬದಿ ವ್ಯಾಪಾರಿಗಳು, ಮಧ್ಯಮ, ಸಣ್ಣ ಮತ್ತು ಅತಿಸಣ್ಣ ವ್ಯಾಪಾರಿಗಳು ಭಯ, ಆತಂಕಕ್ಕೆ ಒಳಗಾಗಿದ್ದಾರೆ ಎಂದರು.

**ಕೇಂದ್ರದ ವಿರುದ್ಧ ಕುತಂತ್ರ:** ಮತ್ತೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸದಸ್ಯರು ಕೇಂದ್ರ ಸರ್ಕಾರವನ್ನು ದೂರುವ ಕುತಂತ್ರ ಮಾಡುತ್ತಿದ್ದಾರೆ. ಜಿಎಸ್‌ಟಿ ಸಂಗ್ರಹ ವಿಷಯದಲ್ಲಿ ಕರ್ನಾಟಕ ಮೊದಲ ಸ್ಥಾನಕ್ಕೆ ಬರಬೇಕೆಂದು ಮುಖ್ಯಮಂತ್ರಿ ಬಹಿರಂಗವಾಗಿಯೇ ಕರೆ ಕೊಟ್ಟಿದ್ದರು.

ಮಹಾರಾಷ್ಟ್ರವನ್ನು ಹಿಂದಿಕ್ಕಿ ಅತೀ ಹೆಚ್ಚು ಜಿಎಸ್‌ಟಿ ಸಂಗ್ರಹ ಮಾಡಬೇಕೆಂದು ಅಧಿಕಾರಿಗಳಿಗೆ ಮೊತ್ತದ ಗುರಿಯನ್ನೂ ಸಿದ್ದರಾಮಯ್ಯ ನೀಡಿದ್ದರು.

**ಸರ್ಕಾರವೇ ವಸೂಲಿಗಿಳಿದಿದೆ :** ರಾಜ್ಯದ ಖಜಾನೆ ಖಾಲಿ ಆಗಿರುವ ಸತ್ಯ ಹೊರಬರುತ್ತಿದೆ. ಮುಖ್ಯಮಂತ್ರಿ ವಾಣಿಜ್ಯ ತೆರಿಗೆ ಇಲಾಖೆಯಿಂದ ನೋಟಿಸ್ ಕೊಡಿಸುವ ಮೂಲಕ ಸರ್ಕಾರವೇ ವಸೂಲಿಗೆ ಇಳಿದಿದೆ. ಸಣ್ಣ ಮತ್ತು ಅತಿಸಣ್ಣ ವ್ಯಾಪಾರಿಗಳಿಗೆ ನೋಟಿಸ್ ಕೊಡುವುದನ್ನು ತಕ್ಷಣ ಸ್ಥಗಿತಗೊಳಿಸಬೇಕು. ಈಗಾಗಲೇ ಕೊಟ್ಟಿರುವ ನೋಟಿಸ್ ಹಿಂದೆ ಪಡೆಯಬೇಕು ಎಂದರು.



ಹಾಲು ಮತ್ತಿತರ ಕೆಲವು ವಸ್ತುಗಳು ಜಿಎಸ್‌ಟಿ ವ್ಯಾಪ್ತಿಗೆ ಬರುವುದಿಲ್ಲ. ಆದರೂ, ನೋಟಿಸ್ ನೀಡಲಾಗುತ್ತಿದೆ. ಜಿಎಸ್‌ಟಿ ವ್ಯವಸ್ಥೆಯಲ್ಲಿ 3 ಸ್ಲ್ಯಾಬ್‌ಗಳಿದ್ದು, ಎಲ್ಲರಿಗೂ ವಾಣಿಜ್ಯ ತೆರಿಗೆ ಇಲಾಖೆ ಶೇ.18 ತೆರಿಗೆ ಪಾವತಿಗೆ ನೋಟಿಸ್ ಕೊಡುತ್ತಿದೆ.

**ಕಾಂಗ್ರೆಸ್ ಕಾರ್ಯಕರ್ತರ ದಾಂದಲೆ:** ಹೋರಾಟದ ನೆಪದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ರಾಜ್ಯ ಕಾರ್ಯಾಲಯದ ಮುಂದೆ ಪದೇ ಪದೆ ದಾಂದಲೆ, ಗಲಾಟೆ ಮಾಡುತ್ತಿದ್ದು, ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಲಾಗಿದೆ. ಪೊಲೀಸ್ ವ್ಯವಸ್ಥೆ ಧಿಕ್ಕರಿಸಿ ಕಾಂಗ್ರೆಸ್ ಕಚೇರಿ ಮುಂದೆ ಹೋರಾಟ ನಡೆಸುವ ಶಕ್ತಿ ನಮ್ಮ ಕಾರ್ಯಕರ್ತರಿಗೂ ಇದೆ.

ಕಾಂಗ್ರೆಸ್ ಕಾರ್ಯಕರ್ತರಿಗೆ ಹೋರಾಟದ ಚಟ ಇದ್ದರೆ ಫ್ರೀಡಂಪಾರ್ಕ್‌ನಲ್ಲಿ ನಡೆಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸುವುದು ಸೂಕ್ತ ಎಂದರು.

**ಮುಡಾ ಪ್ರಕರಣದಲ್ಲಿ ಸಿಎಂಗೆ ಕ್ಲೀನ್‌ಚಿಟ್ ನೀಡಿಲ್ಲ:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ನಿವೇಶನ ಹಂಚಿಕೆ ಹಗರಣ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ.)ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ನಿಜ, ಆದರೆ, ಮುಡಾ ಹಗರಣದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ಕೊಟ್ಟಿಲ್ಲ.

**ಸಿಎಂ ಈಗಲೂ ಆರೋಪಿಯೇ:** ಮುಖ್ಯಮಂತ್ರಿ ಮತ್ತು ಅವರ ಕುಟುಂಬ ಹಗರಣದ ಭಾಗೀದಾರರು ಎಂಬ ಬಿಜೆಪಿ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ, ಸಿದ್ದರಾಮಯ್ಯ ನಿರಪರಾಧಿ ಎಂಬುದಾಗಿ ಸುಪ್ರೀಂಕೋರ್ಟ್ ಹೇಳಿಲ್ಲ, ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಈಗಲೂ ಆರೋಪಿ ಸ್ಥಾನದಲ್ಲಿಯೇ ಇದ್ದಾರೆ. ಇದು ಸಿಬಿಐ ತನಿಖೆಗೆ ಸೂಕ್ತ ಪ್ರಕರಣ, ಮುಖ್ಯಮಂತ್ರಿ ಕುಟುಂಬಕ್ಕೆ 14 ನಿವೇಶನಗಳ ಹಂಚಿಕೆ ಮಾಡಲಾಗಿದೆ, 5 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ನಿವೇಶನಗಳು ರಿಯಲ್ ಎಸ್ಟೇಟ್ ಏಜೆಂಟರ ಮೂಲಕ ಮಾರಾಟ ಆಗಿವೆ ಎಂದರು.

**ಧರ್ಮಸ್ಥಳ ವಿರುದ್ಧ ಅನಗತ್ಯ ಅಪಪ್ರಚಾರ ಸಲ್ಲದು:** ಧರ್ಮಸ್ಥಳ ಪ್ರದೇಶದಲ್ಲಿ ನಿಗೂಢ ಕೊಲೆಗಳ ತನಿಖೆಗೆ ಸರ್ಕಾರ ಎಸ್‌ಐಟಿ ರಚಿಸಿದ್ದು, ಸತ್ಯಾಂಶ ಹೊರಬರಬೇಕು ಎಂಬುದು ಎಲ್ಲರ ಆಶಯವಾಗಿದೆ. ಈ ವಿವಾದ ಇಟ್ಟುಕೊಂಡು ಸ್ಥಳೀಯ ವಾತಾವರಣ ಹಾಳು ಮಾಡಲು ಅಪಪ್ರಚಾರ ಮಾಡುವುದನ್ನು ತಡೆಯದಿದ್ದರೆ, ಪಕ್ಷದ ಮುಂದಿನ ನಡೆಯನ್ನು ಚರ್ಚಿಸಿ ನಿರ್ಧರಿಸಲಾಗುವುದು ಎಂದರು.

ಆಡಳಿತ ಪಕ್ಷದ ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ ಎಂದು ಹಾದಿಬೀದಿಯಲ್ಲಿ ಮುಖ್ಯಮಂತ್ರಿ ಮರ್ಯಾದೆ ತೆಗೆಯುತ್ತಿದ್ದಾರೆ. ವಿಧಾನಸಭಾ ಅಧಿವೇಶನ ಸುಸೂತ್ರವಾಗಿ ನಡೆಸುವ ದೃಷ್ಟಿಯಿಂದ ಶಾಸಕರಿಗೆ ತಲಾ 50 ಕೋಟಿ ರೂ. ಅನುದಾನ ಘೋಷಿಸಲಾಗಿದೆ. ಆದರೆ, ಹಣ ಜಮಾ ಆಗಿಲ್ಲ. ಅಭಿವೃದ್ಧಿ ವಿಷಯಗಳು ಯಾವುದೆಂಬುದು ಇನ್ನೂ ತೀರ್ಮಾನ ಆಗಿಲ್ಲ ಎಂದರು.

## ತಾರಕ ಜಲಾಶಯ ಪ್ರದೇಶದಲ್ಲಿ ಪ್ರವಾಹ ಮುನ್ನೆಚ್ಚರಿಕೆ ಸೂಚನೆ

ಮೈಸೂರು,ಜು.23– ತಾರಕ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಜಲಾಶಯಕ್ಕೆ ಒಳಹರಿವು ಹೆಚ್ಚಾಗುತ್ತಿರುವುದರಿಂದ ಗರಿಷ್ಠ ಮಟ್ಟ ತಲುಪುವ ಹಂತದಲ್ಲಿದೆ. ಹಾಗಾಗಿ ಜಲಾಶಯದಿಂದ ಯಾವುದೇ ಸಮಯದಲ್ಲಿ ಕ್ರೆಸ್ಟ್ ಗೇಟುಗಳ ಮೂಲಕ ನೀರನ್ನು ಹೊರ ಬಿಡುವ ಸಂಭವ ಇರುವುದರಿಂದ, ಸಾರ್ವಜನಿಕರು ನದಿಯ ದಂಡೆಯ ಗ್ರಾಮ ವಾಸಿಗಳು ಹಾಗೂ ನದಿ ಪಾತ್ರದ ತಗ್ಗು ಪ್ರದೇಶದಲ್ಲಿ ಇರುವ ಆಸ್ತಿ–ಪಾಸ್ತಿ, ಜನ, ಜಾನುವಾರು ರಕ್ಷಣೆಗೆ ಮುನ್ನೆಚ್ಚರಿಕೆ ವಹಿಸಿ, ಸುರಕ್ಷಿತ ಸ್ಥಳಗಳಿಗೆ ತೆರಳಬೇಕೆಂದು ಹೆಚ್.ಡಿ. ಕೋಟೆ ಕಾವೇರಿ ನೀರಾವರಿ ನಿಗಮ ನಿಯಮಿತದ ತಾರಕ ನಾಲಾ ಉಪ–ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಟಶೇಖರಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೇತನ ಹೆಚ್ಚಳಕ್ಕೆ ಆಗ್ರಹಿಸಿ ಸಕ್ಕರೆ ಕಾರ್ಖಾನೆಗಳ ನೌಕರರಿಂದ 'ವಿಧಾನಸೌಧ ಚಲೋ'

ಮೈಸೂರು, ಜು.23(ಎಂಟಿವೈ)– ನಿಯಮಾನುಸಾರ ವೇತನ ಹೆಚ್ಚಳ ಮಾಡದ ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ಆಡಳಿತ ಮಂಡಳಿಯ ಧೋರಣೆ ಖಂಡಿಸಿ, ಆ.11ರಿಂದ ಆರಂಭವಾಗುವ ವಿಧಾನಸಭಾ ಅಧಿವೇಶನ ಸಂದರ್ಭದಲ್ಲಿ ಬೆಂಗಳೂರಲ್ಲಿ ಸಕ್ಕರೆ ಕಾರ್ಖಾನೆಗಳ ನೌಕರರ ಸಮಾವೇಶ ನಡೆಸಿ, 'ವಿಧಾನಸೌಧ ಚಲೋ' ನಡೆಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ಶುಗರ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಬಿ. ನಾಗರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ 79 ಸಕ್ಕರೆ ಕಾರ್ಖಾನೆಗಳಿದ್ದು, 80 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. 1960 ರಿಂದ 1989ರವರೆಗೆ ಕೇಂದ್ರ ಸಕ್ಕರೆ ವೇತನ ಮಂಡಳಿ ಶಿಫಾರಸ್ಸಿನ ಅನ್ವಯ ಸಕ್ಕರೆ ಕಾರ್ಖಾನೆ ಕಾರ್ಮಿಕರು ವೇತನ ಪಡೆಯುತ್ತಿದ್ದರು. 1990ರಿಂದ ರಾಜ್ಯದಲ್ಲಿ ತ್ರಿಪಕ್ಷೀಯ ಸಕ್ಕರೆ ವೇತನ ಸಮಿತಿ ಮೂಲಕ ವೇತನ ಪಡೆಯುವ ವ್ಯವಸ್ಥೆ ಜಾರಿಗೊಳಿಸಲಾಯಿತು. ಆದರೆ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆ ಮಾಲೀಕರು 7ನೇ ವೇತನ ಒಪ್ಪಂದದಂತೆ ಕಾರ್ಮಿಕರಿಗೆ ವೇತನ ನೀಡಲು ಹಿಂದೇಟು ಹಾಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಗಮನ ಸೆಳೆಯಲು ಅಧಿವೇಶನ ಆರಂಭವಾದ ಬಳಿಕ ಬೆಂಗಳೂರಲ್ಲಿ ಕಾರ್ಮಿಕರ ಸಭೆ ನಡೆಸಿದ ನಂತರ ವಿಧಾನಸೌಧ ಚಲೋ ನಡೆಸಲಾಗುವುದು ಎಂದು ತಿಳಿಸಿದರು.

ಸಕ್ಕರೆ ಕಾರ್ಖಾನೆ ಕಾರ್ಮಿಕರಿಗೆ ಕನಿಷ್ಠ ವೇತನ ನೀಡದೇ ಅತ್ಯಲ್ಪ ಹಣ ನೀಡಿ ದುಡಿಸಿಕೊಳ್ಳಲಾಗುತ್ತಿದೆ. ಈ ಹಿಂದೆ ಉದ್ಯಮಿಗಳು ಸಕ್ಕರೆ ಕಾರ್ಖಾನೆ ನಡೆಸುತ್ತಿದ್ದರು. ಆದರೆ ಈಗ ಬಹುತೇಕ ಸಚಿವರು, ರಾಜಕಾರಣಿಗಳು ನಡೆಸುತ್ತಿದ್ದಾರೆ. ಹೀಗಾಗಿ ಕಾರ್ಮಿಕ ಇಲಾಖೆ ಅಧಿಕಾರಿಗಳು ಪ್ರಶ್ನಿಸುವ ಧೈರ್ಯ ಮಾಡದೇ ಸುಮ್ಮನಿದ್ದಾರೆ. ಇದರಿಂದಾಗಿ ಕಾರ್ಮಿಕರ ಶೋಷಣೆ ನಡೆಯುತ್ತಿದೆ ಎಂದು ಆರೋಪಿಸಿದರು.

ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳು ಅಕ್ಟೋಬರ್ 25 ರಿಂದ ಕಬ್ಬು ಅರೆಯುವ ಕಾರ್ಯ ಆರಂಭಿಸುತ್ತವೆ. ಇದಕ್ಕೂ ಮೊದಲು ಎಂಟನೇ ವೇತನ ಆಯೋಗದ ಒಪ್ಪಂದ ಏರ್ಪಡದಿದ್ದರೆ ಸೆಪ್ಟೆಂಬರ್‌ನಿಂದಲೇ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಶುಗರ್ ವರ್ಕರ್ಸ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಡಿ.ಎನ್. ಕೃಷ್ಣೇಗೌಡ, ಇನ್ನಿತರ ಸಕ್ಕರೆ ಕಾರ್ಖಾನೆ ಕಾರ್ಮಿಕ ಮುಖಂಡರಾದ ಎಂ.ಇ. ಪಾರ್ಥ, ಎಚ್.ಎಸ್. ಗಿರೀಶ್, ಸಿದ್ದೇಗೌಡ, ಪುಟ್ಟಮಾದೇಗೌಡ, ರಾಮಕೃಷ್ಣ, ಜವರೇಗೌಡ, ಕುಬೇರ, ರಮೇಶ ಇದ್ದರು.

## ಹತ್ತನೆ ವರುಷ ಭತ್ತದ ಹರುಷ ವಿಶೇಷ ಉಪನ್ಯಾಸ ಮಾಲಿಕೆ



'ಹತ್ತನೆ ವರುಷ ಬತ್ತದ ಹರುಷ' ಉಪನ್ಯಾಸ ಮಾಲಿಕೆಗೆ ಕುಮಾರಿ ಶುಕ್ತಿ ಅನಂತ್ ಚಾಲನೆ ನೀಡಿದರು.

ಮೈಸೂರು, ಜು. 23– ರಾಮಕೃಷ್ಣ ವಿದ್ಯಾಕೇಂದ್ರ ಪದವಿಪೂರ್ವ ಕಾಲೇಜಿನಲ್ಲಿ 'ಹತ್ತನೆ ವರುಷ ಬತ್ತದ ಹರುಷ ವಿಶೇಷ ಉಪನ್ಯಾಸ ಮಾಲಿಕೆ– 01 ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕುಮಾರಿ ಶುಕ್ತಿ ಅನಂತ್ ಹದಿಹರೆಯದವರ ಸಮಸ್ಯೆಗಳು ಕುರಿತು ಉಪನ್ಯಾಸ ನೀಡಿದರು. ಇವರು ತಮ್ಮ 17ನೇ ವಯಸ್ಸಿನಲ್ಲಿ ಚಾಲೆಂಜಸ್ ಫೇಸ್ಡ್ ಬೈ ಯೂತ್ ವಿಷಯದ ಬಗ್ಗೆ ನ್ಯೂಜಿಲ್ಯಾಂಡ್‌ನ ನ್ಯಾಷನಲ್ ಜನರಲ್ ಅಸೆಂಬ್ಲಿಯಲ್ಲಿ ಮಾತನಾಡಿ ಮೆಚ್ಚುಗೆಗೆ ಪಾತ್ರರಾಗಿದ್ದರು.

ಹದಿಹರೆಯದವರು ತಾವು ಎದುರಿಸುತ್ತಿರುವ ಮಾನಸಿಕ ಸಮಸ್ಯೆಗಳು ಮತ್ತು ತೊಳಲಾಟವನ್ನು ತಮ್ಮೊಳಗೆ ಅಡಗಿಸಿಟ್ಟುಕೊಳ್ಳದೆ ಪೋಷಕರು ಅಥವಾ ಶಿಕ್ಷಕರೊಂದಿಗೆ ಹಂಚಿಕೊಳ್ಳುವುದರೊಂದಿಗೆ ಪರಿಹಾರ ಮಾಡಿಕೊಳ್ಳುವಲ್ಲಿ ಪ್ರಯತ್ನಿಸಬೇಕು ಎಂದರು. ಸಮಸ್ಯೆಯಿಂದ ಹೊರಬರಲು ದುಶ್ಚಟಗಳಿಗೆ ಬಲಿಯಾಗದೆ ಒಳ್ಳೆ ಸ್ನೇಹಿತರ ಸಹವಾಸ, ಕ್ರೀಡೆ, ಓದು ಮತ್ತು ಬರವಣಿಗೆಯ ಮೊರೆ ಹೋಗಬೇಕು. ಸಿನಿಮಾಗಳಿಂದ ಪ್ರೇರಿತರಾಗದೆ ನಟ–ನಟಿಯರನ್ನು ಅಂಧಾನುಕರಣೆ ಮಾಡದೆ ವಿದ್ಯಾರ್ಥಿಗಳು ತಮ್ಮತನವನ್ನು ಬೆಳೆಸಿಕೊಳ್ಳಬೇಕು ಎಂದು ತಮ್ಮ ಹದಿಹರೆಯದ ಅನುಭವಗಳ ಉದಾಹರಣೆಯೊಂದಿಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ ವಹಿಸಿದ್ದರು. ಸೇವಾ ಸಂಘದ ಖಜಾಂಚಿ ಎಚ್. ಜಿ. ರಮೇಶ್, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ ಜಿ. ಚಂದ್ರಶೇಖರ್, ಪ್ರಾಂಶುಪಾಲ ಸಿ. ಶಿವಪ್ಪ ಮತ್ತು ಬೋಧಕ–ಬೋಧಕೇತರರು ಉಪಸ್ಥಿತರಿದ್ದರು.

# ಸಣ್ಣ–ಪುಟ್ಟ ವ್ಯಾಪಾರಿಗಳ ಜಿಎಸ್‌ಟಿ ವ್ಯಾಪ್ತಿಗೆ ತರುವ ಹುನ್ನಾರ ಖಂಡಿಸಿ ವಿವಿಧ ಸಂಘಟನೆಗಳ ಪ್ರತಿಭಟನೆ





ಸಣ್ಣ ವ್ಯಾಪಾರಿಗಳಿಂದ ಜಿಎಸ್‌ಟಿ, ತೆರಿಗೆ ಸಂಗ್ರಹಿಸದಂತೆ ಆಗ್ರಹಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಮೈಸೂರು ಕನ್ನಡ ವೇದಿಕೆ ಹಾಗೂ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ಮೈಸೂರು,ಜು.23(ಎಂಟಿವೈ)– ಸಣ್ಣ–ಪುಟ್ಟ ವ್ಯಾಪಾರಿಗಳ ಜಿಎಸ್‌ಟಿ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ನೀಡುತ್ತಿರುವುದನ್ನು ಖಂಡಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಮೈಸೂರು ಕನ್ನಡ ವೇದಿಕೆ ಹಾಗೂ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

**ಮೈಸೂರು ಕನ್ನಡ ವೇದಿಕೆ:** ಸ್ವಾವಲಂಬಿಯಾಗಿ ಬದುಕುತ್ತಿರುವ ಬೀದಿಬದಿ, ಸಣ್ಣ ವ್ಯಾಪಾರಿಗಳನ್ನು ಬೀದಿ ಪಾಲು ಮಾಡಲು ಹೊರಟಿರುವ ಸರ್ಕಾರದ ಕ್ರಮ ಖಂಡನೀಯ. ಡಿಜಿಟಲ್ ಹೆಸರಿನಲ್ಲಿ ವ್ಯಾಪಾರಿಗಳ ನಂಬಿಸಿ ಈಗ ಏಕಾಏಕಿ ಯಾವ ಮುನ್ಸೂಚನೆ ನೀಡದೆ ಸಂಕಷ್ಟಕ್ಕೆ ಸಿಲುಕುವಂತೆ ಮಾಡಲಾಗಿದೆ. ಸಣ್ಣ–ಪುಟ್ಟ ವ್ಯಾಪಾರಿಗಳು ಜಿಎಸ್‌ಟಿ ಬಗ್ಗೆ ಧ್ವನಿಯೆತ್ತಿದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ತೊಂದರೆಗೀಡಾಗುವ ಸಾಧ್ಯತೆ ಇದೆ ಎಂದು ಕಿಡಿಕಾರಿದರು.

ಸರ್ಕಾರದ ಆರ್ಥಿಕ ನೀತಿ ಬದಲಾಗದಿದ್ದರೆ ಸಣ್ಣ–ಪುಟ್ಟ ವ್ಯಾಪಾರಿ (ಹೂವು, ಹಾಲಿನ ವ್ಯಾಪಾರಿಗಳು, ಕುಟುಂಬಗಳು) ಬೀದಿ ಪಾಲಾಗುವುದರಲ್ಲಿ ಅನುಮಾನವಿಲ್ಲ. ಸರ್ಕಾರ ಕೂಡಲೆ ಎಚ್ಚೆತ್ತು, ವ್ಯಾಪಾರಿಗಳು ಹಾಗೂ ತೆರಿಗೆ ಅಧಿಕಾರಿಗಳ ಸಮನ್ವಯ ಸಭೆಯನ್ನು ನಡೆಸುವುದರ ಮೂಲಕ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕಿದೆ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಗುರುಬಸಪ್ಪ, ಬೋಗಾದಿ ಸಿದ್ದೇಗೌಡ, ಗೋಪಿ ಪ್ಯಾಲೇಸ್ ಬಾಬು, ಹರೀಶ್, ಮಹದೇವಸ್ವಾಮಿ, ಸಿದ್ದಪ್ಪ ಎಲ್‌ಐಸಿ, ಗೋವಿಂದರಾಜು, ಸ್ವಾಮಿ, ಚಿನ್ನಪ್ಪ, ಶಿವಗೌಡ, ಪ್ರೇಮ ಮಾಲಿನಿ, ಪುಷ್ಪಲತಾ, ರಮೇಶ್, ಸ್ವಾಮಿ ಗೈಡ್, ಮಾದಪ್ಪ ಇನ್ನಿತರರು ಪಾಲ್ಗೊಂಡಿದ್ದರು.

**ಕರ್ನಾಟಕ ಸೇನಾಪಡೆ:** ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಬೊಕ್ಕಸ ಬರಿದಾಗಿದೆ. ಅದನ್ನು ತುಂಬಿಸಿಕೊಳ್ಳುವುದಕ್ಕಾಗಿ ಸಣ್ಣ ವ್ಯಾಪಾರಿಗಳ ಮೇಲೆ ಜಿಎಸ್‌ಟಿ ಗದಾ ಪ್ರಹಾರಕ್ಕೆ ಮುಂದಾಗಿದೆ. ಸರ್ಕಾರ ಗ್ಯಾರಂಟಿ ಯೋಜನೆಗಾಗಿ ಅಮಾಯಕ ಸಣ್ಣ ವ್ಯಾಪಾರಿಗಳ ಸಂಕಷ್ಟಕ್ಕೀಡು ಮಾಡಲಾಗುತ್ತಿದೆ. ಕೂಡಲೆ ಸಣ್ಣ ವ್ಯಾಪಾರಿಗಳಿಗೆ ನೀಡಿರುವ ನೋಟಿಸ್ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮುಖಂಡರಾದ ಪ್ರಭುಶಂಕರ, ಗೋಲ್ಡನ್ ಸುರೇಶ್, ಸಿಂಧುವಳ್ಳಿ ಶಿವಕುಮಾರ್, ಸುಬ್ಬೇಗೌಡ, ಬಸವರಾಜು, ಹೊನ್ನೇಗೌಡ, ಕೃಷ್ಣೇಗೌಡ, ಬೋಗಾದಿ ಸಿದ್ದೇಗೌಡ, ನೇಹಾ, ಡಾ. ಶಾಂತರಾಜೇ ಅರಸ್, ಆನಂದ್‌ಗೌಡ, ಭಾಗ್ಯಮ್ಮ ಹನುಮಂತಯ್ಯ, ತಾಯೂರು ಗಣೇಶ್, ಪ್ರದೀಪ್, ಪದ್ಮ, ರಾಧಾಕೃಷ್ಣ, ಎಳನೀರು ರಾಮಣ್ಣ, ರಘು ಅರಸ್, ಇನ್ನಿತರರು ಪಾಲ್ಗೊಂಡಿದ್ದರು.

## ಬಸವರಾಜು ನಿಧನ



ಮಲ್ಕುಂಡಿ, ಜು.23– ಇಲ್ಲಿಗೆ ಸಮೀಪದ ಎಂ.ಕೊಂಗಳ್ಳಿ ಗ್ರಾಮದ ನಿವಾಸಿ, ಡ್ರೈವರ್ ಬಸವರಾಜು(38) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಶಂಕರ್, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜವರೇಗೌಡ ಇತರರು ಸಂತಾಪ ಸೂಚಿಸಿದ್ದಾರೆ.


ಚಾಮರಾಜ ವಿಧಾನಸಭಾ ಕ್ಷೇತ್ರದ
ಶಾಸಕರಾದ ಸನ್ಮಾನ್ಯ ಶ್ರೀ
ಕೆ. ಹರೀಶ್‌ಗೌಡ
ಅವರಿಗೆ
ಜನ್ಮದಿನದ ಶುಭಾಶಯಗಳು
ಭಾಸ್ಕರ್ ಸಿ
ಯುವ ಮುಖಂಡರು
ವಿನ್ಯಾಸ
ಮೊ: 74 1115 1112


ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರು
ಜನನೆಚ್ಚಿನ ನಾಯಕರಾದ
ಸನ್ಮಾನ್ಯ ಶ್ರೀ
ಕೆ.ಹರೀಶ್‌ಗೌಡರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಚಂದ್ರು ಎನ್. ಪ್ರಧಾನ ಕಾರ್ಯದರ್ಶಿ
ಚಾಮರಾಜ ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಸಮಿತಿ
ವಿನ್ಯಾಸ
ಮೊ: 74 1115 1112

# ಫಲ ಕೊಡದ ಹುಲಿ ಸೆರೆ ಕಾರ್ಯಾಚರಣೆ



ಮಡಿಕೇರಿ,ಜು.23–ದಕ್ಷಿಣ ಕೊಡಗಿನಲ್ಲಿ ಜಾನುವಾರುಗಳ ಮೇಲೆ ದಾಳಿ ನಡೆಸಿದ ಹುಲಿ ಸೆರೆಗೆ ಕಳೆದ 10 ದಿನಗಳಿಂದ ಕಾರ್ಯಾಚರಣೆ ನಡೆಸಲಾಗುತ್ತಿದ್ದರೂ ನಿರೀಕ್ಷಿತ ಫಲ ದೊರಕಿಲ್ಲ.

ಪೊನ್ನಂಪೇಟೆ ಅರಣ್ಯ ವಲಯದ ತಾವಳಗೇರಿ, ಬೆಳ್ಳೂರು, ಹೈಸೊಡ್ಲೂರು, ಬಿ.ಶೆಟ್ಟಿಗೇರಿ ಹಾಗೂ ಇನ್ನಿತರ ಗ್ರಾಮಗಳಲ್ಲಿ ಹುಲಿ ದಾಳಿ ಮಾಡಿ ಜಾನುವಾರುಗಳನ್ನು ಕೊಲ್ಲುತ್ತಿದ್ದ ಹಿನ್ನೆಲೆಯಲ್ಲಿ 10 ದಿನಗಳಿಂದ ಸಾಕಾನೆಗಳನ್ನು ಬಳಸಿಕೊಂಡು ಜಾನುವಾರು ಭಕ್ಷಕ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಆದರೆ ಈ ವ್ಯಾಪ್ತಿಯಲ್ಲಿ ಕಾಫಿ ತೋಟ ಹೆಚ್ಚಾಗಿರುವುದರಿಂದ ಆನೆಗಳನ್ನು ಬಳಸಿ ಕಾರ್ಯಾಚರಣೆ ಮಾಡುವುದು ಅರಣ್ಯ ಇಲಾಖೆಗೆ ಕಷ್ಟವಾಗಿ ಪರಿಣಮಿಸಿದೆ. ಆನೆಗಳು ತೋಟಗಳನ್ನು ಪ್ರವೇಶಿಸಿದ ಸಂದರ್ಭ ಕಾಫಿ ತೋಟಗಳಿಗೂ ಹಾನಿಯಾಗುವ ಹಿನ್ನೆಲೆಯಲ್ಲಿ ಇದೀಗ ಸಾಕಾನೆಗಳನ್ನು ಮರಳಿ ಶಿಬಿರಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ.

ಕೆಲ ದಿನಗಳ ಹಿಂದೆ ಹೈಸೊಡ್ಲೂರು ಗ್ರಾಮದಲ್ಲಿ ಹಸುವಿನ ಮೇಲೆ ಹುಲಿ ದಾಳಿ ಮಾಡಿದ್ದಾಗ ಅಲ್ಲಿನ ಮರದ ಮೇಲೆ ಅಟ್ಟಣಿಗೆ ಅಳವಡಿಸಿ ವೈದ್ಯಾಧಿಕಾರಿಗಳು ಹಾಗೂ ಶಾರ್ಪ್ ಶೂಟರ್‌ಗಳ ಸಹಿತ ಹುಲಿ ಸೆರೆಗೆ ತಂತ್ರಗಾರಿಕೆ ನಡೆಸಲಾಗಿತ್ತು. ಆದರೆ ಹುಲಿಯ ಯಾವುದೇ ಚಲನವಲನಗಳು ಅಲ್ಲಿ ಕಂಡುಬರಲಿಲ್ಲ ಹಾಗೂ ಸಾರ್ವಜನಿಕರು ಹುಲಿಯನ್ನು ನೋಡಿದ ಬಗ್ಗೆ ಯಾವುದೇ ಮಾಹಿತಿ ದೊರೆಯಲಿಲ್ಲ. ಸಾರ್ವಜನಿಕರು ಹುಲಿ ದಾಳಿ ನಡೆಸಿದ ಸ್ಥಳದಲ್ಲಿ ಸೇರದೆ ಕಾರ್ಯಾಚರಣೆಗೆ ಸಹಕರಿಸುವಂತೆ ತಿತಿಮತಿ ಉಪವಿಭಾಗ ಸಹಾಯಕ ಸಂರಕ್ಷಣಾಧಿಕಾರಿ ಕೆ.ಪಿ.ಗೋಪಾಲ್ ಮನವಿ ಮಾಡಿದರು. ಹುಲಿಯ ಚಲನವಲನ ಅಥವಾ ಆ ಹೆಜ್ಜೆ ಗುರುತುಗಳು ಪತ್ತೆಯಾದಲ್ಲಿ ವಲಯ ಅರಣ್ಯ ಅಧಿಕಾರಿಗೆ ಮಾಹಿತಿ ನೀಡಿದಲ್ಲಿ ಶಾರ್ಪ್ ಶೂಟರ್ ಹಾಗೂ ವೈದ್ಯಾಧಿಕಾರಿಗಳನ್ನು ಕರೆಸಿ ಜಾಗದಲ್ಲಿ ಅಟ್ಟಣಿಗೆ ಅಳವಡಿಸಿ ಹುಲಿಯನ್ನು ಸೆರೆ ಹಿಡಿಯಲು ಕ್ರಮ ಕೈಗೊಳ್ಳುತ್ತೇವೆ ಎಂದರು.

ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಬಿ.ಎಂ.ಶಂಕರ್, ಉಪ ವಲಯ ಅರಣ್ಯಾಧಿಕಾರಿಗಳಾದ ನಾಗೇಶ್, ಸಂದೇಶ್, ಶ್ರೀಧರ್, ದಿವಾಕರ್, ರಕ್ಷಿತ್ ಭರತ್, ತಿತಿಮತಿ ಹಾಗೂ ವಿರಾಜಪೇಟೆ ಇಟಿಎಫ್, ಎಸ್‌ಟಿಎಫ್ ಸಿಬ್ಬಂದಿ ಪೊನ್ನಂಪೇಟೆ, ವಿರಾಜಪೇಟೆ ಆರ್‌ಆರ್‌ಟಿ ಸಿಬ್ಬಂದಿ, ಅರಣ್ಯ ರಕ್ಷಕರು, ವೀಕ್ಷಕರು, ಭೀಮ ಆನೆಯ ಮಾವುತ ಗುಂಡಣ್ಣ, ಮಹೇಂದ್ರ ಆನೆಯ ಮಾವುತ ಮಲ್ಲಿಕಾರ್ಜುನ ಹಾಗೂ ಕಾವಾಡಿಗಳು ಹಾಜರಿದ್ದರು.

## ಇಂದು ಭಾಗಮಂಡಲದಲ್ಲಿ ಪೊಲಿಂಕಾನ ಉತ್ಸವ

ಮಡಿಕೇರಿ ಜು.23– ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ರೂಢಿ ಸಂಪ್ರದಾಯದಂತೆ ಆಷಾಢ ಕೃಷ್ಣ ಪಕ್ಷದ ಅಮಾವಾಸ್ಯೆಯಂದು ಜುಲೈ 24ರ ಮಧ್ಯಾಹ್ನ 12 ಗಂಟೆಗೆ ಮಹಾಪೂಜೆಯ ನಂತರ ಶ್ರದ್ಧಾಭಕ್ತಿಯಿಂದ ಪೊಲಿಂಕಾನ ಉತ್ಸವ ನಡೆಯಲಿದೆ. ಸಾರ್ವಜನಿಕ ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ ಪೊಲಿಂಕಾನ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್.ಜಿ.ಚಂದ್ರಶೇಖರ್ ತಿಳಿಸಿದ್ದಾರೆ.

## ಇಂದಿನಿಂದ ಎರಡು ದಿನಗಳ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಪ್ರವಾಸ



ಚಾಮರಾಜನಗರ,ಜು.23–ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಜು.24, 25ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಜು.24ರ ಮಧ್ಯಾಹ್ನ 1 ಗಂಟೆಗೆ ಕೊಳ್ಳೇಗಾಲಕ್ಕೆ ಆಗಮಿಸುವ ಅಧ್ಯಕ್ಷರು ತಾಲೂಕು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡುವರು. 2.30 ಗಂಟೆಗೆ ಜೀರಿಗೆ ಗದ್ದೆಯ ಆಶ್ರಮ ಶಾಲೆಗೆ ಭೇಟಿ ನೀಡುವರು. 3.30 ಗಂಟೆಗೆ ಹನೂರು ತಾಲೂಕಿನ ನಲ್ಲಿಕತ್ತರಿ ಹಾಡಿಗೆ ಭೇಟಿ ನೀಡಿ, ಸೋಲಿಗರ ಸಮಸ್ಯೆಗಳನ್ನು ಆಲಿಸುವರು. ರಾತ್ರಿ ವನ್ನಮೇಟಿ ಎಸ್ಟೇಟ್‌ನಲ್ಲಿ ವಾಸ್ತವ್ಯ ಹೂಡುವರು. ಜು.25ರ ಬೆಳಗ್ಗೆ 7 ಗಂಟೆಗೆ ಪಿ.ಜಿ.ಪಾಳ್ಯ ಲೊಕ್ಕನಹಳ್ಳಿಯ ವೈಲ್ಡ್ ಸಫಾರಿ ವೀಕ್ಷಿಸುವರು. 10.30 ಗಂಟೆಗೆ ಹನೂರು ತಾಲೂಕಿನ ಆರ್.ಎಸ್.ದೊಡ್ಡಿಯ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ಪತ್ರಕರ್ತರ ಸಂಘ ಹಮ್ಮಿಕೊಂಡಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 12 ಗಂಟೆಗೆ ಹನೂರಿನ ಡಾ.ಅಂಬೇಡ್ಕರ್ ಭವನದಲ್ಲಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿ, 2 ಗಂಟೆಗೆ ಹನೂರು ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡುವರು. ಸಂಜೆ 4 ಗಂಟೆಗೆ ಬೆಂಗಳೂರಿಗೆ ತೆರಳುವರು.

## ಬೃಹತ್ ಕಾಳಿಂಗಸರ್ಪ ರಕ್ಷಿಸಿದ ಸ್ನೇಕ್ ಪ್ರಜ್ವಲ್



ಮಡಿಕೇರಿ,ಜು.23– ನಾಪೋಕ್ಲು ಬಳಿಯ ನೆಲಜಿ ಗ್ರಾಮದ ಗದ್ದೆಯಲ್ಲಿ ಕಾಣಿಸಿಕೊಂಡ ಬೃಹತ್ ಗಾತ್ರದ ಕಾಳಿಂಗ ಸರ್ಪವನ್ನು ಮೂರ್ನಾಡಿನ ಉರಗ ತಜ್ಞ ಸ್ನೇಕ್ ಪ್ರಜ್ವಲ್ ರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಬಲ್ಲಮಾವಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲಜಿ ಗ್ರಾಮದ ನಿವಾಸಿ ಅಪ್ಪುಮಣಿಯಂಡ ರಘು ಸುಬ್ಬಯ್ಯ ಎಂಬುವರ ಗದ್ದೆಯಲ್ಲಿ 10 ಅಡಿ ಉದ್ದದ ಬೃಹತ್ ಗಾತ್ರದ ಕಾಳಿಂಗಸರ್ಪ ಕಂಡುಬಂದಿದೆ.

ಸರ್ಪವನ್ನು ಕಂಡು ಭಯಭೀತರಾದ ಮನೆ ಮಂದಿ ಕೂಡಲೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಬಳಿಕ ಮೂರ್ನಾಡಿನ ಉರಗ ತಜ್ಞ ಸ್ನೇಕ್ ಪ್ರಜ್ವಲ್ ಸ್ಥಳಕ್ಕೆ ಆಗಮಿಸಿ ಕಾಳಿಂಗಸರ್ಪವನ್ನು ಸೆರೆ ಹಿಡಿದು ರಕ್ಷಣೆ ಮಾಡಿದ್ದಾರೆ. ಬಳಿಕ ಸುರಕ್ಷಿತವಾಗಿ ಮಾಕುಟ್ಟ ರಕ್ಷಿತಾರಣ್ಯಕ್ಕೆ ಬಿಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂದರ್ಭ ಭಾಗಮಂಡಲ ಉಪವಲಯ ಅರಣ್ಯ ಇಲಾಖೆ ಅಧಿಕಾರಿ ಕಾಳೆಗೌಡ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

## ಮಟಕೆರೆಯಲ್ಲಿ ಆರೋಗ್ಯ ತಪಾಸಣಾ ಶಿಬಿರ

**ನೂರಾರು ಮಂದಿಗೆ ಬಿಪಿ, ಶುಗರ್, ಕಣ್ಣಿನ ಪರೀಕ್ಷೆ, ಹೃದಯ ತಪಾಸಣೆ**



ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿದರು.

**ಸರಗೂರು:** ತಾಲೂಕಿನ ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಹಾರ್ಟ್ ಸಂಸ್ಥೆ, ಮೈಸೂರು, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಹೆಚ್.ಡಿ.ಕೋಟೆ, ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾಮ ಪಂಚಾಯಿತಿ ಬಿ.ಮಟಕೆರೆ, ಅವಾಂಟ್ ಆಸ್ಪತ್ರೆ ಮೈಸೂರು, ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಶಿಬಿರದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ಸರಗೂರು ತಾಲೂಕಿನಲ್ಲಿ ಕಾಡಂಚಿನ ಗ್ರಾಮ ಬಿ ಮಟಕೆರೆ ಈ ಭಾಗದಲ್ಲಿ ಗಿರಿಜನರು, ರೈತರು, ಕೂಲಿ ಕಾರ್ಮಿಕರು, ಹೆಚ್ಚಾಗಿದ್ದು ಇವರಿಗೆ ಅಗತ್ಯ ಇರುವ ಸೇವೆಗಳಾದ ಹೃದಯ ಸಂಬಂಧಿ ಮತ್ತು ಶ್ವಾಸಕೋಶ ಸಮಸ್ಯೆಗಳ ತಪಾಸಣೆ ನಡೆಸಿ ಪ್ರಾಥಮಿಕ ಹಂತದಲ್ಲಿ ಗುರುತಿಸಿ ಚಿಕಿತ್ಸೆ ನೀಡಲಾಗುತ್ತದೆ ಎಂದರು.

ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ.ಚಂದ್ರಶೇಖರ್, ಮೈಸೂರು ಅವಾಂಟ್ ಬಿಕೆಜಿ ಆಸ್ಪತ್ರೆಯ ಡಾ.ಶಶಾಂಕ್, ಹಾರ್ಟ್ ಸಂಸ್ಥೆಯ ಸಂಯೋಜಕ ಶಿವಲಿಂಗ, ಗ್ರಾಮ ಪಂಚಾಯಿತಿ ಅಧ್ಯಕ್ಷ ದೇವದಾಸ್ ಮಾತನಾಡಿದರು.

ಶಿಬಿರದಲ್ಲಿ 80 ಜನರಿಗೆ ಸಕ್ಕರೆ ಕಾಯಿಲೆ ಮತ್ತು ಬಿ.ಪಿ. ಪರೀಕ್ಷೆ, 52 ಜನರಿಗೆ ಕಣ್ಣಿನ ಪರೀಕ್ಷೆ, 11 ಜನರಿಗೆ ಪೊರೆ ಇದ್ದು ಇವರನ್ನು ಶಸ್ತ್ರಚಿಕಿತ್ಸೆಗೆ ಸೂಚಿಸಲಾಯಿತು. 80 ಜನರನ್ನು ಹೃದಯ ರೋಗ ತಜ್ಞರು ತಪಾಸಣೆ ನಡೆಸಿದರು. 20 ರೋಗಿಗಳಿಗೆ ಹೃದಯ ತೊಂದರೆ, ಸ್ಪೈನ್ ತೊಂದರೆ, ಮಹಿಳೆಯರ ಸಮಸ್ಯೆ, ಮೂಳೆ ತೊಂದರೆ ಇರುವವರನ್ನು ಹೆಚ್ಚಿನ ಚಿಕಿತ್ಸೆಗಳಿಗೆ ಸಲಹೆ ನೀಡಲಾಯಿತು.


ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯ ಆರೋಗ್ಯ ಶಿಕ್ಷಣಾಧಿಕಾರಿ ಶರಣಪ್ಪ, ಅರ್ಚನಾ, ಆಶಾ ಮೆಂಟರ್ ರೇಖಾ, ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮುದಾಯ ಆರೋಗ್ಯ ಅಧಿಕಾರಿ ಜಲಜ, ಅನಿತಾ, ಗ್ರೂಪ್ ಡಿ ರಾಜೇಶ್, ಮೈಸೂರಿನ ಅವಾಂಟ್ ಬಿಕೆಜಿ ಆಸ್ಪತ್ರೆಯ ಶಮಂತ್, ಪ್ರಶಾಂತ್, ಮತ್ತು ತಂಡ ಹಾಗೂ ಎ.ಎಸ್.ಜಿ. ಕಣ್ಣಿನ ಆಸ್ಪತ್ರೆಯ ಮಹೇಶ್ ಮತ್ತು ತಂಡದವರು ಆಶಾ ಕಾರ್ಯಕರ್ತರು ಸಾರ್ವಜನಿಕರು ಇದ್ದರು.

## ಇಂದು ಅನುಭಾವ ಪರಂಪರೆ–ತಾತ್ವಿಕ ಜಿಜ್ಞಾಸೆ ವಿಚಾರ ಸಂಕಿರಣ

ಚಾಮರಾಜನಗರ, ಜು. 23–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಮತ್ತು ರಂಗವಾಹಿನಿ ಸಹಯೋಗದೊಂದಿಗೆ 'ಅನುಭಾವ ಪರಂಪರೆ–ತಾತ್ವಿಕ ಜಿಜ್ಞಾಸೆ' ಕುರಿತ ವಿಚಾರ ಸಂಕಿರಣವನ್ನು ಜುಲೈ 24ರ ಬೆಳಗ್ಗೆ 10 ಗಂಟೆಗೆ ನಗರದ ಜೆ.ಎಸ್.ಎಸ್ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಉದ್ಘಾಟಿಸುವರು. ಸಂಸ್ಕೃತಿ ಚಿಂತಕ ಪ್ರೊ. ಬಿ.ಎಸ್. ಜಯದೇವ ಅಧ್ಯಕ್ಷತೆ ವಹಿಸುವರು. ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ಮುಖ್ಯ ಮಾತನಾಡುವರು. ಜೆ.ಎಸ್.ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಎನ್. ಮಹದೇವ ಸ್ವಾಮಿ, ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ್ ಆರ್. ನಂಜುಂಡಯ್ಯ ಉಪಸ್ಥಿತರಿರುವರು.

## ಮಾನಸಿಕ ಅಸ್ವಸ್ಥ ನಾಪತ್ತೆ



ಚಾಮರಾಜನಗರ, ಜು. 23–ಪುರುಷೋತ್ತಮ್ ಅಲಿಯಾಸ್ ಪುನೀತ್ ಎಂಬ ಮಾನಸಿಕ ಅಸ್ವಸ್ಥ ಕುದೇರು ಗ್ರಾಮದಿಂದ ಕಾಣೆಯಾಗಿದ್ದಾರೆ. 33 ವರ್ಷದ ಪುರುಷೋತ್ತಮ್ 5.2 ಅಡಿ ಎತ್ತರ, ತೆಳ್ಳನೆ ಶರೀರ, ಕೋಲುಮುಖ, ಕಪ್ಪು ಮೈ ಬಣ್ಣ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಕಪ್ಪು ಬಣ್ಣದ ಟಿ–ಶರ್ಟ್ ಜೊತೆ ಬಿಳಿ ಬಣ್ಣದ ಶರ್ಟ್, ಕ್ರೀಂ ಕಲರ್ ಪ್ಯಾಂಟ್ ಧರಿಸಿದ್ದರು.

## ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: ಓರ್ವ ಸಾವು, ಮತ್ತಿಬ್ಬರಿಗೆ ಗಾಯ

**ಬೈಲಕುಪ್ಪೆ:** ಕಾರೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಗುತ್ತಿಗೆದಾರರೊಬ್ಬರು ಸಾವನ್ನಪ್ಪಿ, ಮತ್ತಿಬ್ಬರು ಗಾಯಗೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಮಂತನಹಳ್ಳಿ ಬಳಿ ಸಂಭವಿಸಿದೆ. ಬೈಲಕುಪ್ಪೆಯ ನಿವಾಸಿ ಗುತ್ತಿಗೆದಾರ ಅರುಣ (38) ಮೃತಪಟ್ಟಿದ್ದು, ಮತ್ತೊಬ್ಬ ಅರುಣ ಮತ್ತು ರವಿ ಅವರುಗಳು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ರಾತ್ರಿ ಅರುಣ ಸ್ನೇಹಿತರೊಂದಿಗೆ ಬೈಲಕೊಪ್ಪದತ್ತ ತಮ್ಮ ಕಾರಿನಲ್ಲಿ ಆಗಮಿಸುತ್ತಿದ್ದ ಸಂದರ್ಭದಲ್ಲಿ ಕಾರು ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ಅರುಣ ಸ್ಥಳದಲ್ಲಿ ಮೃತರಾದರೆ, ಕಾರಿನಲ್ಲಿದ್ದ ಮತ್ತೋರ್ವ ಅರುಣ ಹಾಗೂ ರವಿ ಎಂಬವರಿಗೆ ಗಾಯಗಳಾಗಿದೆ. ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ

# ಯುವ ರೈತರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ ಮೂಲಕ ಉದ್ಯೋಗ ಸೃಷ್ಟಿಸಬಹುದು



ಮಂಡ್ಯ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಮಾತನಾಡಿದರು.

ಮಂಡ್ಯ, ಜು.23– ಉದ್ಯೋಗ ಹುಡುಕುತ್ತಿರುವ ಯುವ ರೈತರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆಯನ್ನು ಅಳವಡಿಸಿಕೊಂಡು ತಾವೇ ಖುದ್ದು ಉದ್ಯೋಗ ಸೃಷ್ಟಿಸಬಹುದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಹಾರ ಸಂಸ್ಕರಣಾ ಸಚಿವಾಲಯ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಪ್ರಧಾನ ಮಂತ್ರಿಗಳು ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ" ಅರಿವು ಮೂಡಿಸುವ ಕಾರ್ಯಾಗಾರವನ್ನು ಗಾಣದಿಂದ ಎಣ್ಣೆ ತೆಗೆಯುವ ಮೂಲಕ ವಿನೂತನವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ಬಿಟ್ಟರೆ ಉಳಿದವರೆಲ್ಲರೂ ಜಮೀನು ಹೊಂದಿದ್ದಾರೆ. ನಿಮ್ಮ ಬಳಿ ಇರುವ ಜಮೀನಿನಲ್ಲಿ 1 ಎಕರೆ ಜಾಗದಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿಯನ್ನು ಪಡೆಯಬಹುದು.

ಸರ್ಕಾರ 6000 ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದೆ. ಪಿ.ಎಮ್.ಎಫ್.ಎಮ್.ಇ. ಯೋಜನೆಯಡಿ 15 ಲಕ್ಷದವರೆಗೂ ಸಹಾಯಧನ ಪಡೆಯಬಹುದು. ಕೇಂದ್ರ ಸರ್ಕಾರ 6 ಲಕ್ಷ ಮತ್ತು ರಾಜ್ಯ ಸರ್ಕಾರ 9 ಲಕ್ಷ ರೂ. ಸಬ್ಸಿಡಿ ರೂಪದಲ್ಲಿ ನೀಡಲಾಗುತ್ತದೆ ಎಂದು ಹೇಳಿದರು.

ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯಡಿ ಸಾಲ ಹಾಗೂ ಸಬ್ಸಿಡಿ ನೀಡುವಲ್ಲಿ ಜಿಲ್ಲೆ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದೆ. ವಂಶಪಾರಂಪರ್ಯವಾಗಿ ಮಾಡಿಕೊಂಡು ಬಂದಿರುವ ಕೃಷಿ ಪದ್ಧತಿ ಜೊತೆಗೆ ಕನಿಷ್ಠ ಒಂದು ಎಕರೆಯಲ್ಲಾದರು ಕೃಷಿ ವಿಜ್ಞಾನಿಗಳು ಹಾಗೂ ಕೃಷಿ ಅಧಿಕಾರಿ ಸಲಹೆ ಪಡೆದು ಸಮಗ್ರ ಕೃಷಿ ಬೆಳೆದು ನೋಡಿ, ಕಡಿಮೆ ವೆಚ್ಚದಲ್ಲಿ ಅಧಿಕ ಇಳುವರಿ ತೆಗೆಯಬಹುದು ಎಂದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ, ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ನಮಗೆ ಆಹಾರ ಸಂಸ್ಕರಣಾ ಉದ್ದಿಮೆ ಹೊಸದಲ್ಲ. ನಮ್ಮ ಪೂರ್ವಜರು ಇದನ್ನು ಮಾಡುತ್ತಿದ್ದರು. ಆದರೆ ಕಾಲಾಂತರದಿಂದಾಗಿ ಆಹಾರ ಸಂಸ್ಕರಣೆ ಕುರಿತಾಗಿ ನಮ್ಮ ಪೀಳಿಗೆ ಆಸಕ್ತಿ ಕಳೆದುಕೊಂಡಿದೆ ಎಂದು ಹೇಳಿದರು.

ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿದರು. ಕೆಫೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್, ಮೈಶುಗರ್ ಸಕ್ಕರೆ ಕಂಪನಿಯ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಡಾ.ಕುಮಾರ. ರಾಜ್ಯ ಕೃಷಿ ಸಮಾಜದ ಅಧ್ಯಕ್ಷ ಮಂಜುನಾಥ್‌ಗೌಡ, ರಾಜ್ಯ ರೈತ ಉತ್ಪಾದಕ ಸಂಸ್ಥೆಗಳು ಸಹಕಾರ ನಿಯಮಿತದ ಆಡಳಿತ ಮಂಡಳಿ ನಿರ್ದೇಶಕ ರಾಜೇಶ್, ಬೆಲ್ಲದ ನಾಡು ರೈತ ಉತ್ಪಾದಕ ಕಂಪನಿಗಳು ಒಕ್ಕೂಟದ ಅಧ್ಯಕ್ಷ ಕಾಸರವಾಡಿ ಮಹಾದೇವ್ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

## ಜು.26, ಪಿ.ಪಟ್ಟಣದಲ್ಲಿ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ

ಪಿರಿಯಾಪಟ್ಟಣ, ಜು.23– ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ನಾಡಪ್ರಭು ಕೆಂಪೇಗೌಡರ ಸಂಸ್ಮರಣೋತ್ಸವ ಮತ್ತು ಪ್ರಗತಿಪರ ರೈತರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜು.26ರಂದು ಪಟ್ಟಣದ ಡಿ.ದೇವರಾಜ ಅರಸು ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ತಿಳಿಸಿದರು.

ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಒಕ್ಕಲಿಗ ಯುವ ಬ್ರಿಗೇಡ್ ಪ್ರತಿಯೊಬ್ಬರಿಗೂ ಅನ್ನ, ಅಕ್ಷರ ಮತ್ತು ಅವಕಾಶ ಕಲ್ಪಿಸುವ ಅನೇಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ರೈತರಿಗೆ, ಯುವ ಜನತೆಗೆ ಮತ್ತು ಮಹಿಳೆಯರಿಗೆ ಬೆನ್ನೆಲುಬಾಗಿ ನಿಂತಿದೆ. ಸಾಕಷ್ಟು ಶಾಲೆಗಳನ್ನು ದತ್ತು ಪಡೆದು ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸ ನೀಡಿ ಉನ್ನತ ಅಧಿಕಾರಿಗಳಾಗಿಸುವ ನಿಟ್ಟಿನಲ್ಲಿ ಶಿಕ್ಷಣಕ್ಕೆ ಒತ್ತು ನೀಡಿದ್ದೇವೆ. ಇದಕ್ಕಾಗಿ ಸ್ಪರ್ಧಾತ್ಮಕ ತರಬೇತಿ ಕೂಡ ನೀಡುತ್ತಿದ್ದೇವೆ. ಈ ಕಾರಣಕ್ಕಾಗಿ ರಾಜ್ಯಾದ್ಯಂತ ವಿವಿಧ ಭಾಗಗಳಲ್ಲಿ ಉದ್ಯೋಗ ಮೇಳ, ಶಿಕ್ಷಣ ಮೇಳ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನೀಡಿ ಪ್ರತಿಯೊಬ್ಬರಲ್ಲಿಯೂ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ತುಮಕೂರಿನ ಕುಂಚಿಟಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ಹನುಮಂತನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಡಿಸಿಎಂ ಡಾ.ಅಶ್ವಥ್ ನಾರಾಯಣ್ ಉದ್ಘಾಟಿಸಲಿದ್ದಾರೆ. ಬೆಂಗಳೂರು ಕೃಷಿ ವಿವಿ ಉಪಕುಲಪತಿ ಡಾ. ಸುರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

## ನೇಮಕ



**ಮೈಸೂರು:** ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಡಾ ಪ್ರೇಮ ಪಿ ವೈ ಕೆ ಮೋಳೆ ಅವರನ್ನು ಜನಪರ ಸಾಹಿತ್ಯ ಪರಿಷತ್ತಿಗೆ ರಾಜ್ಯ ನಿರ್ದೇಶಕರನ್ನಾಗಿ ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ ಚಿಕ್ಕಲ್ಲೂರು ನೇಮಿಸಿದ್ದಾರೆ.

## ನಿವೃತ್ತ ಯೋಧ ಶ್ರೀನಿವಾಸ್ ನಿಧನ



ಪಾಂಡವಪುರ, ಜು.23– ಸಿಆರ್‌ಪಿಎಫ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಪಟ್ಟಣದ ನಿವಾಸಿ ಶ್ರೀನಿವಾಸ್ (53) ಮಂಗಳವಾರ ಸಂಜೆ ನಿಧನ ಹೊಂದಿದರು.

1991ರಲ್ಲಿ ಸಿ.ಆರ್.ಪಿ.ಎಫ್.ನಲ್ಲಿ ಸೇವೆಗೆ ಸೇರಿದ್ದ ಅವರು 2012ರಲ್ಲಿ ನಿವೃತ್ತಿ ಪಡೆದು ಪಟ್ಟಣದಲ್ಲೇ ವಾಸವಿದ್ದರು. ಇತ್ತೀಚೆಗೆ ಅನಾರೋಗ್ಯಕ್ಕೆ ಒಳಗಾಗಿದ್ದ ಅವರು ಕೊನೆಯುಸಿರೆಳೆದಿದ್ದಾರೆ. ಮೃತರು ಪತ್ನಿ ಸುಮಿತ್ರ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಪಟ್ಟಣ ರುದ್ರಭೂಮಿಯಲ್ಲಿ ಜರುಗಿತು. ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ತಹಸಿಲ್ದಾರ್ ಸಂತೋಷ್, ಸಿಆರ್‌ಪಿಎಫ್ ಅಧಿಕಾರಿಗಳು ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

## ಗುಂಡಿಗೆ ಬಿದ್ದ ಕಾಡಾನೆ ಪ್ರಯಾಸದಿಂದ ಮೇಲೆದ್ದು ತೋಟದೊಳಗೆ ಪರಾರಿ



ಮಡಿಕೇರಿ,ಜು.23–ಆಹಾರ ಅರಸಿಕೊಂಡು ಕಾಡಿನಿಂದ ನಾಡಿಗೆ ಬಂದಿದ್ದ ಕಾಡಾನೆಯೊಂದು ಶೌಚಾಲಯದ ಗುಂಡಿಗೆ ಬಿದ್ದು ಮೇಲೇಳಲಾಗದೆ ಪರದಾಡಿದ ಘಟನೆ ನಾಪೋಕ್ಲು ಹೋಬಳಿಯ ಕರಡ ಗ್ರಾಮದಲ್ಲಿ ನಡೆದಿದೆ.

ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡ ಗ್ರಾಮದ ಕೀಮಲೆ ಕಾಡು ಎಂಬಲ್ಲಿ ಮುಂಜಾನೆ ಕಾಡಾನೆ ಗುಂಪು ಗ್ರಾಮದ ಪಟ್ರಪಂಡ ಜಗದೀಶ್ ಅಪ್ಪಯ್ಯ ಮಾಲೀಕತ್ವದ ಕಾಫಿ ತೋಟಕ್ಕೆ ಬಂದಿವೆ. ಅಲ್ಲಿ ಆಹಾರ ಅರಸಿಕೊಂಡು ಸಂಚರಿಸುತ್ತಿದ್ದ ಸಂದರ್ಭ ಕಾಡಾನೆ ಪಕ್ಕದಲ್ಲಿದ್ದ ಹೋಂ ಸ್ಟೇ ಸಮೀಪ ಶೌಚಾಲಯದ ಗುಂಡಿಯೊಳಗೆ ಬಿದ್ದಿದೆ. ಘೀಳಿಡುವುದನ್ನು ಕೇಳಿ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಗುಂಡಿಗೆ ಬಿದ್ದ ಕಾಡಾನೆಯನ್ನು ಸಮೀಪದಲ್ಲಿದ್ದ ಮತ್ತೊಂದು ಆನೆ ಮೇಲೆತ್ತಲು ಶತ ಪ್ರಯತ್ನ ನಡೆಸಿದರೂ ಸಫಲವಾಗಲಿಲ್ಲ. ಬಳಿಕ ಸಾಕಷ್ಟು ಕಸರತ್ತು ನಡೆಸಿದ ಕಾಡಾನೆ ಕಷ್ಟಪಟ್ಟು ಗುಂಡಿಯಿಂದ ಮೇಲೆ ಬಂದು ಕಾಫಿ ತೋಟದ ಒಳಗೆ ಮರೆಯಾಗಿದೆ. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಧಾವಿಸುವ ವೇಳೆಗೆ ಕಾಡಾನೆ ಗುಂಡಿಯಿಂದ ಮೇಲೆದ್ದು ತೋಟದೊಳಗೆ ಕಾಲ್ಕಿತ್ತಿದೆ. ನಂತರ ಅರಣ್ಯ ಇಲಾಖೆ ಸಿಬ್ಬಂದಿ ಗುಂಪಿನಿಂದ ಬೇರ್ಪಟ್ಟಿದ್ದ ಆನೆಗಳನ್ನು ಒಂದೇ ಗುಂಪಿಗೆ ಸೇರಿಸುವಲ್ಲಿ ಸಫಲರಾದರು. ಕಳೆದ ವರ್ಷ ಕಾಡಾನೆಯೊಂದು ಮರಿಗೆ ಈ ಗ್ರಾಮದಲ್ಲೇ ಜನ್ಮ ನೀಡಿತ್ತು. ಪಾಲಂಗಾಲದಲ್ಲಿ ಕಾಡಾನೆ ಬಾವಿಗೆ ಬಿದ್ದು ಸಾವನ್ನಪ್ಪಿತ್ತು. ಆದರೂ ಅರಣ್ಯ ಇಲಾಖೆ ಎಚ್ಚೆತ್ತುಕೊಂಡಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾಡಾನೆಗಳು ನಾಡಿಗೆ, ಕೃಷಿ ಪ್ರದೇಶಗಳಿಗೆ ದಾಳಿ ಇಡದಂತೆ ಅರಣ್ಯ ಇಲಾಖೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳಾದ ಆರ್‌ಎಫ್‌ಒ ಶಿವರಾಂ, ಡಿಆರ್‌ಎಫ್‌ಒ ಶ್ರೀನಿವಾಸ್, ಇಟಿಎಫ್ ಫಾರೆಸ್ಟರ್ ದೇವರಾಜ್, ಆರ್‌ಆರ್‌ಟಿ ಕ್ಯಾಂಪ್ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

## ರೇಖಾ ರಮೇಶ್ ಹುಟ್ಟುಹಬ್ಬ: ಸಾವಿರಾರು ಮಂದಿಗೆ ವಸ್ತ್ರ ವಿತರಣೆ



ಕೊಳ್ಳೇಗಾಲ, ಜು.23–ನಗರಸಭಾಧ್ಯಕ್ಷೆ ಸಿ.ಎನ್.ರೇಖಾ ರಮೇಶ್ ಹುಟ್ಟುಹಬ್ಬಕ್ಕೆ ಹಲವಾರು ಗಣ್ಯರು ಶುಭ ಹಾರೈಸಿದರು.


ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಹುಟ್ಟುಹಬ್ಬ ಸಮಾರಂಭದಲ್ಲಿ 1500ಕ್ಕೂ ಹೆಚ್ಚು ಮಹಿಳೆಯರಿಗೆ ಸೀರೆ ಹಾಗೂ ಪುರುಷರಿಗೆ ಶರ್ಟ್ ಮತ್ತು ಪಂಚೆ ವಿತರಿಸುವ ಮೂಲಕ ಬಹಳ ಅದ್ದೂರಿಯಿಂದ ಆಚರಣೆ ಮಾಡಿಕೊಂಡರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಪತ್ನಿ ಮಂಜುಳಾ ಅಧ್ಯಕ್ಷತೆಯಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಎಸ್.ರಮೇಶ್ ಅವರ ಸಮ್ಮುಖದಲ್ಲಿ ಸಿ.ಎನ್.ರೇಖಾ ರಮೇಶ್ ಕೇಕ್ ಕತ್ತರಿಸುವ ಮೂಲಕ ಜನ್ಮದಿನವನ್ನು ಬಹಳ ಸಡಗರದಿಂದ ಆಚರಿಸಿಕೊಂಡರು.

ಸಿ.ಎನ್.ರೇಖಾ ರಮೇಶ್‌ರವರ ಭೀಮನಗರದ 3ನೇ ವಾರ್ಡ್ ಮತದಾರರು, ಸೇರಿದಂತೆ ಇತರ ವಾರ್ಡ್‌ಗಳ ಜನರು ಹಾಗೂ ತಾಲೂಕಿನ ಟಗರಪುರದಿಂದ ಆಗಮಿಸಿದ್ದ ಸಾವಿರಾರು ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಎಸ್.ರಮೇಶ್ ಮಾತನಾಡಿ, ಭೀಮನಗರದ ಜನರು ನನ್ನನ್ನು ಹಾಗೂ ನನ್ನ ಪತ್ನಿಯನ್ನು ತಲಾ 2 ಬಾರಿ ನಗರಸಭಾ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಆಯ್ಕೆಗೊಳ್ಳಲು ಆಶೀರ್ವದಿಸಿದ್ದೀರಿ. ನಮ್ಮನ್ನು ಅಧಿಕಾರಕ್ಕೆ ತಂದ ಮತದಾರರು ಹಾಗೂ ಜನರನ್ನು ನಾನೆಂದು ಮರೆಯುವುದಿಲ್ಲ ಎಂದರು.

ಮಾಜಿ ಶಾಸಕ ಹರ್ಷವರ್ಧನ್, ಚಾಮುಲ್ ಅಧ್ಯಕ್ಷ ಎಂ.ನಂಜುಂಡಸ್ವಾಮಿ, ಮಾಜಿ ಜಿ.ಪಂ.ಸದಸ್ಯ ಕೊಪ್ಪಾಳಿ ಮಹಾದೇವನಾಯಕ, ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ತಾ.ಪಂ.ಉಪಾಧ್ಯಕ್ಷ ಬಿ.ಬಸವಣ್ಣ, ಕೊಳ್ಳೇಗಾಲದ ಅಂಬೇಡ್ಕರ್ ಪ್ರತಿಮೆ ನಿರ್ಮಾತೃ ಓಲೆ ಮಹಾದೇವ, ಭೀಮನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ಮಾರಕ ಸಂಘದ ಅಧ್ಯಕ್ಷ ಎಸ್.ಆನಂದಮೂರ್ತಿ, ನಗರಸಭಾ ಮಾಜಿ ಅಧ್ಯಕ್ಷ ಜಿ.ಸೆಲ್ವರಾಜ್, ಬಸ್ತೀಪುರ ಶಾಂತರಾಜು, ಹಾಲಿ ಉಪಾಧ್ಯಕ್ಷ ಎ.ಪಿ.ಶಂಕರ್, ಸ್ಥಾಯಿ ಸಮಿತಿ ಅಧ್ಯಕ್ಷ ಜಿ.ಎಂ. ಸುರೇಶ್, ನಗರಸಭಾ ಸದಸ್ಯರಾದ ವಿ.ಧರಣೇಶ್, ಎಸ್. ರಾಘವೇಂದ್ರ, ನಾಮ ನಿರ್ದೇಶನ ಸದಸ್ಯರಾದ ಸ್ವಾಮಿ ನಂಜಪ್ಪ, ಎನ್.ಅನ್ಸರ್ ಬೇಗ್, ನಿವೃತ್ತ ಪೌರಾಯುಕ್ತ ಪರಶಿವಯ್ಯ, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಸಿದ್ದಯ್ಯನಪುರ ಚೆಲುವರಾಜು, ಭೀಮನಗರದ ಯಜಮಾನರು ಸೇರಿದಂತೆ ವಿವಿಧ ಕೋಮಿನ ನೂರಾರು ಮುಖಂಡರು ರೇಖಾ ರಮೇಶ್ ಅವರಿಗೆ ಶುಭಾಶಯ ಕೋರಿದರು.

# ಕಾನೂನಿನ ಅರಿವಿರದಿದ್ದರೆ ಹೋರಾಟಗಾರನಾಗಲು ಸಾಧ್ಯವಿಲ್ಲ



ಕರ್ನಾಟಕ ಭೂಷಣ ಪ್ರಶಸ್ತಿ ವಿಜೇತ ಡಾ.ಆಲಗೂಡು ಚಂದ್ರಶೇಖರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಟಿ.ನರಸೀಪುರ, ಜು.23– ಸಂಘಟನೆ ಮತ್ತು ಹೋರಾಟ ನಮ್ಮ ಜೀವನದ ಹಂಗು ತೊರೆದು ಮಾಡುವಂತಹ ಕೆಲಸಗಳು. ಕಾನೂನಿನ ಅರಿವಿಲ್ಲದಿದ್ದರೆ ಹೋರಾಟಗಾರನಾಗಲು ಸಾಧ್ಯವಿಲ್ಲವೆಂದು ಕರ್ನಾಟಕ ಭೂಷಣ ಪ್ರಶಸ್ತಿ ವಿಜೇತ ಡಾ.ಆಲಗೂಡು ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಜೆಡಿಎಸ್‌ನ ಹಿರಿಯ ಮುಖಂಡ ಸೋಸಲೆ ಶಿವಕುಮಾರ್ ಬಡ್ದು ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಹೋರಾಟ ಎಂಬುದನ್ನು ಬಾಬಾ ಸಾಹೇಬರು ನಮಗೆ ತೋರಿಸಿಕೊಟ್ಟಿದ್ದಾರೆ ಎಂದರು.

ಹೋರಾಟದಲ್ಲಿ ಭಾಗವಹಿಸುವಾಗ ಸಂಪೂರ್ಣವಾಗಿ ಅದರ ಹಿನ್ನೆಲೆ ಅರಿತು ರೂಪುರೇಷೆಗಳನ್ನು ಸಿದ್ಧಪಡಿಸಿಕೊಂಡು ಭಾಗಿಯಾಗಬೇಕು. ಅಂಬೇಡ್ಕರ್ ಅವರು ಹೋರಾಟ ಮಾಡುವಾಗ ಹೋರಾಟಗಾರರ ನಡೆ, ನುಡಿ ಹೇಗಿರಬೇಕೆಂದು ತಿಳಿಸಿದ್ದಾರೆ. ಇಂದಿನ ಕಾಲ ಮಾನ ಘಟ್ಟದಲ್ಲಿ ಯಾವುದೇ ರಂಗದಲ್ಲೂ ಜಾತಿ ತಳುಕು ಹೋರಾಟದ ದಿಕ್ಕನ್ನೇ ಬದಲಾಯಿಸುತ್ತಿದೆ ಎಂದು ಬೇಸರಿಸಿದರು.

ಹಣಬಲ, ಜನಬಲ ಇರುವವರು ಅವರಿಗೆ ಅನ್ಯಾಯವಾದಾಗ ಹೋರಾಟಗಾರರ ಬಳಿ ಬರುವುದಿಲ್ಲ. ಅವರು ದೊಡ್ಡ ಮಟ್ಟದಲ್ಲೇ ಬಗೆಹರಿಸಿಕೊಳ್ಳುತ್ತಾರೆ. ಆದರೆ ನಮ್ಮ ಬಳಿ ಬರುವವರು ಅಸಹಾಯಕರು, ಏನೂ ಇಲ್ಲದವರು ಇಂತಹವರ ಮೇಲೆಯೇ ಉಳ್ಳವರ ದಬ್ಬಾಳಿಕೆ ನಡೆಯುವುದು. ಅಂತಹ ಸಂದರ್ಭದಲ್ಲಿ ಹೋರಾಟಗಾರರು ವಿರೋಧಿಗಳ ಯಾವುದೇ ಆಮಿಷಗಳಿಗೆ ಒಳಗಾಗದೆ ನೊಂದು, ಬೆಂದವರ ಪರವಾಗಿ ನಿಂತು ಹೋರಾಟ ಮಾಡಿ ನ್ಯಾಯ ಕಲ್ಪಿಸಬೇಕು ಎಂದರು.

ಐಪಿಸಿ, ಸಿಆರ್‌ಪಿಸಿ ಹಾಗೂ ಕೆಸಿಎಸ್‌ಆರ್ ನಿಯಮಗಳನ್ನು ತಿಳಿದುಕೊಳ್ಳುವುದು ಹೋರಾಟಗಾರರಿಗೆ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಮೊದಲು ನಾವು ಕಾನೂನನ್ನು ತಿಳಿದುಕೊಂಡಾಗ ಮಾತ್ರ ರಾಜಕಾರಣಿಗಳು, ಅಧಿಕಾರಿಗಳು, ಪೊಲೀಸರೊಂದಿಗೆ ಯಾವುದೇ ಭಯವಿಲ್ಲದೇ ಮಾತನಾಡಿ ನಮ್ಮ ಹಕ್ಕನ್ನು ಕೇಳಬಹುದೆಂದರು.

ಜೆಡಿಎಸ್‌ನ ಹಿರಿಯ ಮುಖಂಡ ಸೋಶಿಯಲ್ ಶಿವಕುಮಾರ್ ಬಡ್ದು ಮಾತನಾಡಿ, ಚಂದ್ರಶೇಖರ್ ಅವರು ತಾಲೂಕು ಮಟ್ಟದಿಂದ ತಮ್ಮ ಹೋರಾಟವನ್ನು ಆರಂಭಿಸಿ ಈಗ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ತಮ್ಮ ಹೋರಾಟದ ದಾರಿಯನ್ನು ವಿಸ್ತರಿಸಿದ್ದಾರೆ. ಅವರು ಜಾತಿರಹಿತವಾಗಿ ಎಲ್ಲಾ ವರ್ಗದ ಶೋಷಿತರಿಗೆ ಹಾಗೂ ಸಾರ್ವಜನಿಕವಾಗಿ ಅನ್ಯಾಯವಾದಾಗ ಹೋರಾಟದ ರೂಪುರೇಷೆಗಳನ್ನು ರೂಪಿಸಿ ಅದಕ್ಕೆ ನ್ಯಾಯ ಕೊಡಿಸುವವರೆಗೂ ಬಿಡದೆ ಹೋರಾಟ ಮಾಡಿದ್ದರ ಫಲ ಹಲವಾರು ಸಂಘ ಸಂಸ್ಥೆಗಳಿಂದ ರಾಜ್ಯ, ಅಂತರರಾಜ್ಯಗಳಿಂದ ಹಲವಾರು ಸೇವಾ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ ಎಂದರು.

ಹಿರಿಯ ಮುಖಂಡರಾದ ಮಾವಿನಹಳ್ಳಿ ಪುಟ್ಟಸ್ವಾಮಿ, ಸೋಸಲೇ ಮಹೇಶ್, ಸ್ವಾಮಿ, ರಾಜಶೇಖರ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

# ಇಂದು ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಉದ್ಯೋಗ ಮೇಳ, ಆರೋಗ್ಯ ಶಿಬಿರ



ಮೈಸೂರು ಜೆ.ಕೆ.ಮೈದಾನದಲ್ಲಿ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಬೃಹತ್ ಉದ್ಯೋಗ ಮೇಳ, ಆರೋಗ್ಯ ಶಿಬಿರಕ್ಕೆ ನಿರ್ಮಿಸಿರುವ ಬೃಹತ್ ವೇದಿಕೆ.

ಮೈಸೂರು, ಜು.23(ಎಂಕೆ)– ಮೈಸೂರಿನ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ ಜೆ.ಕೆ.ಮೈದಾನದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ನಾಳೆ(ಜು.24) ಬೃಹತ್ ಉದ್ಯೋಗ ಮೇಳ ಹಾಗೂ ಬೃಹತ್ ಆರೋಗ್ಯ ಶಿಬಿರ ಆಯೋಜಿಸಲಾಗಿದೆ.

ಚಾಮರಾಜ ವಿಧಾನಸಭಾ ಕ್ಷೇತ್ರದ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಕೆ.ಹರೀಶ್‌ಗೌಡರ ಅಭಿಮಾನಿ ಬಳಗದಿಂದ ಆಯೋಜಿಸಿರುವ ಬೃಹತ್ ಉದ್ಯೋಗ ಮೇಳದಲ್ಲಿ 100ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿವೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಮಾಹಿತಿ ನೀಡಿದರು. ಜೆ.ಕೆ. ಮೈದಾನದಲ್ಲಿ ನಿರ್ಮಿಸಿರುವ ಬೃಹತ್ ವೇದಿಕೆಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಉದ್ಯೋಗಕಾಂಕ್ಷಿ ಯುವಕ–ಯುವತಿಯರಿಗೆ ಇದೊಂದು ಸುವರ್ಣಾವಕಾಶವಾಗಿದ್ದು, 18–35 ವರ್ಷದೊಳಗಿನ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರು ತಮ್ಮ ಶೈಕ್ಷಣಿಕ ದಾಖಲೆಗಳೊಂದಿಗೆ ಬೃಹತ್ ಉದ್ಯೋಗ ಮೇಳದ ಸದುಪಯೋಗಪಡಿಸಿಕೊಳ್ಳುವಂತೆ ಕೋರಿದರು.



ಹಾಗೆಯೇ ಇದೇ ಸ್ಥಳದಲ್ಲಿ 40ಕ್ಕೂ ಹೆಚ್ಚು ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ಉಚಿತ ಬೃಹತ್ ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. ಹೃದ್ರೋಗ ಸಮಸ್ಯೆ, ಮಧುಮೇಹ ಸಮಸ್ಯೆ, ನರರೋಗ ಸಮಸ್ಯೆ, ಮೂತ್ರಪಿಂಡ (ಕಿಡ್ನಿ) ಸಮಸ್ಯೆ, ಲಿವರ್ ತಪಾಸಣೆ, ಕಣ್ಣಿನ ಪರೀಕ್ಷೆ, ದಂತವೈದ್ಯ ಚಿಕಿತ್ಸೆ, ಕಿವಿ, ಮೂಗು, ಗಂಟಲು ಸಮಸ್ಯೆ, ಕೀಲು ಮತ್ತು ಮೂಳೆ ಸಮಸ್ಯೆ, ಪಿತ್ತಜನಕಾಂಗದ ಸಮಸ್ಯೆ, ಗರ್ಭಿಣಿ ಮತ್ತು ಸ್ತ್ರೀರೋಗ ಸಮಸ್ಯೆ, ಚರ್ಮ ರೋಗ ಸಮಸ್ಯೆ, ಮಾನಸಿಕ ರೋಗ ಸಮಸ್ಯೆ, ಮಕ್ಕಳ ಚಿಕಿತ್ಸೆ ಕ್ಯಾನ್ಸರ್ ತಪಾಸಣೆ, ಮೂಳೆ ಸಾಂದ್ರತೆ ತಪಾಸಣೆ ನಡೆಸಲಾಗುವುದು ಎಂದರು.

**ಹೊಲಿಗೆ ಯಂತ್ರ, ತಳ್ಳುವ ಗಾಡಿ, ಆಯುರ್ವೇದ ಗಿಡಗಳ ವಿತರಣೆ:** ಇದೆಲ್ಲದರ ನಡುವೆ ಚಾಮರಾಜ ವಿಧಾನಸಭಾ ಕ್ಷೇತ್ರದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ, ತಳ್ಳುವಗಾಡಿ ಹಾಗೂ ಆಯುರ್ವೇದ ಗಿಡಗಳನ್ನು ವಿತರಿಸಲಾಗುವುದು. ಮೈಸೂರಿನ ಸಾರ್ವಜನಿಕರು ಉದ್ಯೋಗ ಮೇಳ, ಉಚಿತ ಆರೋಗ್ಯ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ್ ರಾಯಪ್ಪ, ಹಿಂದುಳಿದ ವರ್ಗಗಳ ನಗರಾಧ್ಯಕ್ಷ ಎನ್.ಆರ್.ನಾಗೇಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಾದೇಶ್, ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಯೋಗೇಶ್, ಆಶ್ರಯ ಕಮಿಟಿ ಅಧ್ಯಕ್ಷ ಅನಂತ ನಾರಾಯಣ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ಮಾದಿಗರಿಗೆ ಒಳಮೀಸಲಾತಿ ಜಾರಿಯಾಗದಿದ್ದರೆ ರಾಜ್ಯಾದ್ಯಂತ ಅಸಹಕಾರ ಚಳವಳಿ

## ಸಂಸದ ಗೋವಿಂದ ಕಾರಜೋಳ ಎಚ್ಚರಿಕೆ

ಮೈಸೂರು, ಜು.23(ಎಂಟಿವೈ)– ರಾಜ್ಯ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಆಶ್ವಾಸನೆಯಂತೆ ಮಾದಿಗರಿಗೆ ಒಳ ಮೀಸಲಾತಿ ಜಾರಿಗೊಳಿಸಲು ಮೀನಾಮೇಷ ಎಣಿಸುತ್ತಿರುವುದನ್ನು ಖಂಡಿಸಿ, ಆ.1ರಂದು ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿರುವುದಾಗಿ ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿಯ ಭರವಸೆ ನೀಡಿ ಅಧಿಕಾರಕ್ಕೆ ಬಂದಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಇದುವರೆಗೂ ಒಳ ಮೀಸಲಾತಿ ಜಾರಿಗೊಳಿಸಲು ಹಿಂದೇಟು ಹಾಕುತ್ತಿದೆ. ಹಾಗಾಗಿ ಸರ್ಕಾರದ ವಿಳಂಬ ಧೋರಣೆ ಖಂಡಿಸಿ ಆ.1ರಂದು ರಾಜ್ಯದಾದ್ಯಂತ ಮಾದಿಗ ಸಮುದಾಯ ಹೋರಾಟಕ್ಕೆ ಮುಂದಾಗಿದೆ. 2005ರಲ್ಲಿ ಆಂಧ್ರ ಸರ್ಕಾರ ಒಳ ಮೀಸಲಾತಿ ಜಾರಿಗೆ ತಂದಿತ್ತು. ನಂತರ ಆಯಾ ರಾಜ್ಯಗಳು ಒಳ ಮೀಸಲಾತಿಯನ್ನು ಕಾಲಕ್ಕೆ ತಕ್ಕಂತೆ ಜಾರಿ ಮಾಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಆದರೂ, ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೆ ಮುಂದಾಗಿಲ್ಲ. ಈ ಕಾರಣಕ್ಕೆ ಹೋರಾಟ ನಡೆಸಲಾಗುತ್ತಿದೆ. ನಂತರದ ದಿನಗಳಲ್ಲಿ ಮಾದಿಗರ ಒಳ ಮೀಸಲಾತಿಗಾಗಿ ರಾಜ್ಯದಾದ್ಯಂತ ಅಸಹಕಾರ ಚಳವಳಿ ಆರಂಭಿಸಲಾಗುವುದು ಎಂದು ಹೇಳಿದರು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೂರು ತಿಂಗಳ ಒಳಗೆ ಒಳ ಮೀಸಲಾತಿ ಜಾರಿಗೊಳಿಸದೇ ಇದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವೆ ಎಂದಿದ್ದರು. ಈಗ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ನಮ್ಮೊಂದಿಗೆ ಚಳವಳಿಯಲ್ಲಿ ಪಾಲ್ಗೊಳ್ಳಬೇಕು. ಒಳ ಮೀಸಲಾತಿ ಜಾರಿಗೆ ಮೀನಾಮೇಷ ಎಣಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ನಮ್ಮದು ನುಡಿದಂತೆ ನಡೆದುಕೊಳ್ಳುವ ಸರ್ಕಾರ' ಎಂದು ಹೇಗೆ ಹೇಳುತ್ತಾರೆ? ಎಂದು ಪ್ರಶ್ನಿಸಿದ ಅವರು ಒಳ ಮೀಸಲಾತಿ ಲಂಬಾಣಿ, ಬೋವಿ, ಕೊರಮ, ಕೊರಚ ಸಮುದಾಯಗಳ ಮೀಸಲಾತಿಗೆ ಯಾವುದೇ ತೊಡಕಿಲ್ಲ ಎಂದು ಗೋವಿಂದ ಕಾರಜೋಳ ಹೇಳಿದರು.

ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅನೇಕ ಬಾರಿ ಹಿಂದುಳಿದ, ಶೋಷಿತ ವರ್ಗಗಳ ನೇತಾರ ಎಂದು ಕರೆಯಿಸಿಕೊಳ್ಳುತ್ತಾರೆ. ಚುನಾವಣೆ ಸಂದರ್ಭದಲ್ಲಿ ಮಾದಿಗರಿಗೆ ಒಳ ಮೀಸಲಾತಿ ಭರವಸೆ ನೀಡಿದ್ದರು. ಆದರೆ ಇವರಾಗಲೀ, ಇವರ ಸಂಪುಟದ ಇತರರಾಗಲೀ ಯಾರೂ ಒಳ ಮೀಸಲಾತಿ ಬಗ್ಗೆ ಮಾತನಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಆ.1ರಂದು ರಾಜ್ಯದಾದ್ಯಂತ ನಡೆಯುವ ಪ್ರತಿಭಟನೆಗೆ ಸರ್ಕಾರ ಮನ್ನಣೆ ಕೊಡದಿದ್ದರೆ, ಆ.16ರ ನಂತರ ಉಗ್ರವಾದ ಅಸಹಕಾರ ಚಳವಳಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಕಚೇರಿಗಳನ್ನು ಬಂದ್ ಮಾಡಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲರಾದ ದಾಸಯ್ಯ, ಎಸ್.ಅರುಣ್ ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ರಮೇಶ್, ಮಾದಿಗ ಸಮುದಾಯದ ಮುಖಂಡರಾದ ಅರಕಲಗೂಡು ನಾಗೇಂದ್ರ, ಮಧು, ಧರ್ಮರಾಜ್, ಕಿರಣ್, ವಿಷ್ಣು ಇನ್ನಿತರರು ಉಪಸ್ಥಿತರಿದ್ದರು.

# ನಿವೇಶನ ಸಂಬಂಧ ಮಾಜಿ ಕಾರ್ಪೊರೇಟರ್ ಕಿರುಕುಳ ಆರೋಪ

ಮೈಸೂರು, ಜು.23(ಎಂಟಿವೈ)– ನಿವೇಶನವೊಂದನ್ನು ನ್ಯಾಯಬದ್ಧವಾಗಿ ಖರೀದಿಸಿದ್ದರೂ, ಪಾಲಿಕೆ ಮಾಜಿ ಸದಸ್ಯರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ವಿರುದ್ಧ ಅಪಪ್ರಚಾರ ಮಾಡುವುದರೊಂದಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ದೇವರಾಜ ಮೊಹಲ್ಲಾದ ರಾಮಣ್ಣ ಸ್ಟ್ರೀಟ್ ನಿವಾಸಿ ಮೋಡರಾಮ್ ದೂರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಾಜ ಮೊಹಲ್ಲಾದ ರಾಮಣ್ಣ ಬೀದಿಯಲ್ಲಿ ಪಿತ್ರಾರ್ಜಿತವಾಗಿ ಬಂದಿರುವ ನಿವೇಶನವೊಂದನ್ನು ಅದರ ಮಾಲೀಕರಾದ ಡಾ.ಟಿ.ಮಂಜುನಾಥ್ ಹಾಗೂ ಅವರ ಮಗಳು ಎಂ.ಕಾವ್ಯ ಅವರಿಂದ ಸೆ.9, 2014ರಂದು ನಿಯಮಾನುಸಾರ ಖರೀದಿಸಿದ್ದೇನೆ. ಆದರೆ, ಈ ನಿವೇಶನ ಸಂಬಂಧ ವೆಂಕಟಸುಬ್ಬದಾಸ್ ಹಾಗೂ ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ ಅವರು ನಮ್ಮ ವಿರುದ್ಧ ಸುಳ್ಳು ಆರೋಪ ಮಾಡುತ್ತಾ, ಬೆದರಿಕೆ ಹಾಕುತ್ತಿದ್ದಾರೆ. ನಾವು ಖರೀದಿಸಿರುವ ನಿವೇಶನಕ್ಕೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯ, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನಲ್ಲೂ ನಮ್ಮ ಪರ ಆದೇಶ ಬಂದಿದೆ. ಆದರೂ, ಕಿರುಕುಳ ನೀಡಿ, ತೇಜೋವಧೆ ಮಾಡಲಾಗುತ್ತಿದೆ ಎಂದು ದೂರಿದರು.

ಈ ಸಂಬಂಧ ಪ್ರತಿಕ್ರಿಯೆಗಾಗಿ ಪ್ರಶಾಂತ್‌ಗೌಡರನ್ನ 'ಮೈಸೂರು ಮಿತ್ರ' ಸಂಪರ್ಕಿಸಲು ಯತ್ನಿಸಲಾಯಿತಾದರೂ ಸಂಪರ್ಕ ಸಾಧ್ಯವಾಗಲಿಲ್ಲ.

# ಕೇಂದ್ರ ಸರ್ಕಾರದಿಂದ ಇಡಿ ದುರ್ಬಳಕೆ ಬಟಾಬಯಲು

## ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್

ಮೈಸೂರು, ಜು. 23– ರಾಜ್ಯಸಭೆಯ ಸಭಾಪತಿಗಳೂ ಆದ ದೇಶದ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ದಿಢೀರ್ ರಾಜೀನಾಮೆ ಹಾಗೂ ಮುಡಾ ನಿವೇಶನ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಅವರಿಗೆ ನೀಡಲಾದ ಇಡಿ ಸಮನ್ಸ್ ಸುಪ್ರೀಂ ಕೋರ್ಟ್ ರದ್ದುಪಡಿಸಿದ ಪ್ರಕರಣಗಳಿಂದ ಬಿಜೆಪಿ ಸರ್ಕಾರದ ಹುನ್ನಾರ ರಾಷ್ಟ್ರಮಟ್ಟದಲ್ಲಿ ಸಾಬೀತಾಗಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್ ಹೇಳಿದರು.

ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸರಿಯಾದ ಪಾಠ ಕಲಿಸಿದೆ.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಿಲುಕಿಸಲು ಕೇಂದ್ರ ಸರ್ಕಾರ ಬಹಳವಾಗಿ ಪ್ರಯತ್ನಿಸಿರುವುದು ಜನಜನಿತ. ಜಾರಿ ನಿರ್ದೇಶನಾಲಯ (ಇಡಿ) ದಂತಹ ಸಾಂವಿಧಾನಿಕ ಸಂಸ್ಥೆಯನ್ನು ಬಿಜೆಪಿ ನಾಯಕರು ದುರ್ಬಳಕೆ ಮಾಡಿಕೊಂಡಿದ್ದರು. ಇಡಿ ಅಧಿಕಾರಿ ವರ್ಗ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ ತನಿಖೆ ಹೆಸರಿನಲ್ಲಿ ದಬ್ಬಾಳಿಕೆ ನಡೆಸಿದೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ನೀಡಿದ್ದ ನೋಟಿಸ್ ಅನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ಇದು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಕ್ರಿಯೆ. ಇದೇ ವೇಳೆ ಮತ್ತೊಂದು ಪ್ರಕರಣಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್ ಸಿಬಿಐ ಅಧಿಕಾರಿಗಳ ವರ್ತನೆಗೆ ಛೀಮಾರಿ ಹಾಕಿದೆ. ಈ ಬೆಳವಣಿಗೆಗಳು ಬಿಜೆಪಿಯ ಅಧಿಕಾರ ದುರ್ಬಳಕೆಯನ್ನು ರಾಷ್ಟ್ರ ಮಟ್ಟದಲ್ಲಿ ಮತ್ತೊಮ್ಮೆ ತೆರೆದಿಟ್ಟಿವೆ. ಜೊತೆಗೆ ಸಿದ್ದರಾಮಯ್ಯ ವಿರುದ್ಧ ಅಧಿಕಾರ ದುರ್ಬಳಕೆ ಆರೋಪ ಮಾಡುತ್ತಿದ್ದ ಬಿಜೆಪಿ ಯವರ ಬಾಯಿಗೂ ಬೀಗ ಬಿದ್ದಿದೆ. ಸರ್ವೋಚ್ಚ ನ್ಯಾಯಾಲಯದ ಇಂತಹ ನ್ಯಾಯ ಪರಿಪಾಲನೆ ನಿಲುವುಗಳು ಪ್ರಜಾಪ್ರಭುತ್ವದ ಉಳಿವಿಗೆ ಮಹತ್ವದ ಕೊಡುಗೆಯೂ ಆಗಿದೆ.



**ಬಿಜೆಪಿ ನಾಯಕರ ಹುನ್ನಾರ:** ಉಪರಾಷ್ಟ್ರಪತಿಯೂ ಆಗಿದ್ದ ರಾಜ್ಯಸಭೆಯ ಸಭಾಪತಿ ಜಗದೀಪ್ ಧನ್‌ಕರ್ ಅವರ ದಿಢೀರ್ ರಾಜೀನಾಮೆ ಹಿಂದೆ ಬಿಜೆಪಿ ನಾಯಕರ ಹುನ್ನಾರವಿರುವುದು ಎದ್ದು ಕಾಣುತ್ತಿದೆ. ಮೇಲ್ನೋಟಕ್ಕೆ ಆರೋಗ್ಯದ ಸಮಸ್ಯೆಯನ್ನು ಧನ್‌ಕರ್ ಮುಂದು ಮಾಡಿದ್ದರಾದರೂ ಒಟ್ಟು ಬೆಳವಣಿಗೆಯ ಹಿಂದೆ ರಾಜಕೀಯ ಲೆಕ್ಕಾಚಾರವಿರುವುದನ್ನು ತಳ್ಳಿ ಹಾಕಲಾಗದು ಎಂದು ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.

# ಅನಿವಾಸಿ ಭಾರತೀಯನ ಮೃತದೇಹ ತರಲು ಸರ್ಕಾರದಿಂದ ಆರ್ಥಿಕ ಸಹಾಯ

ಮಡಿಕೇರಿ, ಜು.23– ಎರಡು ವರ್ಷಗಳಿಂದ ದಕ್ಷಿಣ ಅಮೆರಿಕಾದ ಗಯಾನಾ ದೇಶದ ಶೆರಿಫ್ ಜನರಲ್ ಆಸ್ಪತ್ರೆಯಲ್ಲಿ ಸ್ಟಾಫ್‌ನರ್ಸ್ ಆಗಿದ್ದ ತಾಲ್ಲೂಕಿನ ಮದೆನಾಡು ಗ್ರಾಮದ ನಿವಾಸಿ ಪಿ.ಬಿ.ಗಿರೀಶಬಾಬು ಪಾಲೆ ಅವರ ಮೃತದೇಹ ರಾಜ್ಯಕ್ಕೆ ತರಲು ಮುಖ್ಯಮಂತ್ರಿ 3.60 ಲಕ್ಷರೂ ಆರ್ಥಿಕ ನೆರವು ನೀಡಿದ್ದಾರೆ.

ಪಿ.ಬಿ.ಗಿರೀಶಬಾಬು ಪಾಲೆ ಜು.3ರಂದು ಅನಾರೋಗ್ಯದಿಂದಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ, ಹೃದಯಘಾತದಿಂದ ಜು. 14ರಂದು ಸಾವನ್ನಪ್ಪಿದ್ದಾರೆ. ನಂತರ ಅನಿವಾಸಿ ಭಾರತೀಯ ಸಮಿತಿಯು ಆಸ್ಪತ್ರೆ ಹಾಗೂ ಭಾರತೀಯ ರಾಯಭಾರಿ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪಿ.ಬಿ.ಗಿರೀಶಬಾಬು ಪಾಲೆ ಅವರ ಪಾರ್ಥಿವ ಶರೀರವನ್ನು ಭಾರತಕ್ಕೆ ತರುವ ಕಾರ್ಯವನ್ನು ಪ್ರಾರಂಭಿಸಲಾಯಿತು.

ಪಾರ್ಥಿವ ಶರೀರವನ್ನು ಭಾರತಕ್ಕೆ ತರಲು ಸುಮಾರು ರೂ. 12 ಲಕ್ಷ ಗಳಾಗಬಹುದೆಂದು ರಾಯಭಾರಿ ಕಚೇರಿ ತಿಳಿಸಿದ್ದು, ತಮಗೆ 2 ವರ್ಷದ ಮಗ ನಿದ್ದು ಕುಟುಂಬವು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಸರ್ಕಾರದ ಸಹಾಯಕ್ಕಾಗಿ ಮೃತರ ಪತ್ನಿ ಜಾನಕಿ ಸಿಎಂ ಕಚೇರಿಗೆ ಮನವಿ ಸಲ್ಲಿಸಿದ್ದರು. ಅದರಂತೆ, ಅನಿವಾಸಿ ಭಾರತೀಯ ಸಮಿತಿಯಿಂದ ಪಿ.ಬಿ.ಗಿರೀಶ ಬಾಬು ಅವರ ಮೃತದೇಹವನ್ನು ತರಲು ತಗಲುವ ವೆಚ್ಚವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಧನ ಸಹಾಯ ಮಾಡಲು ಮುಖ್ಯಮಂತ್ರಿ ಅವರಿಗೆ ಕೋರಲಾಗಿತ್ತು.

ಇದಕ್ಕೆ ಸ್ಪಂದಿಸಿದ ಸಿದ್ಧರಾಮಯ್ಯ ಸರ್ಕಾರದ ವತಿಯಿಂದ ರೂ 3,60,000 ಗಳನ್ನು ಮಂಜೂರು ಮಾಡಿರುತ್ತಾರೆ. ಉಳಿಕೆ ಹಣವನ್ನು ಪಿ.ಬಿ.ಗಿರೀಶ ಬಾಬು ಪಾಲೆ ಅವರು ಕೆಲಸ ಮಾಡುತ್ತಿದ್ದ ಶೆರಿಫ್ ಜನರಲ್ ಆಸ್ಪತ್ರೆಯವರು ಭರಿಸುತ್ತಿದ್ದು, ಗಯಾನದಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಹಾಗೂ ನವದೆಹಲಿಯಲ್ಲಿರುವ ನಿವಾಸಿ ಆಯುಕ್ತರು ಮೃತದೇಹವನ್ನು ಭಾರತಕ್ಕೆ ತರಲಾಗುವುದು ಎಂದು ಕರ್ನಾಟಕ ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಎಚ್.ಎಸ್.ಸತೀಶ್ ತಿಳಿಸಿದ್ದಾರೆ.

# ಭಾರತಮಾತೆಯನ್ನು ಪೂಜಿಸುವ ಮಂತ್ರವನ್ನು ಮಕ್ಕಳಿಗೆ ಕಲಿಸಬೇಕು



ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಸಾಹಿತ್ಯಕೂಟದ 5ನೇ ವರ್ಷದ ವಾರ್ಷಿಕೋತ್ಸವ ಹಾಗೂ ಗುರುಪೌರ್ಣಮಿ ಕಾರ್ಯಕ್ರಮದಲ್ಲಿ ನಡೆಯಿತು.

ಮೈಸೂರು,ಜು.23–ಮನೆ ಮನೆಗಳಲ್ಲಿ ತಾಯಿ ಭಾರತ ಮಾತೆಯನ್ನು ಭಜಿಸುವ ಮಂತ್ರವನ್ನು ಮಕ್ಕಳಿಗೆ ಕಲಿಸುವಂತಾಗಬೇಕು ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ಉಪಾಧ್ಯಕ್ಷ ಬಿ.ಕೆ.ಜಗದೀಶ್ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕುವೆಂಪುನಗರ ಸಾಹಿತ್ಯಕೂಟದ ಐದನೇ ವರುಷದ ವಾರ್ಷಿಕೋತ್ಸವ ಹಾಗೂ ಗುರು ಪೌರ್ಣಮಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಅವರು ಈ ವಿಷಯ ತಿಳಿಸಿದರು.

ಗುರು ಪರಂಪರೆಯ ಸಂಸ್ಕೃತಿ ಹೊತ್ತ ನಮ್ಮ ಹಿಂದೂ ದೇಶದಲ್ಲಿ ಮೊದಲಿಗೆ ನಾವು ತಾಯಿ ಭಾರತ ಮಾತೆಗೆ ಕೃತಜ್ಞತೆ ಸಲ್ಲಿಸಬೇಕು, ನಂತರ ಮೂಲಗುರುಗಳಾದ ವ್ಯಾಸ ಮಹರ್ಷಿಗಳನ್ನು ಸ್ಮರಿಸಬೇಕು ಎಂದರು.

ಶತಮಾನಗಳು ಕಳೆದರೂ ಪರಂಪರೆ ಉಳಿಸುವ ಬೆಳೆಸುವ ಜವಾಬ್ದಾರಿ ಪ್ರತೀ ಮನೆಯಲ್ಲಿ ಸರಾಗವಾಗಿ ಮುನ್ನಡೆಯಬೇಕು ಎಂದರು. ಪರಿಷದ್‌ನ ಶ್ರೀಗಂಧ ವಲಯ ಪ್ರಮುಖ್ ಹಾಗೂ ನಿವೃತ್ತ ತಹಸೀಲ್ದಾರ್ ವಿ.ರಂಗನಾಥ್ ಸಾಹಿತ್ಯ ಸಂಸ್ಕೃತಿಗಳ ತವರೂರಾದ ಮೈಸೂರಿನಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಈವರೆವಿಗೆ ಹದಿಮೂರು ಕೂಟಗಳನ್ನು ಕಟ್ಟಿದೆ. ಕುವೆಂಪುನಗರ ಸಾಹಿತ್ಯ ಕೂಟ ಐದನೇ ವರುಷ ಪೂರೈಸಿ ಅನೇಕ ಸಾಹಿತ್ಯ ಚಟುವಟಿಕೆಗಳನ್ನು ಪ್ರತೀ ಮಾಹೆಯೂ ನಡೆಸುತ್ತಾ ಬಂದಿದೆ. ಕೂಟದ ಪ್ರತೀ ಸದಸ್ಯರೂ ಉತ್ಸುಕರಾಗಿ ಪಾಲ್ಗೊಂಡು ತಮ್ಮ ಸಾಹಿತ್ಯ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ರೇಷಿಮೆ ಪತ್ರೆ ಹಿಪ್ಪನೇರಳೆ ಕುರಿತು ಮಾಹಿತಿಯನ್ನು ಶ್ರೀಮತಿ ಹೇಮಮಾಲಾ ಹಂಚಿಕೊಂಡರು.

ಸಮಾರಂಭದಲ್ಲಿ ಕುವೆಂಪುನಗರ ಸಾಹಿತ್ಯ ಕೂಟದ ಸಂಚಾಲಕಿ ಶ್ರೀಮತಿ ಗಾಯತ್ರಿ ಸುಂದರೇಶ್, ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎಸ್.ಸುಬ್ರಹ್ಮಣ್ಯ ಹಾಗೂ ವಿಜಯನಗರ ಕೂಟದ ಸಂಚಾಲಕ ಮೂರ್ತಿ ಉಪಸ್ಥಿತರಿದ್ದರು.

# ಶುಂಠಿಗೆ ಬೆಂಕಿ ರೋಗ: ಸೂಕ್ತ ನಿರ್ವಹಣೆ ಮಾಡದಿದ್ದರೆ ಇಳುವರಿ ಭಾರೀ ಇಳಿಕೆ ಆತಂಕ

## ತಜ್ಞರಿಂದ ಹಲವು ಪರಿಹಾರ ಸಲಹೆ

ಮೈಸೂರು, ಜು. 23–ರಾಜ್ಯದ ಹಲವು ಜಿಲ್ಲೆಗಳಲ್ಲಿ ಶುಂಠಿ ಬೆಳೆಯಲ್ಲಿ ಬೆಂಕಿ ರೋಗ ಕಾಣಿಸಿಕೊಂಡಿದ್ದು, ರೈತರು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದಿದ್ದರೆ ಶೇ.60–70ರಷ್ಟು ಇಳುವರಿ ನಷ್ಟ ಅನುಭವಿಸಬೇಕಾಗುತ್ತದೆ ಎಂದು ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಬಿ.ಎಸ್.ಹರೀಶ್ ತಿಳಿಸಿದರು.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮೈಸೂರು ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು ಕೃಷಿ ತಂತ್ರಜ್ಞರ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಬುಧವಾರ ಮಹಾವಿದ್ಯಾಲಯದ ಆವರಣದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳ ರೈತರಿಗೆ ಶುಂಠಿ ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿಗಳು ಕುರಿತು ಆಯೋಜಿಸಿದ್ದ ರೈತರ ತರಬೇತಿ, ಸಂವಾದ ಹಾಗೂ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶುಂಠಿ ಬೆಳೆಯಲ್ಲಿ ಈಗಾಗಲೇ ಬೆಂಕಿ ರೋಗ ಕಾಣಿಸಿಕೊಂಡಿದ್ದು ರೈತರು ಆತಂಕಪಡುವ ಅಗತ್ಯವಿಲ್ಲ ಸರಿಯಾದ ನಿರ್ವಹಣೆ ಕ್ರಮ ಅನುಸರಿಸಿದರೆ ರೋಗವನ್ನು ನಿಯಂತ್ರಣ ಮಾಡಲು ಸಾಧ್ಯ ಈ ನಿಟ್ಟಿನಲ್ಲಿ ವಿಷಯ ತಜ್ಞರ ಸಲಹೆ ಪಡೆದು ರೋಗ ಬಂದಿರುವ, ಮಳೆ ಹೆಚ್ಚಿರುವ ಪ್ರದೇಶದಲ್ಲಿ 6 ರಿಂದ 7 ದಿನಗಳಿಗೊಮ್ಮೆ ಹಾಗೂ ಮಳೆ ಕಡಿಮೆ ಇರುವ ಪ್ರದೇಶದಲ್ಲಿ 12ರಿಂದ 15 ದಿನಕೊಮ್ಮೆ ಔಷಧ ಸಿಂಪಡಣೆ ಮಾಡಿದರೆ ರೋಗವನ್ನು ಹತೋಟಿಗೆ ತರಲು ಸಾಧ್ಯ. ರೈತರು ಆತಂಕದಿಂದ ಖಾಸಗಿ ಔಷಧ ಅಂಗಡಿಗಳ ಮೊರೆಹೋಗಿ ಒಮ್ಮೆಗೆ ಅವರು ನೀಡುವ ಐದರಿಂದ ಆರು ತರಹದ ಶಿಲೀಂದ್ರನಾಶಕ, ಕೀಟನಾಶಕ, ಹಾರ್ಮೋನ್, ಕಡಲಪಾಚಿ ಮುಂತಾದವುಗಳನ್ನು ಸಿಂಪಡಣೆ ಮಾಡುವುದರಿಂದ ರೋಗ ಹತೋಟಿಗೆ ಬರುವುದಿಲ್ಲ ಬದಲಿಗೆ ರೋಗದ ಹಂತದಲ್ಲಿ ನೀಡಬೇಕಾದ ನಿರ್ದಿಷ್ಟ ಔಷಧವನ್ನು ವಿಷಯ ತಜ್ಞರ ಸಲಹೆ ಮೇರೆಗೆ ನೀಡುವಂತೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಜನಾರ್ಧನ್ ಮಾತನಾಡಿ, ರೈತರು ಬೆಳೆಗಳಲ್ಲಿ ಹೆಚ್ಚು ಆದಾಯಗಳಿಸುವ ಜೊತೆಗೆ ಭೂಮಿಯ ಫಲವತ್ತತೆ ಕಾಪಾಡುವಲ್ಲಿ ಗಮನಹರಿಸಬೇಕು ಎಂದರು.

ಪ್ರಸಕ್ತ ವರ್ಷದಲ್ಲಿ ಶುಂಠಿ ಬೆಳೆಯಲ್ಲಿ ವಾತಾವರಣದ ವೈಪರಿತ್ಯದಿಂದಾಗಿ ರೋಗ ಬಾಧೆಯು ಉಲ್ಬಣವಾಗಿರುವುದನ್ನು ಗಮನಿಸಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯು ತಜ್ಞರ ತಂಡವನ್ನು ರಚಿಸಿ ಕ್ಷೇತ್ರ ವಿಶ್ಲೇಷಣೆಯನ್ನು ಕೈಗೊಂಡಿರುತ್ತಾರೆ. ವಿಶ್ಲೇಷಣೆಯಲ್ಲಿ ವಿಜ್ಞಾನಿಗಳ ತಂಡವು ಗಮನಿಸಿದ ಅಂಶಗಳು ಹಾಗೂ ಸೂಕ್ತ ಪರಿಹಾರಗಳನ್ನು ತಿಳಿಸುವ ಉದ್ದೇಶದಿಂದ ಇಂದಿನ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಇದರ ಉಪಯೋಗವನ್ನು ರೈತರು ಪಡೆದುಕೊಳ್ಳುವಂತೆ ತಿಳಿಸಿದರು.

ಮೈಸೂರು ತಾಲೂಕು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಸಬೀನ ಅಯ್ಯಣ್ಣ ಮಾತನಾಡಿ ಪ್ರಸಕ್ತ 2025–26ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ರೈತರಿಗೆ ದೊರೆಯುವ ಸವಲತ್ತುಗಳು ಹಾಗೂ ಸಹಾಯಧನದ ಮಾಹಿತಿಯನ್ನು ನೀಡಿದರು.

ತಾಂತ್ರಿಕ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಡಾ.ಹರೀಶ್, ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರು ಇವರು ಶುಂಠಿಯಲ್ಲಿ ಪೋಷಕಾಂಶಗಳ ನಿರ್ವಹಣೆಯ ಮಹತ್ವ, ಡಾ.ಕಿರಣ್ ಕುಮಾರ್, ಕೆ.ಸಿ. ಶುಂಠಿ ಕೃಷಿಯಲ್ಲಿ ಸಮಗ್ರ ರೋಗ ನಿರ್ವಹಣೆ, ಡಾ.ರಾಮೇಗೌಡ, ಶುಂಠಿ ಕೃಷಿಯಲ್ಲಿ ಸಮಗ್ರ ಕೀಟ ನಿರ್ವಹಣೆ ಹಾಗೂ ಡಾ.ಮಂಜುನಾಥ್, ಜೈವಿಕ ಗೊಬ್ಬರಗಳ ಮಹತ್ವದ ಕುರಿತು ಮಾಹಿತಿ ನೀಡಿದರು.

ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕದ ಮುಖ್ಯಸ್ಥ ಡಾ.ತನ್ವೀರ್ ಅಹ್ಮದ್, ವಿಷಯ ತಜ್ಞರಾದ ಡಾ.ಅರವಿಂದಕುಮಾರ್, ಡಾ. ಶಿವಕುಮಾರ್, ಡಾ.ಮನುಕುಮಾರ್, ಡಾ.ಚಂದನ್, ಡಾ.ಮಮತಲಕ್ಷ್ಮಿ, ಡಾ. ಸಿದ್ದಪ್ಪ, ಡಾ.ಮುತ್ತುರಾಜು ಇದ್ದರು.

# ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಕಡತ ನಾಪತ್ತೆ

ಮಡಿಕೇರಿ,ಜು.23–ಸೋಮವಾರಪೇಟೆ ಪಟ್ಟಣ ಪಂಚಾಯಿತಿಯಿಂದ ಮಹತ್ವದ ಕಡತವೊಂದು ನಾಪತ್ತೆಯಾಗಿರುವ ಘಟನೆ ಸೋಮವಾರಪೇಟೆ ಪಟ್ಟಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಇಲ್ಲಿನ ಎಂ.ಡಿ. ಬ್ಲಾಕ್‌ನ ಹೊಸ ಬಡಾವಣೆಯಲ್ಲಿ ಪೌರ ಕಾರ್ಮಿಕರಿಗೆ ಮೀಸಲಿಟ್ಟ ಜಾಗದ ನಿವೇಶನ ಅರ್ಜಿದಾರರ ಪಟ್ಟಿಯ ಕಡತವು ಕಚೇರಿಯಿಂದ ನಾಪತ್ತೆಯಾಗಿದ್ದು, ಜು.18ರಂದು ನಡೆದ ಪಟ್ಟಣ ಪಂಚಾಯಿತಿ ತುರ್ತು ಸಭೆಯಲ್ಲಿ ಈ ಕಡತವನ್ನು ಪರಿಶೀಲನೆಗಾಗಿ ತರಲಾಗಿತ್ತು. ಸಭೆಯ ಬಳಿಕ ಕಚೇರಿಯಲ್ಲಿ ಆ ಕಡತ ಇಲ್ಲದಿರುವುದು ಪತ್ತೆಯಾಗಿದೆ. ಈ ಬೆಳವಣಿಗೆಗಳ ನಡುವೆ ಪಂಚಾಯಿತಿ ಅಧ್ಯಕ್ಷರ ಕೊಠಡಿಯಲ್ಲಿ ಸದಸ್ಯರ ಗುಪ್ತ ಸಭೆ ಜರುಗಿತು.

ಮುಖ್ಯಾಧಿಕಾರಿ ಕೊಠಡಿಯಲ್ಲಿನ ಸಿ.ಸಿ ಕ್ಯಾಮೆರಾ ದೃಶ್ಯಾವಳಿಗಳ ಪರಿಶೀಲನೆ ವೇಳೆ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಟರ್‌ಮ್ಯಾನ್ ಹುದ್ದೆಗೆ ಸೇರ್ಪಡೆಯಾಗಿ ನಂತರ ಕಚೇರಿಯಲ್ಲಿ ಇಂಜಿನಿಯರ್ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯೋರ್ವರು ಸೋಮವಾರ ಬೆಳಿಗ್ಗೆ ಕಡತ ತೆಗೆದುಕೊಂಡು ತನ್ನ ಬ್ಯಾಗ್‌ನೊಳಗೆ ಹಾಕಿಕೊಳ್ಳುತ್ತಿರುವ ದೃಶ್ಯಗಳು ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದರಿಂದ ಸ್ಥಳೀಯ ಆಡಳಿತ ವರ್ಗ ಹಾಗೂ ಸದಸ್ಯರು ಇದನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಒತ್ತಾಯಿಸಿದ್ದಾರೆ.

ಕಚೇರಿಯಿಂದ ಕಡತ ನಾಪತ್ತೆಯಾದ ಪ್ರಕರಣವನ್ನು ಸುಮ್ಮನೆ ಬಿಡಲಾಗದು. ಇದು ಸಾರ್ವಜನಿಕ ಆಸ್ತಿಯಾಗಿದ್ದು, ಪೌರ ಕಾರ್ಮಿಕರ ಹಕ್ಕುಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಆದ್ದರಿಂದ ತಪ್ಪಿತಸ್ಥರನ್ನು ತಕ್ಷಣ ಕೆಲಸದಿಂದ ವಜಾಗೊಳಿಸಿ ಪೊಲೀಸ್ ತನಿಖೆ ಮೂಲಕ ಕ್ರಮ ಜರುಗಿಸಬೇಕು ಎಂಬ ಒತ್ತಾಯವನ್ನು ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರು ಮಂಡಿಸಿದ್ದಾರೆ ಎಂದು ತಿಳಿದು ಬಂದಿದೆ.

ಇಂಜಿನಿಯರ್ ಹೇಮಂತ್‌ಕುಮಾರ್, ಮುಖ್ಯ ಅಧಿಕಾರಿ ಪಿ.ಕೆ.ಸತೀಶ್, ಅಧ್ಯಕ್ಷೆ ಜಯಂತಿ ಶಿವಕುಮಾರ್, ಉಪಾಧ್ಯಕ್ಷೆ ಮೋಹಿನಿ, ಸದಸ್ಯರಾದ ಶೀಲಾ ಡಿಸೋಜ, ಜೀವನ್, ಶುಭಕರ್, ಮೃತ್ಯುಂಜಯ, ಮಹೇಶ್, ಸುವರ್ಣ, ಸಂಜೀವ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

# ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನ

ಮೈಸೂರು, ಜು.23– ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಮೈಸೂರು ತಾಲೂಕಿನ ದೂರ, ಮಾರ್ಬಹಳ್ಳಿ ಮತ್ತು ಉದ್ಬೂರು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಮಾಸಿಕ ರೂ.10,000ಗಳ ಗೌರವಧನದ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಸಮರ್ಥ ವಿಕಲಚೇತನ ವ್ಯಕ್ತಿಗಳು ಅರ್ಜಿ ನಮೂನೆಯನ್ನು ಸಂಬಂಧಪಟ್ಟ ತಾಲೂಕು ಪಂಚಾಯಿತಿಯಲ್ಲಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಆ.5ರೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿವಿಧೋದ್ದೇಶ ಪುನರ್ವಸತಿಯ ಕಾರ್ಯಕರ್ತ ಆರ್.ಎಂ.ಸ್ವಾಮಿ ಮೊ. ಸಂ. 6360483829 ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವರ್ತಕರಿಂದ ಹಫ್ತಾ ವಸೂಲಿ ಮಾಡುತ್ತಿರುವ ವ್ಯಕ್ತಿ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಜು.23(ಎಂಕೆ)– ಮೈಸೂರಿನ ಸಂತೆಪೇಟೆ, ಶಿವರಾಂಪೇಟೆ ಹಾಗೂ ಬಂಡಿಪಾಳ್ಯದ ವ್ಯಾಪಾರಿಗಳ ಬಳಿ ಹಫ್ತಾ ಕೇಳಿ ತೊಂದರೆ ನೀಡುತ್ತಿರುವ ರಮೇಶ್ ಕುಮಾರ್ ಮಾಲಿ ಎಂಬಾತನನ್ನು ಮೈಸೂರಿನಿಂದ ಗಡಿಪಾರು ಮಾಡುವಂತೆ ಆಗ್ರಹಿಸಿ ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ನೂರಾರು ಮಂದಿ ವ್ಯಾಪಾರಸ್ಥರಿಂದ ಬುಧವಾರ ಬೃಹತ್ ಪ್ರತಿಭಟನಾ ಸಭೆ ನಡೆಸಲಾಯಿತು.

ನಗರದ ಶಿವರಾಂಪೇಟೆ 1ನೇ ಕ್ರಾಸ್‌ನಲ್ಲಿರುವ ಶ್ರೀ ತ್ರಿಪುರ ಭೈರವಿ ಮಠದ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಜಮಾವಣೆಗೊಂಡ ವ್ಯಾಪಾರಸ್ಥರು, ರಮೇಶ್ ಕುಮಾರ್ ಮಾಲಿ ವಿನಾಕಾರಣ ವ್ಯಾಪಾರಿಗಳ ಹತ್ತಿರ ಹಣ ಕೇಳಿ ಚಿತ್ರ ಹಿಂಸೆ ನೀಡುತ್ತಿದ್ದಾನೆ. ಆತನ ವಿರುದ್ಧ ಈಗಾಗಲೇ ಹಲವು ಪ್ರಕರಣಗಳು ದಾಖಲಾಗಿದ್ದು, ಸಮಾಜ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಆತನನ್ನು ಮೈಸೂರಿನಿಂದ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.




ಮೈಸೂರಿನ ಶಿವರಾಂಪೇಟೆಯಲ್ಲಿ ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ನೂರಾರು ಮಂದಿ ವ್ಯಾಪಾರಸ್ಥರಿಂದ ಬೃಹತ್ ಪ್ರತಿಭಟನಾ ಸಭೆ ನಡೆಸಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಸಂತೇಪೇಟೆ, ಶಿವರಾಂಪೇಟೆಯ ವ್ಯಾಪಾರಸ್ಥರಿಗೆ ತೊಂದರೆ ಕೊಡುತ್ತಾ ಬರುತ್ತಿರುವ ರಮೇಶ್ ಕುಮಾರ್ ಮಾಲಿ ವಿರುದ್ಧ ದೇವರಾಜ, ಕೆ.ಆರ್ ಹಾಗೂ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಆತನಿಂದ ಸಾಕಷ್ಟು ವ್ಯಾಪಾರಸ್ಥರಿಗೆ ತೊಂದರೆಯಾಗಿದೆ ಎಂದು ತಿಳಿಸಿದರು.

ನಿನ್ನೆ(ಮಂಗಳವಾರ) ರಾತ್ರಿ 10.15ರ ಸುಮಾರಿಗೆ ಶಿವರಾಂಪೇಟೆಯಲ್ಲಿರುವ ಬಬುತಾರಾವ್ ಎಂಬುವರ ಮಳಿಗೆಗೆ ತನ್ನ ಮಗ ಚಂದ್ರಪ್ರಕಾಶ್ ಜೊತೆಗೆ ಬಂದಿದ್ದ ರಮೇಶ್ ಕುಮಾರ್ ಮಾಲಿ, ಬಬುತಾರಾಮ್‌ಗೆ ನೀನು ನನಗೆ 1 ಲಕ್ಷ ರೂ.ಕೊಡಬೇಕು. ಇಲ್ಲವಾದರೆ ನಿನ್ನನ್ನು ಮುಗಿಸುವುದಾಗಿ ಬೆದರಿಕೆ ಹಾಕಿದ್ದಾನೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಕೂಡಲೇ ಪೊಲೀಸರು ರಮೇಶ್ ಕುಮಾರ್ ಮಾಲಿ ವಿರುದ್ಧ ಕಾನೂನು ಕ್ರಮ ಜರುಗಿಸಿ, ಆತನನ್ನು ಮೈಸೂರಿನಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಬಳಿಕ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಘು ಅವರಿಗೆ ಮನವಿ ಸಲ್ಲಿಸಲಾಯಿತು. ಸಭೆಯಲ್ಲಿ ಸಂತೇಪೇಟೆ ಮಳಿಗೆದಾರರಾದ ಪ್ರವೀಣ್ ಜೈನ್, ಬಾಬುತ್ ರಾಮ್, ಸ್ವರೂಪ್ ರಾಮ್, ಉಮಾ ರಾಮ್, ವಕ್ತಾರಾಮ್, ಕಾಂತಿಲಾಲ್, ಧನೇಶ್ ಮೆಹ್ತಾ, ಅಮೃತ್ ಪುರೋಹಿತ್, ಮುಡಾರಾಮ್ ಪುರೋಹಿತ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.